Digitized by Arya Samaj Foundation Chennai and eGangotri

# ಸರ್ವಜ್ಞ ಅನುಭವ



ಸಿ. ಜಿ. ಪುರುಷೋತ್ತಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# पुस्तकालय

## गुरुकुल कांगड़ी विश्वविद्यालय हरिद्वार

वर्ग संख्या.........                                   आगत संख्या...........

पुस्तक-विवरण की तिथि नीचे अंकित है। इस तिथि सहित ३०वें दिन तक यह पुस्तक पुस्तकालय में वापिस आ जानी चाहिए अन्यथा ५० पैसे प्रति दिन के हिसाब से विलम्ब दण्ड लगेगा।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸರ್ವಜ್ಞ ವಚನಾನಿ

[ ಸರ್ವಜ್ಞ ವಚನಗಳ ಸಂಸ್ಕೃತ ಪ್ರತಿಕೃತಿ ]

पुस्तकालय
पुस्तकालय
गुरुकुल कांगड़ी विश्वविद्यालय
02887

ಪ್ರೊ. ಸಿ. ಜಿ. ಪುರುಷೋತ್ತಮ
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಮಹಾರಾಜಾಕಾಲೇಜು, ಮೈಸೂರು ವಿ. ವಿ.

ಜಯಮಾರುತಿ ಪ್ರಕಾಶನ
ಡಿ. 26, ವಿನೋಬಾ ರಸ್ತೆ, ಜಯಲಕ್ಷ್ಮೀಪುರಂ
ಮೈಸೂರು – 570012

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jayamaruti Prakashana-4 ( 1992 )

SARVAJNA VACANANI, Sanskrit translation of the vacanas of SARVAJNA by C. G. Purushotham, Professor of Sanskrit (Rtd.) Maharaja's College Mysore, University of Mysore. Published by Jayamaruti Prakashana, D. 26, Vinoba Road, Jayalakshmipuram, Mysore-570012.
Pages : 28+೧೭೬

© Sanskrit Translation : Prof. C. G. Purushothama

**Price: Calico Rs. 35 Ordinary Rs. 25**

ಬೆಲೆ: ಕ್ಯಾಲಿಕೋ ರೂ. 35 ಸಾಧಾರಣ ರೂ. 25

ನಮ್ಮ ಬಗೆಗಿಲ್ಲಾರವಜ್ಞೆಯು* ಹರಡುತಿರುವರೊ ಜನರಲಿ
ಬಲ್ಲವರೇನನ್ನೊ ನಮ್ಮೀ ಯತ್ನವವರಿಗೆ ಸಲ್ಲದು
ನಮ್ಮ ನೆಲೆ ಬೆಲೆಯನ್ನು ಅರಿತವರಿರುವರಿಲ್ಲಿಯೆ; ಬರುವರು
ಕಾಲವೆಂಬುದನಂತವಾಗಿದೆ; ವಿಪುಲವಾಗಿದೆ ಪೃಥ್ವಿಯು

( —ಭವಭೂತಿಯಿಂದ )

* ಅಸೂಯೆ, ತಿರಸ್ಕಾರ, ಅಸಡ್ಡೆ

ರಕ್ಷಾಪುಟ ವಿನ್ಯಾಸ: ಎಚ್. ಎಸ್. ಫಾಟಕ್

**Printed by**
**Samskrita Sahitya Sadana**
**1040, Devaparthiva Road, Chamarajapuram, Mysore-4**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಭೂ ಮಿ ಕೆ

## ಹುಟ್ಟಿ ಬಾ

ಕುರುಚಲು ಗಡ್ಡದ ಯುವಕನೊಬ್ಬ ಸಂಜೆಗತ್ತಲಿನಲ್ಲಿ ಊರಾಚೆಯ ತೋಪಿನತ್ತ ನಡೆದ. ಲೋಕದ ಕಣ್ಣಿಗೆ ಕತ್ತಲಾಗುತ್ತಿದ್ದ ಆ ಸಮಯದಲ್ಲಿ ಆತ ಏನನ್ನು ಹುಡುಕ ಹೊರಟ? ಕೊನೆಗೆ ತೋಪಿನ ಒಂದು ಬದಿಯಲ್ಲಿದ್ದ ಕಟ್ಟೆಯ ಮೇಲೆ ಕುಳಿತು ದಿಗಂತದ ಶೂನ್ಯದತ್ತ ದೃಷ್ಟಿ ಹಾಯಿಸಿದ್ದರೂ ಆತ ಅಂತರ್ಮುಖಿಯಾಗಿ ಕಾಣುತ್ತಿದ್ದ. ಹಾಗೇ ಎಷ್ಟು ಹೊತ್ತು ಕುಳಿತನೋ ಅದರ ಪರಿವೆಯೂ ಅವನಿಗಿಲ್ಲ.

ಇದ್ದಕಿದ್ದಂತೆ ಹತ್ತಿರದ ಜಾಗು ಭೂಮಿಯ ಸ್ಮಶಾನದ ಸಮಾಧಿಯೊಂದರಿಂದ ಕಳದಿಗೆಂಪಿನ ಜ್ವಾಲೆಯೊಂದು ಧಗ್ಗನೆ ಹೊತ್ತಿಕೊಂಡು ಯುವಕನತ್ತ ಮುಂದುವರಿಯಿತು. ಅದರ ವಾಸನೆ, ರಾವಿಗೆ ಎಚ್ಚರಗೊಂಡ ಯುವಕ "ಇದು ಕೊಳ್ಳಿ ದೆವ್ವವೇ!" ಎಂದುಕೊಂಡವನೆ ಮೈ ಬೆವರಿ ಮೇಲೆದ್ದು ಓಡಬೇಕೆನ್ನುವಷ್ಟರಲ್ಲಿ ಆ ಜ್ವಾಲೆ ಮಾನವಾಕಾರ ತಳೆದು ಇವನತ್ತ ದಾಪುಗಾಲಿನಲ್ಲಿ ಧಾವಿಸಿ ಬಂತು. ನಿಸ್ಸಹಾಯಕನಾದ ಯುವಕ ತನ್ನೆಲ್ಲ ಮನೋದಾರ್ಢ್ಯವನ್ನು ಒಗ್ಗೂಡಿಸಿ "ಓಡಿದರೆ ಮತ್ತೆಲ್ಲಿಯ ಕೇಡೋ!" ಎಂದುಕೊಂಡು ನಡುಗುತ್ತಾ ಅವಾಕ್ಕಾಗಿ ಅದನ್ನೇ ದುರದುರನೆ ನೋಡುತ್ತನಿಂತ. ನಾಲ್ಕರ ಜ್ವರ ಕಳೆದು, ತನುದಣಿಯೆ ಸೊಪ್ಪು ತಿಂದು, ಸಂಪೂರ್ಣ ಹಣ್ಣಾಗಿ, ನಿಶ್ಶೇಷವಾಗಿ ಮಲನಿರ್ಮೋಚನ ಮಾಡಿ ಹೊಂಬಣ್ಣದಿಂದ ಪಾರದರ್ಶಕವಾಗಿ ಹೊಳೆಯುವ ರೇಶ್ಮೆ ಹುಳುವಿನಂತಿತ್ತು ಆ ಜ್ವಾಲಾಜ್ವಲಂತ ಮೂರ್ತಿ.

ಧೀರ ಗಂಭೀರ ಶಂಖಧ್ವನಿಯಂತೆ ಮೊಳಗಿತು ಮೂರ್ತಿಯತ್ತಣಿಂದ ಹರಿದ ಮಾನವ ಸದೃಶ ವಾಣಿ "ಯುವಕ, ಹೆದರಿದೆಯಾ?" ಇಲ್ಲವೆಂಬಂತೆ ತಲೆಯಲ್ಲಾಡಿಸಿದ ಮುದುರಿದ ಮಾತಿನ, ಬೆವರಿಳಿಯುತ್ತಿದ್ದ ಮೈಯ ಯುವಕ. "ಹೆದರ ಬೇಡ, ಧೈರ್ಯಂ ಸರ್ವತ್ರ ಸಾಧನಂ; ಇಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾರಿಗಾಗಿ, ಏತಕ್ಕಾಗಿ ನಿರೀಕ್ಷಿಸಿ ಕುಳಿತೆ? ಇದು ಸರ್ವಭೂತಗಳೂ ನಿದ್ರೆ ಗೈಯುವ ಕಾಲವಲ್ಲವೆ! ಯಾ ನಿಶಾ ಸರ್ವಭೂತಾನಾಂ" ಎಂದು ಹೇಳುತ್ತಿದ್ದಂತೆಯೇ ಮೂರ್ತಿಯತ್ತಣಿಂದ ಬೆಳಕಿನ ಸರಳೊಂದು ಜಿಗಿದು ಅವನಿಗೆ ಪರಿವೇಷವಾದಂತಾಗಿ ಅವನ ಮೈಮನಗಳಲ್ಲಿ ವಿದ್ಯುತ್ ಸಂಚಾರವಾದಂತಾಯಿತು. "ನನ್ನನ್ನೇ, ನನ್ನ ಒಳಗನ್ನೇ ಹುಡುಕ ಬಂದೆ" ಎಂದು ಉಸುರಿದ ಯುವಕ. "ಇದು ನಿನ್ನರಿವಿನ ಚರಮಗುರಿ, ನೀನಿನ್ನೂ ಸಹಸ್ರ ಸಹಸ್ರ ಮೆಟ್ಟಲನ್ನೇರಬೇಕಾಗಿದೆ. ನಿನ್ನ ಸತ್ತ್ವ ಪರೀಕ್ಷೆಗಾಗಿ, ನೀನು ಇದಕ್ಕೆ ಅಧಿಕಾರಿಯೇ ಎಂಬುದರ ಮಾಪನಕ್ಕಾಗಿ, ನಿನ್ನಂತಹ ಸಾಧಕನ ಮಾರ್ಗ ದರ್ಶನಕ್ಕಾಗಿ ಇಗೋ, ನಾನಿಲ್ಲಿ ಬಂದಿದ್ದೇನೆ. ಬಹೂನಿ ಮೇ ವ್ಯತೀತಾನಿ ಜನ್ಮಾನಿ, ತವ ಚ, ಇದು ಯಾರ ವಾಣಿ?" 'ಭಗವದ್‌ವಾಣಿ' ಎಂದು ಮೆಲ್ಲನುಸುರಿದ ಯುವಕ. "ಆ ಭಗವದ್ ಭವ್ಯತೆ ಮಾನವ ನ್ಯಾಜಕ್ಕೆ ಒಲಿದು, ನಲಿದು, ಗೆಲಿದುದು ಸ್ಮೃತಿಪಥದಲ್ಲಿದೆಯೆ?" "ಸ್ಮರಣೆ, ಈಗಲೀಗ ಗರಿ ಬಿಚ್ಚಿಕೊಳ್ಳುತ್ತಿದೆ." "ಸಾಧಕನೊಬ್ಬ ಯೋಗಭ್ರಷ್ಟನಾದರೂ ಆತನ ಆ ಯೋಗ ವ್ಯರ್ಥವೇ?" "ಇಲ್ಲ, ಆ ಸಾಧಕ ಪುನಃ ಯೋಗಿಗಳ ಕುಲದಲ್ಲೇ ಹುಟ್ಟಿ ತನ್ನ ಯೋಗಸಾಧನೆಯನ್ನು ಮುಂದುವರಿಸುತ್ತಾನೆ". "ಭರತ ವರ್ಷದ ಪುಣ್ಯಭೂಮಿಯಲ್ಲಿ ಜನ್ಮ ತಳೆದ ನೀನು ಮಹಾಭಾರತದ ಮಕುಟ ಮಣಿ ಗೀತಾಮೃತ ಬಿಂದುವಿನ ರುಚಿಗಂಡವನು, ಎಲ್ಲಿ ಈಗ ಹೇಳು— ಅಂತಹ ಯೋಗಿಶ್ರೇಷ್ಠಕುಲ ಆ ದ್ವಾಪರದಲ್ಲಿ ಯಾವುದು?" "ಅಯ್ಯೋ, ಅದು ಯಾರಿಗೆ ಗೊತ್ತಿಲ್ಲ! ಶ್ರೀ ಕೃಷ್ಣದ್ವೈಪಾಯನ ವ್ಯಾಸಕುಲ!" "ಭೇಷ್, ಯುವಚೇತನ! ಶ್ರೀ ಕೃಷ್ಣ! ದ್ವೈಪಾಯನವ್ಯಾಸ! ಯೋಗೇಶ್ವರ ಶ್ರೀ ಕೃಷ್ಣ ಪರಮಾತ್ಮನು "ಋಷೀಣಾಂ ಅಪಿ ಅಹಂ ವ್ಯಾಸಃ" ಎಂದಿದ್ದಾನೆ. ಯೋಗೇಶ್ವರನನ್ನ ಯೋಗೇಶ್ವರನೊಡನೆ ಹೊಸೆದು ಬೆಸೆದೆ; ಎಲ್ಲಿ ಈಗ ಹೇಳು, ಆ ದಾಶಕನ್ಯಾಸುತನ ಕುಲದ ಯೋಗಭ್ರಷ್ಟ ಯಾರಿರಬಹುದು?" "ಭೀಷ್ಮ." "ಹತ್ತಿರ ಹತ್ತಿರ ನಿಜ, ಆತ ಗಂಗೆಯ ಸುತವವನೆ. ಆದರೆ ನಿಜವಾಗಿ ಯಾರು? ಯೋಚಿಸು". "ಓಹೋ, ಈಗ ಹೊಳೆಯಿತು! ಆತ ದಾಶಕನ್ಯಾಸುತನ ಸುತ." "ಈ ದ್ರಾವಿಡ ಪ್ರಾಣಾಯಾಮವೇಕೆ? ನೆಟ್ಟನುಸುರು. ಅಂದಿನ ಆ ಅರಾಜಕತೆಯ ರಾಜಕೀಯ ತುಮುಲದಲ್ಲಿದ್ದ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಪಂಕದಲ್ಲಿಯ ಪಂಕಜದಂತೆ ಮೆರೆದ ಭವ್ಯಾತ್ಮ ಯಾವುದು ? ಭಾಗವತ ಶ್ರೀ ಮಹಿಮೆ, ತಾನಾಗಿ ಹುಡುಕಿಕೊಂಡು ಹೋಗಿ. ಮುಂದಿಟ್ಟ ಅಮೃತ ಪಾತ್ರೆಯನ್ನು ಶುಟಿಗೇರಿಸಿಕೊಂಡ ಕಿರುಮನೆಯ ಹಿರಿಯ ಚೇತನ ಯಾವುದು ? "ಅದೆ ? ಅದೇ ವಿದುರಶ್ರೀ". "ಕುಂತಿ, ಗಾಂಧಾರಿ, ಧೃತರಾಷ್ಟ್ರರು ದಾವಾಗ್ನಿಯೊಳಗೆ ಬೆರೆತು ಹೋದಾಗ, ಧರ್ಮರಾಜನಿಗೆ ಪಾರದರ್ಶಕ ಮಾನವ ಮೂರ್ತಿಯಾಗಿ ಮೈದೋರಿ ಧರ್ಮೋಪದೇಶಗೈದ ಯೋಗಿರಾಜ, ಜ್ಯೋತಿಷಾಂ ಜ್ಯೋತಿಃ ಅದೇ ಅಲ್ಲವೆ ? ವ್ಯಾಸ ಮಹರ್ಷಿತ್ವ ವನ್ನೂ ಶುಕ ಮಹಾಯೋಗಿತ್ವವನ್ನೂ ಬಂಧಿಸಿ ಬೆಸೆದ ಹಠಯೋಗಿಯೇ ಅವನು. ಲೋಕವಿದೂರ—ವಿ-ದು-ರ !, ಸ ಹಿ ಸರ್ವಜ್ಞಃ "ಅವನೆ ಸರ್ವಜ್ಞ" ಹೀಗೆ ಮೊಳಗಿದ ಆ ಜ್ಯೋತಿಃಪುಂಜ ಮಾನವಾಕೃತಿಯಿಂದ 'ಓಂ' ಕಲಾರೂಪವಾಗಿ ದೂರಸರಿದಂತೆ, ಸಂಕುಚಿಸಿ, ಸಂಕುಚಿಸಿ ಬಿಂದುವಾಗಿ ಮಂದಶಂಖನಾದಗೈಯುತ್ತಾ ಪುನಃ ಅದೇ ಸಮಾಧಿಯಲ್ಲಿ ಲೀನವಾಯಿತು.

ಯುವಕನು ಕಂಡರಿಸಿಕೊಂಡ ಇಂತಹ ಕನಸುಗಳು ದೇವರ ಮಗು, ಸಾಲೆ, ದೇಸಾಲೆ, ದೇವಸಾಲೆ ಸರ್ವಜ್ಞನಿಗೆ ಧಾರ್ವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕು ಮಾಸೂರಿನ ಬಸವರಸನನ್ನೋ, ಮಲ್ಲಪ್ಪನನ್ನೋ, ಮಾಳನನ್ನೋ ಗುಂಡಪ್ಪ ಶಂಕರಭಟ್ಟಗಳನ್ನೋ ಭೂಮಿಗೆ ತಂದ ಬೀಜ ಪ್ರದಾತೃ ತಂದೆ ಗಳನ್ನಾಗಿ ಮಾಡಿವೆ. ಈ ಚಂದ್ರಶೇಖರನ ವರಪುತ್ರನಿಗೆ ಮಲ್ಲಮ್ಮ, ಮಾಳಿ, ಮಾಳವ್ವೆಗಳು ಕ್ಷೇತ್ರಗಳಾಗಿವೆ. ಪನ್ನಗಧರನಾಳು ಪುಷ್ಪದತ್ತ, ಮುಂದೆ ವರರುಚಿ, ಕಡೆಗೆ ಸರ್ವಜ್ಞನಾಗಿ ಮೆರೆದವನು. "ಎಲ್ಲ ಬಲ್ಲವರಿಲ್ಲ ಬಲ್ಲಿದರು ಬಹಳಿಲ್ಲ, ಬಲ್ಲಿದರು ಇದ್ದು ಬಲವಿಲ್ಲ" "ವಿದುರಾ ನ ಸರ್ವಸ್ಯ, ವಿದುರಾ ನ ಬಹವಶ್ಚ, ವಿದುರೇಷು ನ ಹಿ ಬಲಂ" ಎಂಬುದು ಲೌಕಿಕ ಸತ್ಯ; ಕುರುಕ್ಷೇತ್ರಸತ್ಯವೂ ಕೂಡ.

ಸಮುದ್ರ ತರಂಗಗಳು ಮಗುವೊಂದನ್ನು ಹೊತ್ತು ತಂದುವು. ಗಂಗಾ ತರಂಗಗಳ ಮೇಲೆ ಮತ್ತೊಂದು ತೇಲಿ ಬಂತು. ಹೊಳೆಯ ನಡುಗಡ್ಡೆಯಲ್ಲಿ ಮಗದೊಂದು ಮಗು. ಹುಲ್ಲಿನ ಗೊಂತಿ(ಗೊತ್ತು)ನಲ್ಲಿ ಇನ್ನೊಂದು ಕಂದ.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತ್ತಲೆಯ ಮೊತ್ತದಲ್ಲಿ ಮುಗುಗಳ ಮಾಣಿಕ್ಯವೊಂದು. ಚಂದ್ರಶೇಖರನ ವರಪುತ್ರ ಕುಂಬಾರ ಸಾಲೆಯಲ್ಲಿ ಕಣ್ಣುಬಿಟ್ಟನಂತೆ. ಕತೆಗಳು ಹೀಗೆ ಈ ದೇವರ ಮಕ್ಕಳ ಹುಟ್ಟನ್ನು ಹುಟ್ಟಿಸಿವೆ. ಇಂತಹ ಅಣುಗಗಳು ಮಹೋನ್ನತಿಗೇರಿದಾಗ "ಇವ ಯಾರವನು, ಇವ ಯಾರವನು" ಎನ್ನುತ್ತಿದ್ದ ಕೊರಳುಗಳು, ಗೆದ್ದೆತ್ತಿನ ಬಾಲ ಹಿಡಿವವರಂತೆ, "ಇವ ನಮ್ಮವ"ನೆಂದು ಕೊಂಡು ಸಪ್ತಸ್ವರ ಹಾಡಿವೆ. ಕುಂಬಾರಸಾಲೆಯುವನ ಯೌವನ ಹೇಗೆ ಬೆಳೆಯಿತು? ಸಾಧನೆ ಎಲ್ಲಿ? ಹೇಗೆ ಸಿದ್ಧಿಸಿ ಹಣ್ಣಾಯಿತು? ಈ ಹೂವು ಸರ್ವಜ್ಞ ಶ್ರೀಗುರುವಿನ ಅಡಿಯ ಹುಡಿಯಾಯಿತೆ? ಸರ್ವಜ್ಞ ಜಗದಾತ್ಮನ ಮುಡಿ ಏರಿತೆ? ಯಾರು ಬಲ್ಲರು? ಬಯಲಲ್ಲಿ ಹುಟ್ಟಿ, ಬಯಲಲ್ಲಿ ಬೆಳೆದು, ಬಟ್ಟಬಯಲಾಯಿತೆ? ಈ 'ಕಲ್ಲು' ಜಗದ ಭಾವನಾ ತರಂಗಗಳ ಬಿಸಿಯೊತ್ತಡದ ತಾಪದಲ್ಲಿ ಹದಗೊಂಡು, ಭಗವದ್‌ಸತ್ತ್ವದ ಹನಿಸೋಂಕಿಗೆ ಅರಳಿ, ಹೂವಾಗಿ, ಎಲ್ಲರಿಗು ಬೇಕಾಗಿ, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಯಿತೆ?

ಸರ್ವಜ್ಞನ ಕಾಲ ಖಚಿತವಾಗಿ ನಿಷ್ಕರ್ಷೆಯಾಗಿಲ್ಲ. ವಿಜಯನಗರದ ಅವನತಿಗೆ ಕಾರಣವಾದ ರಕ್ಕಸ ತಂಗಡಿ(ತಾಳಿಕೋಟೆ ?) ಯುದ್ಧದಿಂದೀಚಿನ ಹತ್ತಿರದ ದಿನಗಳಿರಬಹುದು. ದೇಶ-ಕನ್ನಡನಾಡಿನ ಕೇಂದ್ರ ಭಾಗದ ನೆಲದ ಉದ್ದಗಲ. ಮಿಗವಿಲ್ಲದೆ ಗುತ್ತಿ ಬಡಿಯುತ್ತಿರುವ ನಾವು ಈ ವಿಚಾರ ಗಳಲ್ಲಿ ವಿಪುಲ ಚರ್ಚೆ ನಡೆಸಿದ್ದೇವೆ. (ವಿವರಗಳಿಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಪ್ರಕಾಶನ 'ಸರ್ವಜ್ಞ ವಚನಗಳು' (ಸಂ. ಪ್ರೊ. ಎಂ. ವಿ. ಸೀತಾರಾಮಯ್ಯ) ಎಂಬ ಕೃತಿಯ (೧೯೮೨) ಪುಟ 131-138 ನೋಡಬಹುದು.

ತಮ್ಮ ಹಸ್ತಗಳಲ್ಲಿರುವ ಸರ್ವಜ್ಞ ವಚನಗಳ ಈ ಸಂಸ್ಕೃತ ಪ್ರತಿ ಕೃತಿಯಲ್ಲಿ ಐದುನೂರ ಮೂವತ್ತೈದು (ಕೆಲವು ಪುನರುಕ್ತಿಗಳನ್ನುಳಿದು) ವಚನಗಳಿವೆ. ಪ್ರಧಾನವಾಗಿ ಕನ್ನಡ ಅಂಶಗಣಗಳಲ್ಲಿರುವ ಈ ತ್ರಿಪದಿಗಳನ್ನು ಸಂಸ್ಕೃತದಲ್ಲಿ ಇಪ್ಪೈದು ಮಾತ್ರಾ ಗಣಗಳಾಗಿ ಹೊಂದಿಸಿಕೊಳ್ಳಲಾಗಿದೆ. ಭಾಷೆ ಸುರಸ, ಸುಲಲಿತ, ಸುಂದರವೂ ಕೂಡ ಆಗಲು ಪ್ರಯತ್ನ ನಡೆದಿದೆ.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಚನಗಳ ಆಯ್ಕೆ ಬಗೆಗೆ ಯಾರ, ಯಾವ ಸಂಪಾದನೆ ಅಧಿಕಾರಿಕ ಎಂಬ ವಿಚಾರದಲ್ಲಿ ಈ ಭಾಷಾಂತರಕಾರ (೧) ಮೈಸೂರು ವಿ.ವಿ. ಪ್ರಚಾರ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿರುವ ಎ. ಆರ್. ಕೃಷ್ಣಶಾಸ್ತ್ರಿಗಳ ಸರ್ವಜ್ಞ ಕವಿ (೧೯೬೭), (೨) ಸಂಸ್ಥಾನದ ವಯಸ್ಕರ ಶಿಕ್ಷಣ ಇಲಾಖೆ ಪ್ರಕಟಿಸಿರುವ ಶ್ರೀ ಎನ್. ಬಸವಾರಾಧ್ಯ ಸಂಪಾದಿತ, ಸರ್ವಜ್ಞ ವಚನ ಸಂಗ್ರಹ (೧೯೫೭) (೩) ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ, ಶ್ರೀ ವಿದ್ಯಾಶಂಕರ ಸಂಪಾದಿತ, ಸರ್ವಜ್ಞ ವಚನ ಸಂಗ್ರಹ (೧೯೭೪) (೪) ವಿಶ್ವ ಕನ್ನಡ ಮೇಳ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸರ್ವಜ್ಞವಚನಗಳು ಮತ್ತು (೫) ಕರ್ನಾಟಕ ವಿ.ವಿ. ಪ್ರಕಟಿಸಿರುವ "ಸರ್ವಜ್ಞ ಕವಿ, ಜೀವನ ಹಾಗೂ ಕಾವ್ಯ (೧೯೭೭). ಇವುಗಳಲ್ಲಿ ನನ್ನ ಭಾಷಾಂತರಕ್ಕೆ ಒಗ್ಗುವ ಹಾಗೂ ಮೆಚ್ಚಿಗೆಯಾದ ಸುಮಾರು ಐದು ನೂರಕ್ಕೂ ಮಿಕ್ಕು ವಚನಗಳನ್ನು ಆರಿಸಿಕೊಂಡೆ. ಈ ಮೇಲಿನ ಪ್ರಕಟನೆಗಳೆಲ್ಲವೂ ಅಧಿಕಾರಿಕ ಸಂಸ್ಥೆಗಳ ಪ್ರಕಟನೆಗಳು.

ಭಾಷಾಂತರ ಕಾರ್ಯ ಸಾಗಿರುವಾಗ ಸುಮಾರು ಐವತ್ತು ವಚನಗಳ ಭಾಷಾಂತರವನ್ನು ಸಹೃದಯ ಹಿತೈಷಿ ಮಿತ್ರರ ಪ್ರತಿಕ್ರಿಯೆಗಾಗಿ ಕಳುಹಿಸಿ ಕೊಡಲಾಯಿತು. ಆ ಸಮಯದಲ್ಲಿ ಕನ್ನಡ ನವೋದಯ ಮತ್ತು ನವ್ಯ ಕಾವ್ಯ ಸಂದರ್ಭಗಳಿಗೆ ರಸಸೇತುವೂ, ಕನ್ನಡದ ಯುವಪೀಳಿಗೆಯ (?) ಅಗ್ರಮಾನ್ಯ ಕವಿಗಳೂ, ನನ್ನ ಸಹಪಾಠಿ ಮಿತ್ರರೂ. ಕನ್ನಡ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆದ ಡಾ || ಜಿ.ಎಸ್. ಶಿವರುದ್ರಪ್ಪ ನವರು ವಚನಗಳ ಆಯ್ಕೆ ಬಗೆಗೆ ಪ್ರಶ್ನಾರ್ಥಕ ಸಲಹೆಯೊಂದನ್ನಿತ್ತರು. ಈಗ ನಮಗೆ ಗೊತ್ತಿರುವಂತೆ ಡಾ || ಎಲ್. ಬಸವರಾಜು ಅವರು ಪರಿಷ್ಕರಿಸಿ (ಈ ಪರಿಷ್ಕಾರ ಕಾರ್ಯ ಸಾಗುತ್ತಲೇ ಬಂದಿದೆ) ಬೆಂಗಳೂರು ವಿ. ವಿ. ಪ್ರಕಟಿಸಿರುವ (ಸರ್ವಜ್ಞನ) 'ಪರಮಾರ್ಥ'ವೆಂಬುದು ಬಹು ಪ್ರಾಚೀನ ಕೃತಿಯ ಸಂಪಾದನೆ. ಇತ್ತೀಚೆಗೆ ನಾಲ್ಕು ಬಾರಿ ಪರಿಷ್ಕರಿಸಿ ೧೯೯೦ರಲ್ಲಿ ಪ್ರಕಟವಾದ "ಸರ್ವಜ್ಞನ ವಚನ"ಗಳನ್ನು ನೋಡಿದ್ದಾಗಿದೆ. ಕೆಲವು ಪಾಠ ಭೇದಗಳನ್ನು ಬಿಟ್ಟರೆ ಸುಮಾರು ಮೂರು ನೂರು ವಚನಗಳು ತಮ್ಮ ಹಸ್ತ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿರುವ ಈ ಸಂಸ್ಕೃತ ಭಾಷಾಂತರದ ಕನ್ನಡ ಮೂಲಗಳಾಗಿವೆ. ಡಾ|| ಎಂ.ವಿ. ಸೀತಾರಾಮಯ್ಯನವರು ಬಿ.ಎಂ.ಶ್ರೀ ಪ್ರತಿಷ್ಠಾನದ ವತಿಯಿಂದ ಪ್ರಕಟಿಸಿರುವ "ಸರ್ವಜ್ಞ ವಚನಗಳು" (೧೯೮೨) ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಡಾ || ಬಸವರಾಜು ಅವರ ಪಾಠ ಪರಿಷ್ಕರಣ, ನಿಲುವು ಮತ್ತು ಪಾಠಭೇದಗಳನ್ನು ಪ್ರಶ್ನಿಸಿ "ಪಾಠ ಪರಿಷ್ಕರಣ ಕಾರ್ಯಕ್ಕೆ 'ಮೊದಲು' ಎನ್ನುವುದುಂಟು; ಕೊನೆ ಎನ್ನುವುದಿಲ್ಲ. ಎಡೆಬಿಡದೆ ನಡೆಯು ಬೇಕಾದ ಕೆಲಸ. ಸರ್ವಜ್ಞನ ವಿಚಾರದಲ್ಲಂತೂ ಈ ಮಾತು ಪೂರ್ತಿಯಾಗಿ ಅನ್ವಯಿಸತಕ್ಕದ್ದು" ಎಂದಿದ್ದಾರೆ (ಪುಟ.೩೫). ಡಾ || ಎಲ್. ಬಸವರಾಜು ಹೇಳುವಂತೆ "ಮೊದಲು ನಮಗೆ ಸರ್ವಜ್ಞ ಜೀವಿಸಿದ್ದ ಕಾಲಮಾನ ಯಾವುದು ಎಂಬುದು ಖಚಿತವಾಗಬೇಕು." ಇಲ್ಲದಿದ್ದರೆ ಸರ್ವಜ್ಞನ 'ನಿಜವಚನ'ಗಳ ಬಗೆಗೆ ಹಿಂದೊಳಲಾಟ" ನಮ್ಮ ಹಣೆಯಲ್ಲಿ ಬರೆದದ್ದು.

**ಭಾಷಾಂತರಕಾರ** ಕೊಲೆಗಾರ ಎಂಬ 'ಕೀರ್ತಿ ಶನಿ' ಅಂಟಿಕೊಂಡಿರು ವುದಕ್ಕೆ ಭಾಷಾಂತರಕಾರನೇ ಹೊಣೆ. ಸಂಸ್ಕೃತದಲ್ಲಿ '**ಅನುವಾದ**'ವೆಂದರೆ ಭಾಷಾಂತರವಲ್ಲ—ಹೇಳಿದ್ದನ್ನೆ ಮತ್ತೆ ಹೇಳುವುದು ಎಂಬುದು ಅರ್ಥ. ಭಾಷಾಂತರ ಅವಾಂತರವಾಗದೆ ಪ್ರತಿಕೃತಿಯಾಗಬೇಕು. ಮೂಲದ ಅರ್ಥ, ಭಾವ ವೈಗೆಡದಂತಿರಬೇಕು. ಅಷ್ಟೇ ಚೆನ್ನಾಗಿದೆ! ಅದಕ್ಕಿಂತಲೂ ಮಿಗಿಲಾಗಿದೆ ಎಂಬಂತಿದ್ದರೆ ಭಾಷಾಂತರಕಾರ ಕೊಲೆಗಾರನಲ್ಲ; ಕಲೆಗಾರನಾದಾನು.

**ಕುವೆಂಪು**—'ಕುಮಾರವ್ಯಾಸ' ಎಂಬ ಕವನವನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡಿದ್ದಾರೆಂದು ಕೇಳಿದಾಗ ಉದಾಸೀನನಾಗಿ ನಕ್ಕುಬಿಟ್ಟದ್ದೆ. ಅದಕ್ಕೆ ಕಾರಣ: ಹೊಸ ಛಂದಸಿನ, ಅಭಿನಯಿಸಿ ವಾಚಿಸಬೇಕಾದ, ನಾಟಕೀಯವಾದ ಕವನವನ್ನು ಸಂಸ್ಕೃತಕ್ಕೆ ಅದೇ ಛಂದಸಿನಲ್ಲಿ, ಹಾಗೆಯೇ ಅಭಿನಯಿಸಿ ವಾಚಿಸಲು ಸಾಧ್ಯವಾಗುವ ರೀತಿಯಲ್ಲಿ ಪರಿವರ್ತಿಸಲು ಸಾಧ್ಯವೇ ಇಲ್ಲ ಎಂಬ ನಂಬಿಕೆ. ಆದರೆ ಭಾಷಾಂತರಕಾರರು ಆ ಕವನವನ್ನು ತಂದು ನನಗೆ ತೋರಿಸಿದಾಗ (೧೯೫೮) ಮೊದಲು ನನ್ನ ಕಣ್ಣಿಗೇ ಅಚ್ಚರಿ ಯಾಯಿತು. ಅದನ್ನು ಓದಿದ ಮೇಲಂತೂ ನಾನು ವಿಸ್ಮಿತನಾದೆ. ಛಂದಸ್ಸು,



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವ, ಭಾಷೆ, ನಾಟಕೀಯ ವಿನ್ಯಾಸ ಎಲ್ಲದರಲ್ಲೂ ಮೂಲಕ್ಕೆ ಒಂದಿನಿತೂ ಚ್ಯುತಿಬಾರದಂತೆ ಭಾಷಾಂತರಿತವಾಗಿತ್ತು. ಆಗ ನಾನೆಂದುಕೊಂಡೆ "ಈ ಭಾಷಾಂತರ ಸಂಸ್ಕೃತ ಲೋಕಕ್ಕೇ ಮಹಾದ್ವಾರವನ್ನು ತೆರೆದು ಹೊಸ ಹೆದ್ದಾರಿಯನ್ನು ರಚಿಸಿದೆ" ಎಂದು.

**ರಾಮಾಯಣ ದರ್ಶನಂ ಮಹಾಕಾವ್ಯ ಕುರಿತು** —ಭಾರತೀಯ ಜ್ಞಾನಪೀಠದವರು ಈ ಮಹಾಕಾವ್ಯವನ್ನು ಇಂಗ್ಲಿಷಿಗೆ ಮತ್ತು ಹಿಂದಿಗೆ ಭಾಷಾಂತರಿಸುವ ಉದ್ದೇಶ ಹೊಂದಿದ್ದಾರೆಂದು ಕೇಳಿದ್ದೇನೆ. ಸಂಸ್ಕೃತ ಭಾಷಾಂತರ —ಅದರಲ್ಲೂ ಮೂಲದ ಛಂದಸ್ಸಿನಲ್ಲೇ—ಆದರೆ ಅದು ಹೆಚ್ಚು ಓಜಃ ಪೂರ್ಣವಾಗುವುದೆಂದು (ಶ್ರೀ ಪುರುಷೋತ್ತಮ ಅವರ) ಭಾಷಾಂತರವನ್ನು ಓದಿದ ಮೇಲೆ ನನಗನ್ನಿಸುತ್ತದೆ. ಶ್ರೀ ಸಿ. ಜಿ. ಪುರುಷೋತ್ತಮರ ಈ ಸಾರಸ್ವತ ಸಾಹಸವನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸುತ್ತಿದ್ದೇನೆ. [ಡಾ. ಆ. ನೆ. ಉಪಾಧ್ಯೆ ಅವರಿಗೆ ಕುವೆಂಪು ಅವರ ಕಾಗದ— ದಿನಾಂಕ ಆಗಸ್ಟ್ 10, 1970]

2 *Prof. T. N. Sreekantaiya* — Kannada Kavya Tarangini, the work of my talented young friend Sri C.G. Purushothama. He has put his Sanskrit into a metrical mould which closely reproduces the pattern of the original. I believe it is more than an experiment; it may very well herald a revoluiion in Sanskrit versification.

3 *Dr. Suniti Kumar Chatterji*, M.A., D.Litt. (Lond.) F.A.S., Chairman, Sahitya Academy, New Delhi and National Prof. of Humanities – a very literal Sanskrit translation —he has tried to infuse into the Deva Bhasha, the spirit as well as the verse rhythm of the Loka Bhasha. His Sanskrit translation almost a perfect mirror of the original. Longer poems like Panchajanya and Rakta - dhuni read exceedingly beautiful in Sanskrit.

2



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
The translator often acts as a traitor to the original poet as the Italian proverb says Traduttori Traditori. But, here the translator has been successful in bringing the poet's appeal to others largely in his own way and in his own manner.

4 *Dr. K. Krishnamoorthy* (M.A., B.T.,Ph.D.) Prof. of Sanskrit, Karnatak University. —Sri Purushothama has not only captured the spirit of the original but has succeeded often in echoing even the letter. The Sanskrit of the renderings is mostly chistled and chaste. His bold experiment is a pride to Kannada and a service to San skrit.

5 *Dr. C. D. Deshmukh*, Chairman, University Grants Commission — I am glad to learn of your continued work in the direction of rendering into Sanskrit, lyrics by poets in Kannada. I send my best wishes for success in the labour of love you have undertaken.

6 *Dr. P.V. Kane*, M.A., LLM., D.Litt. National Prof. of Indology, (Bombay) —Your renderings are good and sweet. I am now nearly 80 and not well. But, yours was a new venture and so I read it.

7 *Dr. Sukumar Sen*, M.A. Ph.D. F.A.S. Khaira Prof. of Linguistics and Head of the Dept. of Philosophy, Calcutta University — Your very kind gift of Kavya Tarangini. I have read it with interest and relish.

8 *A. N. Upadhye*, M.A., D. Litt., Kolhapur, August, 18, 1970—I carefully read major portions of the Kannada Kavya Tarangini ( in Sanskrit ) Kuvempu Tarangah and



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

also the Kavya Tarangini Vol. Two. Prof. C. G. Purushothama is gifted with a remarkable facility of Sanskrit expression and has a knack for achieving corresponding rhythm in his Sanskrit rendering (letter addressed to Dr. K. V. Puttappa).

9 *Dr. D.V. Gundappa* (28-12-1967)—It was a delight to hear your verses. You have such a mastery of the art of versification. You have a rich poetic dection and a keen ear for rhythm and rhyme.

10 *The Hindu, Madras*–He is a talented versifier in Sanskrit. Though these metres do not lend themselves into Sanskrit, he has been largely successful.

11 *Dr. S. M. Katre*, M.A., Ph.D. (London) Poona–6, 19-11-59 Director, Deccan College PG. Research Institute —I have enjoyed reading both the original Kannada of Sri Kuvempu and your Sanskrit rendering. I agree with Dr. Puttappa that you have brought out his melody and sense in your Sanskrit rendering.

12 *Prof. L- Alsdorf, Universiiy* of Hamburg, 36. 13-1-1960—You have made an original and valuable contribution towards the development of Sanskrit. The introduction of Kannada metres will open a new chapter in its history. I can still admire the easy flow of your Sanskrit verses and your masterly command of the language to which the work of my life is dedicated.

13 *Dr. Ralph L.Turner*, London School of Oriental and African Studies, Haver Brack, Bishop's Stortford, England — Kavya Tarangini — elegant rendering in Sanskrit — skilful treatment of metres.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

*14 Prof. N. Tsuji*, Faculty of Letters, University of Tokyo, Jan. 28, 1960.—Kannada Kavya Tarangini (in Sanskrit) you have accomplished a marvellous task of translating Sri Kuvempu's poems into lucid and elegant Sanskrit full of lyricism and musicality. You have rendered us a clear evidence that the time honoured tradition of Sanskrit Poetry is still alive in India.

*15 Sri L. C. Jain of the Bharatiya Jnanapith*, Sept 6,1969 (extract from a letter addressed to Dr. K.V. Puttappa) — I have also been wanting to write to yon as to how immensely I was gratified to go through the Sanskrit translation of your poems published under the title Kavya Tarangini. Sri Purushothama has done a wonderful job. The beauty of the translation is that it gives the rhythm and music of the original matter. *It appears as if you composed the Poems* in Sanskrit itself. Kindly convey my sincerest congratulation to Sri Purushothama.

ಕೃಪೆಮಾಡಿ ಸಹೃದಯು ಸ್ಪಂದನ ಭಾಗವನ್ನೂ ಪರಿಶೀಲಿಸಬಹುದು.
ಈಗ ಹೇಳಿ, ಈ ಭಾಷಾಂತರಕಾರ ಕೊಲೆಗಾರನೇ, ಅಥವಾ ಕಲೆಗಾರನೆ ?

**ಉಪಕೃತಿ ಸ್ಮರಣೆ** ಈ ಭೂಮಿಕೆಗೆ ಮುಕುಟಮಣಿ. ಕನ್ನಡನಾಡಿಗೆ, ನುಡಿಗೆ, ಮುಖ್ಯವಾಗಿ ಜಾನಪದಕ್ಕೆ ತ್ರಿಪದಿಗಳ ಈ ಮಹಾದತ್ತಿಯನ್ನು ಬಿಟ್ಟುಹೋದ "ಸರ್ವಜ್ಞನಿಧಿ"ಗೆ ನನ್ನ, ನನ್ನಂತಹ ಎಲ್ಲರ ಮೊದಲ ಕಂತಿನ ಉಪಕಾರ ಸ್ಮರಣೆಯ ಆನಂದಾಶ್ರುತರ್ಪಣ ಸಲ್ಲಬೇಕು. ಕನ್ನಡ ಮಣ್ಣಿನ ಮನೆ-ಮನಗಳಲ್ಲಿ ನೆಲೆಮಾಡಿಕೊಂಡಿರುವ ಏಕಮೇವಾದ್ವಿತೀಯ ಕವಿ ದಾರ್ಶನಿಕ, ತನ್ನ ಡೊಂಕಿನೊಡನೆ ಲೋಕದ ಡೊಂಕನ್ನೂ ನೇರ್ಪಡಿಸ ಹೊರಟ ಸಿದ್ಧಶ್ರೀ ಮತ್ತೊಬ್ಬನಿಲ್ಲ. ಈ ಅಜ್ಞಾತ ಮಹಾಚೇತನದ ನುಡಿ ಮುತ್ತುಗಳು ನಾಡಿನ ಉದ್ದಗಲಕ್ಕೂ ಬಿತ್ತರವಾಗಿ ಬಿತ್ತಿ ಹೋಗಿದ್ದ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಲದಲ್ಲಿ ಆ ಮೌಕ್ತಿಕಗಳನ್ನು ಹೆಕ್ಕಿ ತೆಗೆದು ಮಾಲೆ ಮಾಲೆಯಾಗಿ ಕೋದ ಲಿಪಿಕಾರರು, ಸಂಗ್ರಹಕಾರರು, ಪರಿಷ್ಕಾರಗೈದವರು, ವಿಮರ್ಶನ ಕೈಂಕರ್ಯ ವೆಸಗಿದವರು ಈ ಎಲ್ಲರಿಗೂ ಇಂದಿನ, ಅಂತೆಯೇ ಮುಂದಿನ ಕನ್ನಡ ಮಕ್ಕಳ ನಮನ ಸಲ್ಲಬೇಕು.

ಇರಲಿ ; ಈ ಭಾಷಾಂತರಕಾರನ ಪ್ರಯಾಸ ಪ್ರಧಾನ ಪ್ರವಾಸದ ಮಜಲು ಮಜಲಿನಲ್ಲಿ ತಮ್ಮ ಸೌಹಾರ್ದದ ತಣ್ಪಿನ ಪಾನೀಯವನ್ನಿತ್ತು ಬೆನ್ನು ತಟ್ಟಿ ಮುಂದುವರಿಸಿದವರಲ್ಲಿ ನಮ್ಮ ರಾಷ್ಟ್ರದ ಘನತೆವೆತ್ತ ಉಪರಾಷ್ಟ್ರಪತಿಗಳಾಗಿದ್ದ ಸನ್ಮಾನ್ಯ ಬಸವಪ್ಪ ದಾನಪ್ಪ ಜತ್ತಿಯವರು ಪ್ರಪ್ರಥಮರು. ಶ್ರೀಯುತರು ಖದ್ದರ್ ಪರಸ್ಪರ ಸಹಕಾರ ಸಂಘದ ವಜ್ರ ಮಹೋತ್ಸವ (ಸೆಪ್ಟೆಂಬರ್ ೧೯೭೮) ಸಂದರ್ಭದಲ್ಲಿ ಸರ್ಕಾರಿ ಭವನದಲ್ಲಿ ನನಗೆ ಸಂದರ್ಶನಕ್ಕೆ ಅವಕಾಶವಿತ್ತರು. ಆ ವೇಳೆಗಾಗಲೇ ನಾನು ಪ್ರಕಾಶಪಡಿಸಿದ್ದ ಕಾವ್ಯ ತರಂಗಿಣೀ ಭಾಗ ಎರಡರಲ್ಲಿದ್ದ ಕೆಲವು ಸರ್ವಜ್ಞ ವಚನಗಳನ್ನು ವಾಚನ ಮಾಡಿದಾಗ ಶ್ರೀಯುತರು ನನ್ನ ಬೆನ್ನ ತಟ್ಟಿದಾಗ ಆದ ರೋಮಾಂಚನ ಮರೆಯಲಾಗದ ಮಧುರ ರಸ ನಿಮಿಷ. ಆ ಮಹಾಮಾನನೀಯರ ಮತಿಯಿಂದ ಭಾರತ ಸರ್ಕಾರದ ವಿದ್ಯಾ ಇಲಾಖೆಯಿಂದ ಬಂದಿದ್ದ ಅರ್ಜಿಯನ್ನು ತರಾತುರಿಯಿಂದ ಸಿದ್ಧಪಡಿಸಿ ವಚನಗಳ ಭಾಷಾಂತರದ ಕರಡನ್ನು ಕಳುಹಿಸಿದ್ದರೆ ಈಗ ತಮ್ಮ ಹಸ್ತಗಳಲ್ಲಿರುವ ಈ ಕೃತಿ ಆಗಲೇ ಬೆಳಕು ಕಾಣಬೇಕಿತ್ತು. ಆದರೆ ೧೯೭೨ರಲ್ಲಿ ವಿ.ವಿ. ಕಾಲೇಜುಗಳೊಂದ ರಲ್ಲಿ ಪ್ರಿನ್ಸಿಪಾಲರಾಗಬೇಕಿದ್ದ ಈ ವ್ಯಕ್ತಿಯನ್ನು ಕಡೆಗಣಿಸಿ ಐದು ವರ್ಷಕ್ಕೂ ಮಿಕ್ಕು 'ಜೂನಿಯರ'ಗಳಾಗಿದ್ದವರನ್ನು ನೇಮಕಮಾಡಿ, ನನ್ನನ್ನು ಕೋರ್ಟಿಗೆ ತಳ್ಳಿ ಹದಿಮೂರು ವರ್ಷ ನನ್ನ ತೇಜೋವಧೆ ಮಾಡಿದ ಕೈಗಳು ನನ್ನ ಲೇಖನ ಕಾರ್ಯಕ್ಕೆ ಸವಾಲಾಗಿ ನಿಂತುವು. ರಾಮಾಯಣ ದರ್ಶನಂ ಈ "ಪ್ರಬುದ್ಧ ಕರ್ಣಾಟಕ"ದಲ್ಲೇಕೆ ಪ್ರಕಟವಾಗಬೇಕು ? ಪಾಂಡಿತ್ಯ ಪ್ರದರ್ಶನಕ್ಕಾ ?" ಎಂದ ಅಸೂಯಾಪರ ಕಬಂಧಬಾಹು ವೊಂದೂ ಉಂಟು. ನಿದ್ರೆ ಮಾಡಲಾರದ ಈ ಜೀವ ಮೂರು ವರ್ಷ ನಿದ್ರಾ ಗುಳಿಗೆ ನುಂಗಿ, ಹಿತೈಷಿ ಡಾ|| ಜಿ.ರಾಮೇಗೌಡರ ಸಲಹೆಯಂತೆ ಧೈರ್ಯ ತಂದುಕೊಂಡು, ನಿಲ್ಲಿಸಿದ್ದೂ ಆಯಿತು.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನ್ಯರೇ, ಹೇಗೋ ಚೇತರಿಸಿಕೊಂಡ ಮೇಲೆ ಆಶಾಕಿರಣವಾಗಿ ಸುಪ್ತವಾಗಿದ್ದ ಸರ್ವಜ್ಞಮೂರ್ತಿಯ ಕಿಂಚಿತ್ ಚೇತನ ನನ್ನನ್ನು ಒದ್ದು ಎಬ್ಬಿಸಿತು. ಭಾಷಾಂತರಕ್ಕೆ ಕೈ ಹಾಕಿದಾಗ ಸಹಾಯ, ಸಲಹೆ, ಸಹಕಾರ ಗಳನ್ನು ಪುಸ್ತಕ ರೂಪವಾಗಿ ಡಾ. ಸಿ.ಪಿ. ಕೃಷ್ಣಕುಮಾರ್, ಡಾ.ಎ . ಬಸವರಾಜು, ಪ್ರೊ. ಕೆ ಬಿ. ಪ್ರಭುಪ್ರಸಾದ್‌ರವರೂ, ಕೇವಲ ಕೆಲವು ವಚನಗಳ ಭಾಷಾಂತರವನ್ನೇ ಮೆಚ್ಚಿ, ಹರಸಿ, ಹಾರೈಸಿದ ಪೂಜ್ಯ ಡಾ. ಸಿದ್ಧಯ್ಯ ಪುರಾಣಿಕ, ಪ್ರೊ. ಸಿದ್ಧಗಂಗಯ್ಯ, ಮಿತ್ರರುಗಳಾದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ ಹೆಚ್. ತಿಪ್ಪೇರುದ್ರಸ್ವಾಮಿ, (ಇತ್ತೀಚೆಗೆ ಕೈಲಾಸವಾಸಿಗಳಾದ) ಡಾ. ಎಚ್. ಪಿ. ಮಲ್ಲೇದೇವರು, ಅಕ್ಕ ಶ್ರೀಮತಿ ಜಗದಂಬಾ ಮಲ್ಲೇದೇವರು, ಈ ಕೃತಿ ಅಚ್ಚಾಗುತ್ತಿರುವಾಗ ಆಗಾಗ್ಗೆ ಬಂದು ಓದಿಸಿ ಕೇಳಿ ಮೆಚ್ಚಿಕೊಂಡ, ಹಾಗೂ ಹಾಲಿ ಮೈಸೂರು ವಿ.ವಿ. ಉಪಾಧ್ಯಾಯ ಸಂಘದ ಅಧ್ಯಕ್ಷರೂ, ಯಾವ ಜನ್ಮದಲ್ಲಿ ನನ್ನ ತಮ್ಮನೋ ಆಗಿರಬಹುದಾದ ಡಾ. ಮಳಲಿ ವಸಂತಕುಮಾರ್, ರಕ್ಷಾಪತ್ರದ ಸರ್ವಜ್ಞ ಮೂರ್ತಿಯ ರೇಖಾ ವಿನ್ಯಾಸ ಮಾಡಿಕೊಟ್ಟ ಶ್ರೀ ಎಚ್. ಎಸ್. ಫಾಟಕ್ ಹಾಗೂ ನನ್ನ ಚಿತ್ರ ಲಿಪಿಯನ್ನು ಓದಿ, ಗುರುತಿಸಿ, ಅಂದವಾಗಿ ಕೃತಿಯನ್ನು ಮುದ್ರಿಸಿಕೊಟ್ಟ ಮಿತ್ರರೂ ಹಾಗೂ ನನ್ನ ವಿದ್ಯಾಗುರುಗಳಾದ ಪ್ರೊ.ಎಸ್. ರಂಗಾಚಾರ್ಯರ ಮಕ್ಕಳೂ ಆದ ಆರ್. ಶ್ರೀನಿವಾಸಾಚಾರ್, ಅವರಿಗೆ ಸಹಕಾರ ನೀಡಿದ ಅವರ ಮಕ್ಕಳು ಎಸ್. ಮನೋಹರ್, ಕುಮಾರಿ ಎಸ್. ಮೀರಾ ಮತ್ತು ಅಚ್ಚುಮೊಳೆ ಜೋಡಿಸಿಕೊಟ್ಟ ಅವರ ಮಿತ್ರರು ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತಾ ಪೂರ್ವಕ ನಮನಗಳು.

ಡಿ. 26, ವಿನೋಬಾ ರಸ್ತೆ<br>ಜಯಲಕ್ಷ್ಮೀಪುರಂ, ಮೈಸೂರು-570 012

ಸಿ. ಜಿ. ಪುರುಷೋತ್ತಮ್<br>ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕ

[ವಿ.ಸೂ.—ಮೂಮೂಲನ್ನು ಮೀರಿ ತಿದ್ದುಪಡಿ ಮತ್ತು ಅರ್ಥಕೋಶವನ್ನು ಮೊದಲೇ ಕೊಡಲಾಗಿದೆ.]



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



*C. G. Purushotham (1975)*

M. A. (Sans), M. A. (Hist)

Professor of Sanskrit Maharaja's College,

University of Mysore.

**Res : Keralapura-573136, Hassan Dist,**

**Karnataka State.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DR. K. L. SRIMALI

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸಹೃದಯ ಸ್ಪಂದನ

|| ಸಿರಿಗನ್ನಡಂ ಗೆಲ್ಗೆ ||

ಡಾ|| ಸಿದ್ಧಯ್ಯ ಪುರಾಣಿಕ "ಶ್ರೀಗಿರಿ", 45—ಎ, ಆಲಿಅಸ್ಕರ್‌ರಸ್ತೆ
ಅಧ್ಯಕ್ಷರು ಬೆಂಗಳೂರು-560 052
೫ಲನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಮಾನ್ಯರೆ, ನಮನಗಳು. ತಮ್ಮ ಕಾಗದಕ್ಕಾಗಿ ಕೃತಜ್ಞತೆಗಳು.

ಕ್ವಚಿತ್ತಾಗಿ ಕನ್ನಡದ ಕೃತಿಗಳು ಸಂಸ್ಕೃತಕ್ಕೆ ಅನುವಾದಗೊಂಡಿವೆ. ಅಲ್ಲೊಂದು 'ವಿವೇಕ ಚಿಂತಾಮಣಿ' ಇಲ್ಲೊಂದು 'ಹರಿಭಕ್ತಿಸಾರ!—ನನಗೆ ಗೊತ್ತಿರದ ಇನ್ನೂ ಒಂದೆರಡು ಕೃತಿಗಳಿರಬಹುದು.

ಈ ಕೊರತೆಯನ್ನು ತುಂಬಿಕೊಡುವಲ್ಲಿ ತಮ್ಮ ಕೊಡುಗೆ ಅನನ್ಯವಾದುದು. ತಾವು ಸಂಸ್ಕೃತೀಕರಿಸಿರುವ 'ಕುವೆಂಪು' ಕವನಗಳು ಮೂಲ ಕವಿತೆಗಳಷ್ಟೇ ಹೃದ್ಯವಾಗಿವೆ. ಈಗ ಕಳಿಸಿರುವ ಸರ್ವಜ್ಞನ ತ್ರಿಪದಿಗಳ ಅನುವಾದವೂ ಅಷ್ಟೇ ಆಹ್ಲಾದಕರವಾಗಿವೆ. ಕನ್ನಡ ಸಂಸ್ಕೃತಗಳೆರಡರ ಜಾಯಮಾನಗಳನ್ನು ಸರಿಯಾಗಿ ಗ್ರಹಿಸಿರುವ ತಮ್ಮ ಈ ಸಂಸ್ಕೃತಾನುವಾದ ಕಾರ್ಯ ಚಿರಸ್ಮರಣೀಯವಾದುದು. ಈ ಕಾರ್ಯ ತಮ್ಮಿಂದ ಇನ್ನೂ ನೂರಾನು ನಡೆದು ಸಂಸ್ಕೃತಕ್ಕೆ ಕನ್ನಡದ ಮಹತಿ ಮನದಟ್ಟಾಗಲೆಂದು ಹಾರೈಸುತ್ತೇನೆ.

---

( ಕುವೆಂಪು ಭಾವಗೀತೆಗಳ ಭಾಷಾಂತರ, ೧೯೫೫ )

ಡಾ. ಆರ್. ಆರ್. ದಿವಾಕರ್
(ಒರಿಸ್ಸಾದ ಮಾಜೀ ರಾಜ್ಯಪಾಲರು)

... ಕಾವ್ಯ ತರಂಗಿಣಿ ನೋಡಿದೆ. ಬಹಳ ಸಂತೋಷವಾಯಿತು.

ಸಂಸ್ಕೃತ ಭಾಷಾಂತರ ಸುಲಲಿತವಾಗಿದೆ. ಮೂಲದ ಮೆರಗು ಪೂರ್ಣ ಪ್ರತಿಬಿಂಬಿತವಾಗಿದೆ ಎಂದು ಹೇಳಲಾರೆನಾದರೂ ಹಲವೆಡೆ ಮೂಲದಂತೆ ಕಂಗೊಳಿಸುತಿದೆ, ಮೂಲದಷ್ಟೆ ರಸವತ್ತಾಗಿವೆ.

... ಇದೊಂದು ಹೊಸ ಪ್ರಯೋಗವು. ಪ್ರಯೋಗಾವಸ್ಥೆಯಲ್ಲಿ ಬರತಕ್ಕ ಅಡಚಣೆತಳೆಲ್ಲ ಇದಕ್ಕೂ ಬಂದೇ ಬರುವುವು. ಆದರೆ ಕನ್ನಡವನ್ನು ಕೂಡ ದೇವನಾಗರಿಯಲ್ಲಿ ಅಚ್ಚುಹಾಕಿಸಿದ್ದು ಒಂದು ಮುಂದ್ಹೆಜ್ಜೆ ಎಂದೇ ಹೇಳಬಲ್ಲೆ.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ವಾನ್. ಹೆಚ್. ಕೆ. ಸಿದ್ಧಗಂಗಯ್ಯ ಬೆಂಗಳೂರು
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕ,
ಸರ್ಕಾರಿ ಉಪಾಧ್ಯಾಯ ಶಿಕ್ಷಣ ಶಾಲೇಜು, ಮೈಸೂರು

## ಮೆಚ್ಚುನುಡಿ

ಭಾವಕ್ಕೆ, ರೂಪಕ್ಕೆ, ರುಚಿಗೆ ಅಪಚಾರವಾಗದಂತೆ ಮೂಲ ಕೃತಿಯನ್ನು ಅನ್ಯ ಭಾಷೆಗೆ ಅನುವಾದಿಸುವುದು ಸಾಹಸವೇ ಸರಿ. ನುರಿತ ಪ್ರತಿಭಾಶಾಲಿಗಳು ಮಾತ್ರ ಈ ಕಾರ್ಯಕ್ಕೆ ಕೈಹಾಕಬಲ್ಲರು. ಈಗಾಗಲೇ ಹಲವು ಕೃತಿಗಳ ಅನುವಾದದಿಂದ ವಿದ್ವಜ್ಜನರನ್ನು ಆಕರ್ಷಿಸಿಕೊಂಡಿರುವ ಪ್ರೊ : ಸಿ. ಜಿ. ಪುರುಷೋತ್ತಮ ಅವರು ಕನ್ನಡ ತ್ರಿಪದಿ ಛಂದಸ್ಸಿನಲ್ಲಿ ಸಂಸ್ಕೃತ ಭಾಷೆಗೆ ಅನುವಾದಿಸಿರುವ ಸರ್ವಜ್ಞ ವಚನಗಳನ್ನು ಓದಿ ಅಚ್ಚರಿಗೊಂಡೆನು. ಮೂಲ ಮತ್ತು ಅನುವಾದಗಳು ವ್ಯತ್ಯಾಸ ಗೊತ್ತಾಗದ ಅವಳಿ ಮಕ್ಕಳಂತಿವೆ. ಅದೇ ಧಾಟಿ, ಅದೇ ಓಟ; ಅದೇ ಭಾವ, ಅದೇ ಸೊಗಡು ; ಅದೇ ಸತ್ವ, ಅದೇ ಸೊಗಸು. ಮೂಲದ ತ್ರಿಪದಿಯನ್ನೇ ಬಳಸಿ ಸಂಸ್ಕೃತ ಸಾಹಿತ್ಯಕ್ಕೊಂದು ಹೊಸ ಆಯಾಮವನ್ನು ಕಲ್ಪಿಸಿದ್ದಾರೆ. ಕನ್ನಡ ಮಾತೆಯನ್ನು ಸಂಸ್ಕೃತದ ಉಡಿಗೆ ತೊಡಿಗೆಗಳಿಂದ ಅಲಂಕರಿಸಿ ಧನ್ಯತೆ ಪಡೆದಿದ್ದಾರೆ, ಈ ಕೃತಿಯು ಸಂಸ್ಕೃತ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ.

I (ಕ) ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ
ಬಿದ್ದು ಬರುವವನ ಸದ್ದಡಗಿ ಸಂತಾನ—
ವೆದ್ದು ಹೋಗುವುದು ಸರ್ವಜ್ಞ

(ಸಂ) ಮದ್ಯಪಾನಾಯ ಸದ್‌ದ್ರವ್ಯಮಪ್ಯಪಹಾಯ
ರುದ್ಧಗತಿರೇತಿ ಯಸ್ತಸ್ಯ ಸಂತತಿರೇವ
ವಿದ್ಧ ಮೂಲಾ ಹಿ ಸರ್ವಜ್ಞ

II (ಕ) ಕೊಟ್ಟು ಕುದಿಯಲಿ ಬೇಡ ಕೊಟ್ಟಾಡಿಕೊಳಬೇಡ

(ಸಂ) ದತ್ವಾಸ್ತು ಮಾ ವ್ಯಥಾ ದತ್ತ್ವಾಸ್ತು ಮಾ ಕಥಾ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ಈ ನಿದರ್ಶನಗಳು ಸಾಕು ಇವರ ಭಾಷಾಂತರ ಸಾಮರ್ಥ್ಯ ಮತ್ತು ಚಾತುರ್ಯಗಳಿಗೆ. ಅನುವಾದಕಾರರು ತಮ್ಮ ಪ್ರಯತ್ನದಲ್ಲಿ ಪೂರ್ಣ ಯಶಸ್ವಿಗಳಾಗಿದ್ದಾರೆ. ಸಹೃದಯರು ಈ ಉತ್ತಮ ಕೃತಿಯನ್ನು ಆದರದಿಂದ ಬರಮಾಡಿಕೊಂಡು ಆನಂದಿಸುವುದರಲ್ಲಿ ಸಂಶಯವಿಲ್ಲ. ಇದು ಸಂಸ್ಕೃತ ವಾಗ್ದೇವಿಗೆ ಧರಿಸಿದ ಸಪರಿಮಳ ಕುಸುಮ.

---

(ಕುವೆಂಪು ಭಾವಗೀತೆಗಳ ಭಾಷಾಂತರ, ೧೯೫೯ )

ರಾಷ್ಟ್ರಕವಿ
**ಎಂ. ಗೋವಿಂದ ಪೈ**

ನಿಮ್ಮ ಸಂಸ್ಕೃತ ಕೃತಿಯಾದ ' ಕನ್ನಡ ಕಾವ್ಯ ತರಂಗಿಣಿ 'ಯಲ್ಲಿ ಶ್ರೀ ಕುವೆಂಪುರವರ ಕನ್ನಡ ಕವಿತೆಗಳನ್ನು ಸಂಸ್ಕೃತಿಸಿರುವಲ್ಲಿ ನೀವು ಶಾನೆ ಯಶಸ್ವಿಯಾಗಿರುತ್ತೀರಿ. ನಿಮ್ಮನ್ನು ಮನವಾರೆ ಅಭಿನಂದಿಸುತ್ತೇನೆ. ನಿಮ್ಮ ಸಂಸ್ಕೃತ ಪದ್ಯಗಳೆಲ್ಲವೂ ಅಚ್ಚ ಮೂಲ ಸಂಸ್ಕೃತ ಕವಿತೆಗಳೇ ಎನಿಸುತ್ತವಲ್ಲದೆ, ಭಾಷಾಂತರದ ಸೋಗಿನಲ್ಲಿ ಅವುಗಳು ಇವೆ ಎನಿಸುವುದಿಲ್ಲ ಮಾತ್ರವಲ್ಲ. ಅವನ್ನು ಸಂಸ್ಕೃತಿಸಿರುವಲ್ಲಿ ಅವುಗಳ ಮೂಲ ಕನ್ನಡ ಛಂದಸ್ಸುಗಳು ಕೂಡಾ ಇವುಗಳು ಸಂಸ್ಕೃತ ಛಂದಸ್ಸುಗಳಲ್ಲವೆಂದು ಭೇದಿಸಲಿಕ್ಕೆ ಆಗುವುದಿಲ್ಲ, ಅಷ್ಟು ಸುಕರವೂ, ಸುಲಭವೂ, ಸುಗಮವೂ ಆಗಿವೆ. ವಸ್ತುತಃ ಆ ಕನ್ನಡ ಕವನಗಳನ್ನು ಯಥಾಛಂದವಾಗಿ ಸಂಸ್ಕೃತಿಸಿರುವುದರಲ್ಲಿ ನಿಜವಾಗಿಯೂ ನೀವು ಗೆದ್ದಿರುತ್ತೀರಿ, ಯಶಸ್ವಿಯಾಗಿರುತ್ತೀರಿ. ನಿಮ್ಮನ್ನು ಮತ್ತೊಮ್ಮೆಯೂ ಮನವಾರೆ ಅಭಿನಂದಿಸುತ್ತೇನೆ.

N. SIVARAMA SASTRY
Professor of Sanskrit

University of Mysore
Mysore, 30—3—60

Poetry is difficult of Translation— particularly into verse. It is even more so if one attempts to bring in also the rhythm of the original. Sri Purushothama has assailed this difficult task and has been largely successful.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ|| ಜಿ. ಎಸ್. ಶಿವರುದ್ರಪ್ಪ
ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ
ಮಾಜಿ ಅಧ್ಯಕ್ಷ, ಕನ್ನಡ ಸಾಹಿತ್ಯ ಅಕಾಡೆಮಿ

ಬೆಂಗಳೂರು
21-1-91

ಪ್ರಿಯ ಶ್ರೀ ಪುರುಷೋತ್ತಮ್ ಅವರಲ್ಲಿ ವಿಜ್ಞಾಪನೆ.

ನೀವು ಕನ್ನಡಕ್ಕೆ ಅನುವಾದ ಮಾಡಿರುವ ಕೆಲವು ಸರ್ವಜ್ಞನ ತ್ರಿಪದಿಗಳನ್ನು ನನ್ನ ಅಭಿಪ್ರಾಯಕ್ಕಾಗಿ ನನ್ನ ಕಡೆ ಕಳುಹಿಸಿರುವ ನಿಮ್ಮ ವಿಶ್ವಾಸಕ್ಕೆ ನಾನು ಕೃತಜ್ಞನಾಗಿದ್ದೇನೆ.

ಈಗಾಗಲೇ ಕನ್ನಡದಿಂದ ಸಂಸ್ಕೃತಕ್ಕೆ ಅನುವಾದ ಮಾಡಿ ಪಳಗಿದವರು ನೀವು, ಶ್ರೀ ಕುವೆಂಪು ಅವರ ಕವಿತೆಗಳನ್ನು ತುಂಬ ಸೊಗಸಾಗಿ ಸಂಸ್ಕೃತಕ್ಕೆ ಭಾಷಾಂತರ ಮಾಡಿದ ನಿಮ್ಮ ಸಾಮರ್ಥ್ಯಕ್ಕೆ ನಾನು ಬಹು ಹಿಂದೆಯೇ ಬೆರಗಾಗಿದ್ದೇನೆ. ಇದೀಗ ನನ್ನ ಎದುರಿಗೆ ಇನ್ನೂ ಒಂದು ಬೆರಗು ಕಾದಿದೆ. ಅದು ಸರ್ವಜ್ಞನ ತ್ರಿಪದಿಗಳ ಅನುವಾದ.

ಸರ್ವಜ್ಞ ಕನ್ನಡದ ವಿವೇಕವಾಙ್ಮಯದ ಅತ್ಯುತ್ತಮ ಪ್ರತಿನಿಧಿಯಾಗಿದ್ದಾನೆ. ಇಂಥ ಕವಿಯ ಐನೂರು ತ್ರಿಪದಿಗಳನ್ನು ನೀವು ಸಂಸ್ಕೃತಕ್ಕೆ ಅನುವಾದ ಮಾಡಿರುವುದು ನಿಜವಾಗಿಯೂ ಒಂದು ಸಾಹಸದ ಕೆಲಸವೇ. ಇದನ್ನು ನಾನು 'ಸಾಹಸ' ಎಂದು ಕರೆದದ್ದಕ್ಕೆ ಕಾರಣಗಳಿವೆ. ತ್ರಿಪದಿ ಕನ್ನಡ ಛಂದಸ್ಸಿನ ತಾಯಿಬೇರು. ಅದು ಶುದ್ಧ ಕನ್ನಡದ ಪ್ರಾದೇಶಿಕ ಪ್ರತಿಭೆಯ ಸಮೃದ್ಧ ಅಭಿವ್ಯಕ್ತಿ. ಇಂಥ ತ್ರಿಪದಿಯನ್ನು ಯಥಾವತ್ತಾಗಿ ಸಂಸ್ಕೃತದಲ್ಲಿಯೂ, ನಿಮ್ಮ ಅನುವಾದದ ಮೂಲಕ ಉಳಿಸಿಕೊಂಡಿರುವುದು ಮೊದಲ ಸಾಹಸ. ಹಾಗೆಯೆ ಸರ್ವಜ್ಞನ ಒಂದೊಂದು ತ್ರಿಪದಿಯೊಳಗಣ ಅರ್ಥವನ್ನು, ಅದರ ಸತ್ವಕ್ಕೆ (spirit) ಕೊಂಚವೂ ಧಕ್ಕೆಯಾಗದಂತೆ ನಿಮ್ಮ ಅನುವಾದದೊಳಕ್ಕೆ ತಂದಿರುವುದು ಎರಡನೆಯ ಸಾಹಸ. ನಿಜವಾದ ಅನುವಾದ ಒಂದು ಸೃಜನಾತ್ಮಕ ಕ್ರಿಯೆ ಅನ್ನುವುದನ್ನು ಈ ಮೂಲಕ ನೀವು ದೃಢಪಡಿಸಿದ್ದೀರಿ. ಹಾಗೆಯೆ ಕನ್ನಡ ಪ್ರಾದೇಶಿಕ ಪ್ರತಿಭೆಯೊಂದರ ಪರಿಚಯವನ್ನು ಸಂಸ್ಕೃತಕ್ಕೆ ಮಾಡಿಕೊಟ್ಟಿದ್ದೀರಿ. ಅಭಿನಂದನೆಗಳು



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂದಾನಯಾತ್ರಾ
ಪಂಜಾಬ್
೨೩-೧೧-೧೯೫೯

ವಿನೋಬಾನ
ನಮಸ್ಕಾರಂಗಳು

ಕಾವ್ಯತರಂಗಿಣಿ ಮುಟ್ಟಿತು. ಚೆನ್ನಾಗಿದೆ. ಸಂಸ್ಕೃತ ಅನುವಾದ ಸುಂದರವಾಗಿದೆ.

---

ಡಾ|| ಎಚ್. ತಿಪ್ಪೇರುದ್ರಸ್ವಾಮಿ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)
ನಿರ್ದೇಶಕರು
ಕನ್ನಡ ಅಧ್ಯಯನ ಸಂಸ್ಥೆ

ಸರ್ವಜ್ಞ ವಚನಗಳ—
ಸಂಸ್ಕೃತ ಅನುವಾದ
ಪ್ರೊ. ಸಿ. ಜಿ. ಪುರುಷೋತ್ತಮ ಅವರಿಂದ

ಸರ್ವಜ್ಞ ವಚನಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವುದು ಸುಲಭವಾದ ಕಾರ್ಯವಲ್ಲ. ಕನ್ನಡದ ನುಡಿಗಟ್ಟುಗಳನ್ನು ದೇಶೀಯ ಸೊಗಡನ್ನು ಸಮರ್ಥವಾಗಿ ಬಳಸಿಕೊಂಡು ಜನಜೀವನದಲ್ಲಿ ಗಾದೆಯ ಮಾತುಗಳಂತೆ ಬೆರೆತುಹೋಗಿರುವ ಈ ವಚನಗಳು ಅನೇಕ ವೇಳೆ ಅನುವಾದಕ್ಕೆ ಅತೀತವಾದುವುಗಳು. ಆದರೆ ಮಿತ್ರರಾದ ಪ್ರೊ. ಸಿ. ಜಿ. ಪುರುಷೋತ್ತಮ ಅವರು ಅದನ್ನೊಂದು ಸವಾಲಿನಂತೆ ಸ್ವೀಕರಿಸಿ ಮೂಲದ ಲಯ ಧಾಟಿಗಳನ್ನೂ ಉಳಿಸಿಕೊಳ್ಳುವ ರೀತಿಯಲ್ಲಿ ಅವುಗಳನ್ನು ಸಂಸ್ಕೃತಕ್ಕೆ ಅನುವಾದಿಸಿರುವುದು ಭಾಷಾಂತರ ವಲಯದಲ್ಲಿಯೇ ಒಂದು ವಿಶಿಷ್ಟವಾದ ಸಾಧನೆ ಎನ್ನಬಹುದು. ಇಂತಹ ಸಾಧನೆಗಳನ್ನು ಈಗಾಗಲೇ ಅವರು ಅನೇಕ ಕಡೆ ಮಾಡಿರುವವರು. ಕುವೆಂಪು ಅವರ ಕೆಲವು ಭಾವಗೀತೆಗಳನ್ನು ಅನುವಾದ ಮಾಡಿ ಸಂಸ್ಕೃತದ ಜಾಯಮಾನಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದ್ದಾರೆ. ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯದ ಅನುವಾದವೂ ಅವರ ಈ ಕಾವ್ಯಸಾಧನೆಯಲ್ಲಿ ಸೇರಿದೆ. ಅಲ್ಲಿ ಪಳಗಿದ ಅವರ ಪರಿಣತ ಶಕ್ತಿಯನ್ನು ಈ ಸರ್ವಜ್ಞ ವಚನಗಳ ಅನುವಾದದಲ್ಲಿಯೂ ನಾವು ಕಾಣಬಹುದಾಗಿದೆ.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾಹರಣೆಗಾಗಿ ಕೆಲವು ವಚನಗಳ ಅನುವಾದವನ್ನು ಇಲ್ಲಿ ಗಮನಿಸಬಹುದು.

| | | | |
|---|---|---|---|
| 1. | (12) | ಎತ್ತಾಗಿ ತೊತ್ತಾಗಿ | ೧೯ |
| 2. | (60) | ದಂತ ಪಂಕ್ತಿಯ ನಡುವೆ | ೨೫೬ |
| 3. | (76) | ಉತ್ತಮರು ಪಾಲ್ಗಡಲೊಳೆತ್ತಿಹರೆ | ೩೦೦ |
| 4. | (78) | ನಡೆವುದೊಂದೇ ಭೂಮಿ | ೩೦೬ |
| 5. | (142) | ಹೊತ್ತಿಗೊದಗದ ಮಾತು | ೩೭೫ |
| 6. | (148) | ರಸಿಕನಾಡಿದ ಮಾತು | ೩೮೨ |
| 7. | (167) | ಸಾಲವನು ಕೊಂಬಾಗ | ೩೫೮ |
| 8. | (219) | ಹಂಗಿನರಮನೆಯಿಂದ | ೩೨೭ |

ಈ ಮೊದಲಾದ ವಚನಗಳ ಅನುವಾದವನ್ನು ನೋಡಬಹುದು. ಮೂಲದೊಡನೆ ಭಾಷಾಂತರವನ್ನು ಬಹಳ ಎಚ್ಚರಿಕೆಯಿಂದ ಗಮನಿಸಿ, ಹೋಲಿಸಿ ನೋಡಿದಾಗ ಇಲ್ಲಿ ಕಂಡುಬರುವ ಅನುವಾದದ ಸೊಗಸು ಮನ ಸೆಳೆಯುತ್ತದೆ. ಅನೇಕವೇಳೆ ಮೂಲದ ಭಾವವನ್ನು ಅಲ್ಲಿರುವಂತೆಯೇ ತರುವುದು ಕಷ್ಟ. ಅದರ ಛಾಯೆ ಅನಿವಾರ್ಯವಾಗಿ ಸ್ವಲ್ಪ ಬದಲಾಗಲೇ ಬೇಕಾಗುತ್ತದೆ. ಆದರೆ ಮೂಲದ ಆಶಯಕ್ಕೆ ಭಂಗವಾಗದಂತೆ ಅದನ್ನು ಹೊಸ ಭಾಷೆಯಲ್ಲಿ ಹಿಡಿದಿಡುವ ಸಾಹಸದಲ್ಲಿ ಅನುವಾದಕಾರ ಸೃಷ್ಟಿಕರ್ತನೂ ಆಗಬೇಕಾಗುತ್ತದೆ. ಆದ್ದರಿಂದ ಕೇವಲ ಭಾಷಾಪಾಂಡಿತ್ಯದಿಂದ ಇಂತಹ ಅನುವಾದಗಳು ಸಿದ್ಧಿಸುವುದಿಲ್ಲ. ಕವಿ ಹೃದಯವೂ ಇಲ್ಲಿ ಬೇಕು. ಈ ಎರಡನ್ನೂ ಉಳ್ಳ ಶ್ರೀ ಸಿ. ಜಿ. ಪುರುಷೋತ್ತಮ ಅವರ ಈ ಅನುವಾದಗಳು ಕೇವಲ ಭಾಷಾಂತರಗಳಾಗದೆ ಪುನರ್‌ಸೃಷ್ಟಿಯಾಗಿ ಸಂಸ್ಕೃತದಲ್ಲಿ ಅವತರಿಸಿರುವುದನ್ನು ಕಾಣಬಹುದು. ಇಂತಹ ಒಂದು ಸಾಹಸ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿರುವ ಪ್ರೊ. ಸಿ. ಜಿ. ಪುರುಷೋತ್ತಮ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ; ಇನ್ನೂ ಹೆಚ್ಚಿನ ಅನುವಾದಗಳು ಇವರಿಂದ ಬರುವಂತಾಗಲೆಂದು ಹಾರೈಸುತ್ತೇನೆ.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

**ಪ್ರೊ. ಹೆಚ್. ಪಿ. ಮಲ್ಲೇದೇವರು** ಮೈಸೂರು
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು ತಾ|| 23-3-1991
ಮತ್ತು ನಿರ್ದೇಶಕರು ಪ್ರಾಚ್ಯಸಂಶೋಧನಾಲಯ

ಮಾನ್ಯ ಮಿತ್ರರಾದ ಪ್ರೊಫೆಸರ್ ಸಿ. ಜಿ. ಪುರುಷೋತ್ತಮ ಅವರದು ಅದಮ್ಯಚೇತನ. ಸಂಸ್ಕೃತವನ್ನು ಪ್ರಾಚೀನ ಅಧುನಿಕ ರೀತಿಗಳೆರಡರಲ್ಲೂ ಅಭ್ಯಾಸಮಾಡಿ ಕಾವ್ಯರಚನಾ ಕಲಾಕೌಶಲವನ್ನು ಕರಗತ ಮಾಡಿಕೊಂಡಿರುವ ಅವರು ಸಂಸ್ಕೃತದಲ್ಲಿ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಜತೆಗೆ ಕನ್ನಡದ ಕವನಗಳನ್ನು ಸಂಸ್ಕೃತ ಭಾಷೆಗೆ ಅನುವಾದಿಸುವುದರ ಮೂಲಕ ಎರಡು ಭಾಷೆಗಳಿಗೂ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ರಾಷ್ಟ್ರಕವಿ ಕುವೆಂಪು, ಡಾ|| ಡಿ.ವಿ.ಜಿ. ಮೊದಲಾದ ಘನತೆವೆತ್ತ ಕವಿವರ್ಯರ ಕೃತಿಗಳ ಅನುವಾದವನ್ನು ಪ್ರೊ. ಪುರುಷೋತ್ತಮ ಅವರು ಚೆನ್ನಾಗಿಯೇ ಮಾಡಿದ್ದಾರೆ. 02887

ಪ್ರಸ್ತುತ ಪ್ರೊ. ಪುರುಷೋತ್ತಮ ಅವರು ಸರ್ವಜ್ಞನ ತ್ರಿಪದಿಗಳನ್ನು ಸಂಸ್ಕೃತೀಕರಿಸಿದ್ದಾರೆ. ವೇದಗಳಲ್ಲಿ ಗಾಯತ್ರೀ ಮೊದಲಾದ ಪಾದತ್ರಯಾತ್ಮಕವಾದ ಛಂದಸ್ಸುಗಳಿದ್ದರೂ, ಲೌಕಿಕ ಸಂಸ್ಕೃತದಲ್ಲಿ ಪದ್ಯಗಳೆಲ್ಲ ಚತುಷ್ಪದಿಗಳಾಗಿ ಬೆಳೆದು ಬಂದಿವೆ. ಮೂಲ ಯಾವುದೋ ಛಂದಸ್ಸಿನಲ್ಲಿದ್ದರೆ ಅನುವಾದ ಮತ್ತಾವುದೋ ಛಂದಸ್ಸಿನಲ್ಲಿರುವುದು ಸಾಮಾನ್ಯ. ಆದರೆ, ಪ್ರೊ. ಸಿ. ಜಿ. ಪಿ. ಅವರ ಅನುವಾದದ ವೈಶಿಷ್ಟ್ಯವೆ ಮೂಲದ ಛಂದಸ್ಸನ್ನು ಉಳಿಸಿಕೊಂಡಿರುವುದು. ಸಂಸ್ಕೃತ ಅಪಾರಶಬ್ದಸಂಪತ್ತನ್ನೊಳಗೊಂಡಿರುವ ಅಮರವಾಣಿ. ಅದು ಯಾವ ಛಂದಸ್ಸನ್ನಾಗಲಿ ತನ್ನದನ್ನಾಗಿಸಿಕೊಳ್ಳುವ ಅಂತಸ್ಸತ್ತ್ವವನ್ನು ಪಡೆದಿದೆ. ಈ ಅಂಶವನ್ನು ಮನಗಂಡಿರುವ ಪ್ರೊ. ಸಿ. ಜಿ. ಪಿ. ಅವರು ಅನೇಕ ಉತ್ತಮ ಪ್ರಯೋಗಗಳನ್ನು ಮಾಡಿದ್ದಾರೆ.

> ಸರ್ವಜ್ಞನಾಮಾ ಸ ಗರ್ವಜಾತಃ ಕಿಂ ನು
> ಸರ್ವೇಷು ಚೈಕೈಕಮಧಿಗಮ್ಯ ವಿದ್ಯಾಸು
> ಪರ್ವತಃ ಸ ಕಿಲ ಸರ್ವಜ್ಞ ||

ಈ ಅನುವಾದ ಸಂಸ್ಕೃತದಲ್ಲಿ ಎಷ್ಟು ಸಹಜವಾಗಿ ಮೂಡಿ ಬಂದಿದೆ! ಅತ್ಯುತ್ತಮ ಅನುವಾದ ಮೂಲಕೃತಿಯಂತೆ ಭಾಸವಾಗುತ್ತದೆ. ಇಂತಹ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುವಾದ ಸಿದ್ಧಹಸ್ತರಿಗೆ ಮಾತ್ರ ಸಾಧ್ಯ. ಸರ್ವಜ್ಞನ ವಚನಗಳ ಅಂತಸ್ಸತ್ವವನ್ನೂ ಪದ್ಯಸೌಂದರ್ಯವನ್ನೂ ಸಂಸ್ಕೃತದಲ್ಲಿ ತಂದಿರುವುದು ಪ್ರೊ. ಸಿ. ಜಿ ಪಿ ಅವರ ಸವ್ಯಸಾಚಿತ್ವಕ್ಕೆ ಸಾಕ್ಷಿಯಾಗಿದೆ.

ಸಾರಸ್ವತ ಪ್ರಪಂಚಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಪ್ರೊ. ಸಿ. ಜಿ. ಪುರುಷೋತ್ತಮ ಅವರಿಗೆ ಪರಮಾತ್ಮನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರ್ದಿಕವಾಗಿ ಹಾರೈಸುತ್ತೇನೆ.

---

**ಡಾ|| ಮಳಲಿ ವಸಂತಕುಮಾರ್,**
ಎಂ.ಎ., ಎಂ.ಫಿಲ್., ಪಿಎಚ್.ಡಿ.,

ಎಲ್. ೨೦,
ಅಧ್ಯಾಪಕರ ನಿವಾಸಗಳು
ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

ತಮ್ಮಿಂದ ಸಂಸ್ಕೃತಕ್ಕೆ ಅನುವಾದಗೊಂಡಿರುವ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ, ಸರ್ವಜ್ಞವಚನಾನಿ ಮತ್ತಿತರೆ ಕವನಗಳನ್ನು ಓದಿದಾಗ ತಾವು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯವಾಹಿನಿಗೆ ಅನುವಾದದ ರಸಸೇತುವಾಗಿದ್ದೀರಿ ಎಂಬುದು ಸ್ಪಷ್ಟವಾಗುತ್ತದೆ.

ಮೂಲದ ಅಂತಃಸತ್ವದ ಬನಿಯನ್ನೂ, ಭಾವಗಂಧಿತ್ವವನ್ನೂ ಅನುವಾದದಲ್ಲಿ ತಂದು ಹೀಗೆ ರಸಾಸ್ವಾದನೆಗೊಳ್ಳುವಂತೆ ಮಾಡುವುದು ಪ್ರಥಮ ದರ್ಜೆಯ ಪ್ರತಿಭೆಗೆ ಮಾತ್ರ ಸಾಧ್ಯವಾದುದು. ಕನ್ನಡದ ಛಂದೋಧಾಟಿಗಳು ಕೆಡದಂತೆ ಯಥಾವತ್ತಾಗಿ ಸಂಸ್ಕೃತಕ್ಕೆ ಅನುವಾದಿಸುವ ತಮ್ಮ ಸಾಹಸ ಏಕಮೇವಾದ್ವಿತೀಯವಾದುದು.

ತಿರುಕನ ಕನಸು ಮತ್ತು ಸರ್ವಜ್ಞನ ವಚನಗಳ ತಮ್ಮ ಅನುವಾದವನ್ನು ಓದಿದಾಗ ಪರಿಣತ ಭಾಗವತ ಹಾರ್ಮೋನಿಯಂ ಮೇಲೆ ಕೈಯಾಡಿಸಿದಾಗಲಿನ ಲಯಬದ್ಧವಾದ ನಿಯತ ರಾಗೋತ್ಪನ್ನದ ಸುಖ ದೊರೆಕೊಳ್ಳುತ್ತದೆ. ಉದಾಹರಣೆಗೆ—

| | |
|---|---|
| ಹೊಳೆಯುತಿದ್ದ ಭಾಗ್ಯವೆಲ್ಲ | ಲಸದ್ ಭಾಗ್ಯ ಸರ್ವಮಪಿ |
| ಕಳೆದು ಹೋಯಿತೆನುತ ತಿರುಕ | ವ್ಯಸರದ್ ಅಹಹ ಕಿಂ ನು ಚೇತಿ |
| ಮರಳಿ ನಾಚಿ ಪೋಗುತಿದ್ದ | ಸಸರ್ಪ ಕಿಲ ಯಥಾ ಪೂರ್ವಂ |
| ಮುನ್ನಿನಂತೆಯೇ | ಅಹೋ: ಲಜ್ಜಯಾ |



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

**ಜಗದಂಬಾ ಮಲ್ಲೇದೇವರು** ಮೈಸೂರು
ಕನ್ನಡ ಅಧ್ಯಾಪಕಿ 22-3-91
ಜೆ. ಎಸ್. ಎಸ್. ಕಾಲೇಜು, ನಂಜನಗೂಡು

ಸರ್ವಜ್ಞನು ಕನ್ನಡನಾಡಿನ ಜನಪರ ಕವಿ. ಸಂಸ್ಕೃತದ ಭರ್ತೃಹರಿಯಂತೆ, ತೆಲುಗಿನ ವೇಮನನಂತೆ, ಹಿಂದಿಯ ಕಬೀರನಂತೆ ಜನಜೀವನವನ್ನು ಚೆನ್ನಾಗಿ ಕಂಡು, ಅದರ ಸಾರಾಸಾರಗಳನ್ನು ವಿವೇಚಿಸಿ ಮನಮುಟ್ಟುವ ಸರಳ ಕನ್ನಡ ಭಾಷೆಯಲ್ಲಿ ಸರ್ವಜ್ಞನು ತ್ರಿಪದಿಗಳನ್ನು ರಚಿಸಿದ್ದಾನೆ. "ಆಡುಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಸರ್ವಜ್ಞನು ಚಿತ್ರಿಸದ ವಿಚಾರವೇ ಲೋಕದಲ್ಲಿಲ್ಲ, ಎನ್ನುವಷ್ಟು ವಿಶಾಲವ್ಯಾಪ್ತಿ ಆತನ ತ್ರಿಪದಿಗಳಿಗಿದೆ. ಭಾಷೆ ಅತ್ಯಂತ ಸರಳವಾದರೂ ಭಾವ ತುಂಬಿ, ಅನೇಕ ಸಂದರ್ಭಗಳಲ್ಲಿ ವಿಷಯ ಗಹನವಾಗಿಯೂ ಇರುವುದುಂಟು.

ಅಂತಹ ಶ್ರೇಷ್ಠ ಕವಿಯ ತ್ರಿಪದಿಗಳನ್ನು ಭಾರತದ ಎಲ್ಲ ಭಾಷೆಗಳಿಗೂ ಅನುವಾದಿಸಿದರೆ ಎಲ್ಲ ಭಾರತೀಯರಿಗೂ ಕನ್ನಡ ಸಾಹಿತ್ಯದ ಕಂಪನ್ನೂ ಪೆಂಪನ್ನೂ ಒದಗಿಸಿದಂತಾಗುತ್ತದೆ. ಅಷ್ಟೇ ಏಕೆ ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಿಗೂ ಅನುವಾದವಾಗುವಷ್ಟು ಸತ್ವ ಹಾಗೂ ಸಾಹಿತ್ಯ ಗುಣವನ್ನು ಸರ್ವಜ್ಞನ ವಚನಗಳು ಹೊಂದಿವೆಯೆನ್ನುವುದು ಕೇವಲ ಅಭಿಮಾನದ ಮಾತಲ್ಲ; ಸತ್ಯಸ್ಯ ಸತ್ಯ.

ಈ ನಿಟ್ಟಿನಲ್ಲಿ ಅತ್ಯಂತ ಸ್ತುತ್ಯವಾದ ಪ್ರಯತ್ನವನ್ನು ಮಾಡಿದ್ದಾರೆ ಪ್ರೊ. ಸಿ. ಜಿ. ಪುರುಷೋತ್ತಮರವರು. ಭಾರತದ ಅತ್ಯಂತ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಇವರು ಸರ್ವಜ್ಞನ ಸವಿಗನ್ನಡದ ನುಡಿಗಳನ್ನು ಅನುವಾದಿಸಿದ್ದಾರೆ. ಸಂಸ್ಕೃತ ಪಂಡಿತರಿಗೆ ಮಾತ್ರವಲ್ಲ, ಸಾಮಾನ್ಯ ಸಂಸ್ಕೃತ ಜ್ಞಾನ ಇದ್ದವರಿಗೂ ಅರ್ಥವಾಗುವಷ್ಟು ಸುಲಭ ಶೈಲಿಯಲ್ಲಿ, ಮೂಲದ ಛಂದಸನ್ನೇ ಬಳಸಿ, ಅರ್ಥಸೌಂದರ್ಯವನ್ನು ಉಳಿಸಿ ಅನುವಾದಿಸಿರುವುದು ಉಭಯಭಾಷೆಗಳಲ್ಲಿಯೂ ಅವರಿಗಿರುವ ಪ್ರಭುತ್ವಕ್ಕೆ ಸಾಕ್ಷಿಯಾಗಿದೆ. ನಿದರ್ಶನಕ್ಕೆ—

ವಿದ್ಯೆಯುಳ್ಳವನ ಮುಖ ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದವನ ಬರಿಮುಖವು ಹಾಳೂರ
ಹದ್ದಿನಂತಿಕ್ಕು ಸರ್ವಜ್ಞ


CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯಾವತೋ ಸುಖಂ ಮುದ್ವಿತನುತೇ ಸುಖಂ
ವಿದ್ಯಾವಿಹೀನಸ್ಯ ಮುಖಕೇವಲಂ ಪರಂ
ಗೃಧ್ರಾಯತೇ ಹಿ ಸರ್ವಜ್ಞ

ಹೀಗೆ ಇವರ ಅನುವಾದ ಅತ್ಯಂತ ಸರಳವೂ, ಸುಂದರವೂ ಸಮರ್ಪಕವೂ ಆಗಿ ನಾವು ಓದುತ್ತಿರುವುದು ಅನುವಾದವೆಂದೆನಿಸದೆ ಮೂಲವನ್ನೇ ಓದುತ್ತಿರುವಂತೆ ಭಾಸವಾಗುತ್ತದೆ. ಶ್ರೀ ಸಿ. ಜಿ. ಪುರುಷೋತ್ತಮ ಅವರು ಏಕಕಾಲದಲ್ಲಿ ಕನ್ನಡ ಭುವನೇಶ್ವರಿಗೂ, ಸಂಸ್ಕೃತದ ಸರಸ್ವತಿಗೂ ಸಂಪಿಗೆ ಆರಳಿಂದ ಪೂಜೆ ಮಾಡಿದಂತಾಗಿದೆ.

ಸರ್ವಜ್ಞನ ತ್ರಿಪದಿಗಳ ಸಮರ್ಥ ಅನುವಾದಕ್ಕಾಗಿ ಪ್ರೊ. ಸಿ. ಜಿ. ಪುರುಷೋತ್ತಮ ಅವರನ್ನು ಅಭಿನಂದಿಸುತ್ತಾ ಹೀಗೆಯೇ ಅವರು ಕನ್ನಡದ ಇತರ ಖ್ಯಾತ ಕವಿಗಳ, ವಚನಕಾರರ ಹಾಗೂ ಜಾನಪದ ಹಾಡುಗಾರರ ಕೃತಿಗಳನ್ನು ಸಂಸ್ಕೃತಕ್ಕೆ ಅನುವಾದಿಸಿ, ಕನ್ನಡ ಕಾವ್ಯದ ಇಂಪು ಕಂಪುಗಳನ್ನು ಭಾರತದಲ್ಲೆಲ್ಲಾ ಪಸರಿಸುವಂತೆ ಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

---

( ಕುವೆಂಪು ಭಾವಗೀತೆಗಳ ಭಾಷಾಂತರ ಕುರಿತು )

ಶ್ರೀ ಎಂ. ವಿ. ಸೀತಾರಾಮಯ್ಯ
ಬೆಂಗಳೂರು–೧೯

........ ತಾವು ಕೈಕೊಂಡು ಯಶಸ್ವಿಯಾಗಿಯೇ ನಡಸಿಕೊಂಡು ಬರುತ್ತಿರುವ ಈ ಭಾಷಾಂತರ ಕಾರ್ಯ ಸ್ತುತ್ಯ ಎಂಬಲ್ಲಿ ಎರಡು ಅಭಿಪ್ರಾಯ ಸಾಧ್ಯವೇ ಇಲ್ಲ. ಇದು ಕನ್ನಡಕ್ಕೆ ಮಾತ್ರ ಅಲ್ಲ, ಬೆಳೆಯದೆ ನಿಂತುಹೋಗಿ Dead Language ಎಂಬ ಸಲ್ಲದ ಅಪಖ್ಯಾತಿಗೆ ಗುರಿಯಾದ ಸಂಸ್ಕೃತಕ್ಕೂ ಒಂದು ದೊಡ್ಡ ಸೇವೆ ಎಂದೇ ನಾನು ತಿಳಿದಿದ್ದೇನೆ. .......ಪ್ರಸ್ತುತ ಭಾಷಾಂತರಗಳು ಚೆನ್ನಾಗಿಯೇ ಇವೆ. ಮೂಲದ ಛಂದಸ್ಸನ್ನು ಕೂಡ ಅನುಸರಿಸಿರುವುದು ಅಭಿನಂದನೀಯ. ತಮ್ಮ ಈ ಅಭಿನಂದನೀಯ ಕಾರ್ಯ ಪ್ರಯತ್ನಗಳು ನಿರ್ವಿಘ್ನವಾಗಿ ನಿರಂತರವಾಗಿ ಸಾಗಿ, ಕನ್ನಡ ಕವಿತೆಯ ಖ್ಯಾತಿಯನ್ನು ಬೆಳಸಿ ಸಂಸ್ಕೃತ ಕಾವ್ಯಸಂಪತ್ತಿಗೆ ಹೊಸ ರತ್ನಗಳನ್ನು ಸೇರಿಸಿ, ಕನ್ನಡ ಸಂಸ್ಕೃತಕ್ಕೆ ಹೊತ್ತ ಕಡವನ್ನು ತೀರಿಸುವಂತಾಗಲಿ! ಭಗವತಿ ಸರಸ್ವತಿ ತಮಗೆ ವಾಕ್ಸಿದ್ಧಿಯನ್ನು ಇನ್ನೂ ಅತಿಶಯವಾಗಿ ಕರುಣಿಸಲಿ!



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಪ್ರೊ. ಸಿ. ಜಿ. ಪುರುಷೋತ್ತಮರವರ ಕೆಲವು ಕೃತಿಗಳು

೧ ಅಥರ್ವವೇದ—ವಿವಿ ಪ್ರಚಾರ ಪುಸ್ತಕಮಾಲೆ ೧೯೫೮ (ನಾಲ್ಕು ಮುದ್ರಣಗಳನ್ನು ಕಂಡಿದೆ)

೨ ಕಾವ್ಯತರಂಗಿಣೀ ಭಾಗ ೧ — ಕುವೆಂಪು ಅವರ ೨೯ ಭಾವಗೀತೆಗಳ ಸಂಸ್ಕೃತ ಪ್ರತಿಕೃತಿ ೧೯೫೯

೩ ಕಾವ್ಯತರಂಗಿಣೀ ಭಾಗ ೨ — ೧) ಹೆಸರಾಂತ ಕನ್ನಡ ೨) ಹಿಂದೀ ಕವಿಗಳ ಸಂಸ್ಕೃತ ಪ್ರತಿಕೃತಿ ೩) ಕನ್ನಡ ಜಾನಪದ ಗೀತೆಗಳ ತದ್ವತ್ ಭಾಷಾಂತರ ೪) ಸ್ವತಂತ್ರ ಸಂಸ್ಕೃತ ನವ್ಯ ಕವಿತೆಗಳು (೨೪೦ ಪುಟಗಳು) ೧೯೬೬

೪ ರಾಮಾಯಣದರ್ಶನಂ—ಎರಡು ಸಂಚಿಕೆಗಳು (೧೫೦೦ ಸಾಲುಗಳು) ಸಂಸ್ಕೃತ ಪ್ರತಿಕೃತಿ ೧೯೭೨ (ಪ್ರಬುದ್ಧ ಕರ್ಣಾಟಕದಲ್ಲಿ)

೫ ಆದಿಚುಂಚನಗಿರಿ ಸುಪ್ರಭಾತ ಸ್ತೋತ್ರ — ಪರಂಪರೆಯ ಸಂಸ್ಕೃತ ವೃತ್ತಗಳಲ್ಲಿ (೧೯೭೬) ಧ್ವನಿಸುರುಳಿ ಆಗಿದೆ

೬ ಭಾರತೀಯ ಧರ್ಮಶಾಸ್ತ್ರಗಳು—೮೫ ಪುಟಗಳು. ಸಂಸ್ಕೃತ ವಿದ್ವತ್ ಪರೀಕ್ಷಾ ಪಠ್ಯಗ್ರಂಥ. ಕರ್ನಾಟಕ ಪಠ್ಯಗ್ರಂಥ ಇಲಾಖೆ

೭ ವಿಶ್ವನಾಥ ಸುಪ್ರಭಾತ ಸ್ತೋತ್ರ—ಸಂಸ್ಕೃತ ಪರಂಪರೆಯ ವೃತ್ತಗಳಲ್ಲಿ; ಆಂಗ್ಲಾನುವಾದದೊಡನೆ. ಅಮೇರಿಕಾ ಮಿಷಿಗನ್ ಸಂಸ್ಥಾನದ ಫ್ಲಿಂಟ್‌ನ ವಿಶ್ವನಾಥ ದೇವತಾ ಸ್ತೋತ್ರ ಧ್ವನಿಸುರುಳಿ ಆಗಿದೆ

೮ ಮಹಾಭಾರತ ವನಪರ್ವ—3100 ಶ್ಲೋಕಗಳ ಸ್ವತಂತ್ರಭಾಗ ಪುಣೆಯ ಭಂಡಾರ್‌ಕರ್ ಸಂಶೋಧನ ಸಂಸ್ಥೆಯ ಸಂಶೋಧಿತ ಕೃತಿಯ ಕನ್ನಡ ಭಾಷಾಂತರ. (ಕನ್ನಡ ಅಧ್ಯಯನ ಸಂಸ್ಥೆ)

೯ ಮಮ ಗೋಪಾಲಃ—ಕುವೆಂಪು ಅವರ ' ನನ್ನ ಗೋಪಾಲ ' ನಾಟಕದ ಸಂಸ್ಕೃತ ಪ್ರತಿಕೃತಿ, ೧೯೯೨

೧೦ ಸರ್ವಜ್ಞ ವಚನಾನಿ—೫೩೮ ಸರ್ವಜ್ಞ ವಚನಗಳ ಸಂಸ್ಕೃತ ಪ್ರತಿಕೃತಿ, ೧೯೯೨

4



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಅರ್ಥಕೋಷ

| | | |
|---|---|---|
| ಅವತಂಸ | ೧ | ಅಲಂಕಾರ |
| ವಿದುರಾಃ | ೪ | ಬಲ್ಲವರು |
| ಮುಖರಿತಃ | ೫ | ಬಾಯ್ದೆರೆವಂತಾದ |
| ನೀರಾಜಯತಿ | ೭ | ಆರತಿಯಾಡಿಸುತ್ತದೆ |
| ಸುರಭಿಃ | ೧೬ | ಕಾಮಧೇನು |
| ಇಂದುಪಃ | ೪೭ | ಇಂದುವಿನ ಒಡೆಯ |
| ಜಟಿಲ | ೬೩ | ಗಂಟಾದ |
| ಭೃಶ | ೬೭ | ಪ್ರಯಾಸದಿಂದ |
| ಸೂಕರ ಹತ ಆಶಿತ | ,, | ನೀಚ ಹಂದಿ ತಿಂದ |
| ಶಾಣೀ ಕೃತ | ೮೧ | ಶಾಣೆ ಹಿಡಿದ |
| ಇಂದ್ರಿಯ ಜಿನ | ೮೩ | ಇಂದ್ರಿಯ ಗೆದ್ದವ |
| ಕಾಸ ರವ ಬೃಂಹಣ | ೧೦೧ | ಕೆಮ್ಮಿನ ದನಿ ಹೆಚ್ಚಳ |
| ಛಂದತಃ | ೧೦೩ | ಇಷ್ಟದಂತೆ |
| ಅವಲೇಢಿ | ೧೧೧ | ನೆಕ್ಕುತ್ತದೆ |
| ಪ್ರಸ್ರವಣ | ೧೧೧ | ಹರಿವು |
| ಜಲಂಧಯಾಃ | ೧೧೬ | ನೀರುಂಬುವರು |
| ಅಶನ ಅರ್ತಿ | ೧೨೮ | ಹಸಿವ ಸಂಕಟ |
| ಶೌಂಡ | ೧೩೨ | ಸಲಗ |
| ಅಹಿಕೇಲಿ | ೧೩೭ | ಹಾವಾಟ |
| ಕುತ್ಸಿತವತ್ ಇವ | ೧೪೦ | ಹೀನಾಯವಾಗಿ |
| ಕದ್ ಶಿವಿರ | ೧೪೯ | ದುಷ್ಟಕತ್ತಲೆ |
| ಮುಧಾ ಏವ | ೧೫೭ | ವ್ಯರ್ಥವಾಗಿ |
| ಶುಂಡ ಆಭ | ೧೬೦ | ಸೊಂಡಿಲಂತಿರುವ |
| ಶಪೇ | ೧೭೬ | ಆಣೆ ಇಕ್ಕುವೆನು |
| ಬಹುಸುವರ್ಣಂ | ೧೮೦ | ಧಂಡಿ ಹೊನ್ನು |
| ಪ್ರಸಹ್ಯ | ೧೮೨ | ಪ್ರಯಾಸದಿಂದ |
| ಅನ್ನ ಆರ್ತಕ ಇಷ್ಟ | ೧೮೯ | ಹಸಿದವನ ಇಷ್ಟ |
| ಗರ್ಧಿನಃ | ೧೯೩ | ಆಶೆ ಬಡುಕನ |
| ಚೂಷಿಕಾ | ೧೯೭ | ಉಣ್ಣೆ |
| ಊರ್ಧಸ್ ಸ್ಥಿತಾ | ೧೯೭ | ಕೆಚ್ಚಲಲ್ಲಿರುವ |
| ಆನಕೀ | ೨೦೫ | ಡೊಳ್ಳುಹೊಡೆವವ |
| ನ ಅತ್ತಿ ಅಪಿ | ೨೦೮ | ಉಣ್ಣಲೂ ಒಲ್ಲ |
| ವ್ಯಗ್ರ ಮೃತಿಃ | ೨೪೧ | ಕಟ್ಟಾ ಬಲಿದಾನ |



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ತಿದ್ದುಪಡಿ

| ವಚನ ಸಂಖ್ಯೆ | ಅಶುದ್ಧ—ಶುದ್ಧ |
|---|---|
| ೨೪ | ಬಿತ್ತಿದ—ಬತ್ತಿದ |
| ೫೭ | ಪರದೈವ—ಪರದೈವ |
| ೬೩, ೬೪, ೬೫ | ಕನ್ನಡ ವಚನ—೬೫, ೬೩, ೬೪ ಸಂ. ವ. |
| ೭೫ | ವೇದಾಗಮಾನಿ—ವೇದಾಗಮಾಶ್ಚ |
| ೮೩ | ಲುಪ್ತ—ಉಪ್ತ |
| ೯೧, ೯೪, ೧೪೯ | ಭಯಃ, ಭಯಸ್—ಭಯಂ |
| ೧೫೨ | ಬಿಂದುನಾದಜ್ಞಃ ಸ್ವಕೇಂದ್ರ—ಬಿಂದುನಾದ ಸುಬೋಧನೇಂದ್ರ |
| ೧೫೩ | ಕರ್ವರ್ಣಜೇ—ಕರ್ವರ್ಣಜೋ |
| ೧೬೦ | ಕಚ್ಚವಾಟ್—ಕಚ್ಛವಾಟ್ |
| ೧೭೧ | ಹೊಬ್ಬುಳಿ—ಬೊಬ್ಬುಳಿ |
| ೧೭೪, ೧೭೫ | ಕನ್ನಡ ವಚನ—೧೭೫, ೧೭೪ (ಸಂ. ವ.) |
| ೧೮೦ | ಕಾದಿರಂತ್ಯಂ—ಕ್ವಾದಿರಂತ್ಯಂ |
| ೧೮೯ | ಪ್ಯನ್ನಾರ್ತಕೇಷ್ಟಂ—ಕ್ಷುಧಿತಾಯ ಸ್ಪಷ್ಟಂ |
| ೨೦೫ | ಚಾನಕೀ ನೀಚಾಯ—ಘನಪಟಹಿ ನಟಕಾಯ |
| ೨೧೨ | ಕಾಗೆಯಗುಳನು—ನೋಡಿ ೫೩೮ |
| ೨೧೩, ೨೧೪, ೨೧೫, ೨೧೬ | ಕನ್ನಡ—ನೋಡಿ ೨೧೨, ೨೧೩, ೨೧೪, ೨೧೫ (ಸಂ. ವ.) |
| ೩೦೧ | ತ್ವಕ್ ಚಾಸ್ಥಿ—ಸಕ್ತಾಸ್ಥಿ |
| ೩೧೧ | ಜ್ಯೋಕಲ್ಪೋ—ಜ್ಯೋತಿಕಲ್ಪಾ |
| ೩೬೬ | ಸುಬುದ್ಧಿ—ಸುಬುದ್ಧಿ |
| ೩೬೯ | ಮಾಸ್ತೃತಂ ತೇನ—ಮಾಸ್ತೃತ ತರೇಣ |
| ೩೭೧ | ಸುಗಮವಾದೋ—ಸುಗಮಪಾಠೋ |
| ೩೭೯ | ವಾಗ್ವಿದೇ ಪುರುಷಾಯ—ವಾಗ್ವಿದಃ ಪುರುಷಸ್ಯ |
| ೩೮೪ | ವಾಗ್ಬಲಾಜ್ಞಾ ಯಾಥಮಾಯ—ವಾಗ್ಬಲಾಜ್ಞಸ್ಯಾಥಮಸ್ಯ |
| ೩೯೫ | ಮನೋ ಹ್ಯಾತ್ಮವಶ—ಮನಾಂಸ್ಯಾತ್ಮವಶ |
| ೪೧೧ | ತ್ರರವಶ್ಚ—ತರುವರಾಃ |
| ೪೪೪ | ಸರ್ವೇಪಿ—ಸರ್ವೇಽಪಿ |
| ೪೪೯ | ಭವಸಿ—ಭವತಿ |
| ೪೮೮ | ಗೃಹಸ್ಥಸ್ಚ—ಗೃಹಸ್ಥಶ್ಚ |
| ೪೯೨ | ಕೈಂಕರ್ಯೇಽಪಿ—ಕೈಂಕರ್ಯೇಽಪಿ |
| ೪೯೩ | ಮಣಥರಂ—ಮಣಭರಂ |
| ೫೩೫ | ಪಲಾಂಡುಂಃ—ಪಲಾಂಡುಃ |



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ವಿಷಯಾನುಕ್ರಮಣಿಕೆ


| | | |
|---|---|---|
| | ಭೂಮಿಕೆ | 3 |
| ೧ | ಗುರುಶಿಷ್ಯ ಪದ್ಧತಿ | ೪ |
| ೨ | ದೈವ ಪದ್ಧತಿ | ೧೦ |
| ೩ | ಭಕ್ತ ಪದ್ಧತಿ | ೧೮ |
| ೪ | ಜ್ಞಾನ ಪದ್ಧತಿ | ೨೨ |
| ೫ | ಯೋಗ ಪದ್ಧತಿ | ೩೬ |
| ೬ | ಧ್ಯಾನ ಪದ್ಧತಿ | ೮೪ |
| ೭ | ರಾಜನೀತಿ | ೬೨ |
| ೮ | ಸಂಗಪದ್ಧತಿ | ೭೦ |
| ೯ | ವಿಧಿವಶಪದ್ಧತಿ | ೭೬ |
| ೧೦ | ಮತಧರ್ಮ ಪದ್ಧತಿ | ೭೭ |
| ೧೧ | ಮೂರ್ಖ ಪದ್ಧತಿ | ೯೨ |
| ೧೨ | ಔಚಿತ್ಯ ಪದ್ಧತಿ | ೯೪ |
| ೧೩ | ಸಾಮಾನ್ಯ ನೀತಿಪದ್ಧತಿ | ೯೮ |
| ೧೪ | ಧನಪದ್ಧತಿ | ೧೦೨ |
| ೧೫ | ವಿದ್ಯಾಪದ್ಧತಿಃ | ೧೦೬ |
| ೧೬ | ಮಾತುಪದ್ಧತಿ | ೧೦೮ |
| ೧೭ | ವ್ಯವಹಾರನೀತಿಪದ್ಧತಿ | ೧೧೨ |
| ೧೮ | ಸ್ತ್ರೀ ಸ್ತುತಿ–ನಿಂದಾ ಪದ್ಧತಿ | ೧೨೮ |
| ೧೯ | ದಾಂಪತ್ಯ ಪದ್ಧತಿ | ೧೩೪ |
| ೨೦ | ವಿಷಮ ದಾಂಪತ್ಯ ಪದ್ಧತಿ | ೧೩೬ |
| ೨೧ | ಜಾರಜಾರೆಯರ ಪದ್ಧತಿ | ೧೩೮ |
| ೨೨ | ಅನ್ನ ಪದ್ಧತಿ | ೧೪೨ |
| ೨೩ | ಜ್ಯೋತಿಷ–ಶಕುನ ಪದ್ಧತಿ ೨೪ ಬೆಡಗಿನ ಪದ್ಧತಿ | ೧೪೫ |
| | ಕನ್ನಡ ವಚನಗಳ ಅಕಾರಾದಿ | ೧೫೭ |
| | ಸಂಸ್ಕೃತ ವಚನಾನಾಂ ಸೂಚೀ | ೧೬೬ |
| | ಅರ್ಥಕೋಷ (ಮುಂದುವರಿದುದು) | ೧೭೬ |




CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಜಿ ಉಪರಾಷ್ಟ್ರಪತಿ ಸನ್ಮಾನ್ಯ ಬಿ. ಡಿ. ಜತ್ತಿಯವರು
ಕೃತಿಯನ್ನು ಬಿಡುಗಡೆ ಮಾಡುತ್ತಿರುವುದು



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಓಂ

# ಸರ್ವಜ್ಞ ವಚನಾನಿ

## ಸರ್ವಜ್ಞ ವಚನಗಳ ಸಂಸ್ಕೃತ ಅನುವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸರ್ವಜ್ಞ ವಚನಗಳು

## ಪೀಠಿಕೆ

೧ ನಂದಿಯನು ಏರಿದನ ಚಂದಿರನ ಸೂಡಿದನ
ಕಂದನ ಬೇಡಿ ನಲಿದಾನು ನೆನೆವುತ್ತ
ಮುಂದೆ ಪೇಳುವೆನು ಸರ್ವಜ್ಞ

೨ ಸರ್ವಜ್ಞನೆಂಬುವನು ಒರ್ವನೇ ಜಗಕೆಲ್ಲ
ಸರ್ವಜ್ಞರೀರ್ವರಾಗಲ್ಕೆ ತನಗಾಗಿ
ಕರ್ಮವೆಸಗಿಹನೆ ಸರ್ವಜ್ಞ

೩ ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ

೪ ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲಿದರು ಇದ್ದು ಬಲವಿಲ್ಲ ಸಾಹಿತ್ಯ-
ವೆಲ್ಲರಿಗಿಲ್ಲ ಸರ್ವಜ್ಞ

೫ ಹೇಳಲರಿಯೆನು ನಾನು, ಹೇಳೆನಲು ಹೇಳಿದೆನು
ಫಾಳಲೋಚನನ ಶರಣರ ಆಳಾಗಿ
ಹೇಳಿದೆನು ಕಾಣೊ ಸರ್ವಜ್ಞ

೬ ಎನ್ನ ಮನಸಿಗೆ ನೆನಹು ಪನ್ನಗಧರ ಕೊಟ್ಟ
ಬಿನ್ನಣದಿಂದ ಸ್ತುತಿಗೈದು ಪೊಗಳುವೆ
ಚೆನ್ನಮೂರುತಿಯ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸರ್ವಜ್ಞ ವಚನಾನಿ

## ಪೀಠಿಕಾ ಪ್ರಕರಣಂ

ನಂದಿವಾಹನ ದೇವ ಚಂದ್ರಾವತಂಸ ಸುತ-
ಸುಂದರಂ ಸುಪ್ರಾರ್ಥ್ಯ ಸಂಸ್ಮೃತ್ಯ ತುಷ್ಟಃ ಸ್ವ-
ಬಂಧಂ ಭಣಾಮಿ ಸರ್ವಜ್ಞ ೧

ಸರ್ವಜ್ಞ ಇತಿ ಯಸ್ಸ ಸರ್ವಲೋಕ್ಕೈಕೋಽಸ್ತಿ
ಭವತಿ ಸರ್ವಜ್ಞದ್ವಯೋ ಜಗತಿ ತೇನ ಕಿಂ
ಸುವಿಹಿತಂ ಕರ್ಮ ಸರ್ವಜ್ಞ ೨

ಸರ್ವಜ್ಞ ನಾಮಾ ಸ ಗರ್ವಜಾತೋ ನೈವ
ಸರ್ವೇಷು ಚೈಕೈಕಮಧಿಗಮ್ಯ ವಿದ್ಯಾಸು
ಪರ್ವತಃ ಸ ಕಿಲ ಸರ್ವಜ್ಞ ೩

ಷಿದುರಾ ನ ಸರ್ವಸ್ಯ ವಿದುರಾ ನ ಬಹವಶ್ಚ
ವಿದುರೇಷು ನ ಹಿ ಬಲಂ ಸರ್ವೇಷು ಸಾಹಿತ್ಯ-
ವೋದೋಽಪಿ ನಾಸ್ತಿ ಸರ್ವಜ್ಞ ೪

ನಾಲಂ ತ್ವಹಂ ಭಣಿತುಮಾಲಪಂ ಮುಖರಿತಃ
ಫಾಲಲೋಚನ ಶರಣ ಕಿಂಕರೇಣ ತು ಮಯಾ
ಪ್ರಲಪಿತಂ ಕಿಮಪಿ ಸರ್ವಜ್ಞ ೫

ಮನ್ಮನಸಿ ಸಂಸ್ಮೃತಿಂ ಪನ್ನಗಧರೋ ದದೌ
ವಿಜ್ಞಾಪ್ಯ ತನ್ಮಯಸ್ತವನೇನ ಶಂಸಾಮಿ
ಚಿನ್ಮೂರ್ತಿಮಾತ್ರ ಸರ್ವಜ್ಞ ೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೧. ಗುರುಶಿಷ್ಯ ಪದ್ಧತಿ

೭ ಗುರುವಿನಾ ವಿಸ್ತರದ ಪರಿಯು ನಾನೇನೆಂಬೆ
ಮೆರೆವ ಬ್ರಹ್ಮಾಂಡದೊಳಹೊರಗನವ ಬೆಳಗಿ
ಪರಿಪೂರ್ಣನಿಪ್ಪ ಸರ್ವಜ್ಞ

೮ ಹರ ತನ್ನೊಳಿರ್ದುಂ ಗುರು ತೋರದೇ ತಿಳಿವುದೇ
ಮರದೊಳಗಗ್ನಿಯಿರುತಿರ್ದುಂ ತನ್ನ ತಾ-
ನರಿಯುದೇಕೆಂದ ಸರ್ವಜ್ಞ

೯ ಜ್ಯೋತಿಯಿಂದಲಿ ನೇತ್ರ ರಾತ್ರಿಯೊಳು ಕಾಂಬಂತೆ
ಸೂತ್ರದಿಂ ಧಾತನರಿವಂತೆ ಶಿವನ ಗುರು-
ನಾಥನಿಂದರಿಗು ಸರ್ವಜ್ಞ

೧೦ ವಿದ್ಯೆ ಕಲಿತಡೆ ಇಲ್ಲ, ಬುದ್ಧಿ ಕಲಿತಡೆ ಇಲ್ಲ
ಉದ್ಯೋಗ ಮಾಡಿದಡೆ ಇಲ್ಲ, ಗುರುಮುಖವು
ಇದ್ದಲ್ಲದಿಲ್ಲ ಸರ್ವಜ್ಞ

೧೧ ಮಂಡೆ ಬೋಳಾದೊಡಂ, ದಂಡ ಕೋಲ್ಪಿಡಿದೊಡಂ
ಹೆಂಡತಿಯ ಬಿಟ್ಟು ನಡೆದೊಡಂ ಗುರುಮುಖವ
ಕಂಡಲ್ಲದಿಲ್ಲ ಸರ್ವಜ್ಞ

೧೨ ಊರಿಂಗೆ ದಾರಿಯನು ಆರು ತೋರಿದಡೇನು
ಸಾರಾಯದ ನಿಜವ ತೋರುವ ಗುರುವು ತಾ-
ನಾರಾವಡೇನು ಸರ್ವಜ್ಞ

೧೩ ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲರಿಯರು ಗುರುವಿಂದ
ಬಂಧುಗಳು ಉಂಟೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೧. ಗುರು ಶಿಷ್ಯ ಪದ್ಧತಿಃ

ಗುರುದೈವ ವಿಸ್ತೃತೇಃ ಪರಿಮಿತಿಂ ಕಿಂ ವಚ್ಮಿ
ನೀರಾಜಯತಿ ಕಿಲಾಂತರ್ ಬಹಿರ್ ಬ್ರಹ್ಮಾಂಡ-
ಪರಿಪೂರ್ಣತಾಂ ಹಿ ಸರ್ವಜ್ಞ ೭

ಗುರುದೇಶನಾಂ ವಿನಾ ಹರವಿದ್ ಆತ್ಮನಿ ಕೋಽಸ್ತಿ
ತರುನಿಲೀನೋ ಜಾತವೇದಾ ನ ವೇದ ಕಿಂ
ಪರಿಲಯಂ ತತ್ರ ಸರ್ವಜ್ಞ ೮

ಜ್ಯೋತಿಷಿ ಜ್ವಲತಿ ಸತಿ ನೇತ್ರೇಽಪಿ ಪಶ್ಯತಃ
ಸೂತ್ರೇಣ ಧಾತುರನುಮೀಯತೇ ಗುರುಣಾ ಚ
ಭೂತನಾಥೋಽಪಿ ಸರ್ವಜ್ಞ ೯

ವಿದ್ಯಾಧಿಗಮನಂ ಚ ಬುದ್ಧ್ಯಾ ನಿಗಮನಂ ಚ
ಸಿದ್ಧಿರುದ್ಯೋಗೇ ಚ ನೈವ ಗುರುದೃಷ್ಟಿರಪಿ
ವಿದ್ಯತೇ ನ ಯದಿ ಸರ್ವಜ್ಞ ೧೦

ಮುಂಡನೇಽಪಿ ಚ ಕೃತೇ ದಂಡೇಽಪಿ ಚಾದೃತೇ
ಮುಂಡಿತ ಕುಟುಂಬಿನೀ ತ್ಯಾಗೇ ಗುರುಂ ವಿನಾ
ಖಂಡಿತಫಲಂ ಹಿ ಸರ್ವಜ್ಞ ೧೧

ಗಂತವ್ಯಮಾರ್ಗ ಸುನಿಯಂತಾ ತು ಕೋಽಪ್ಯಸ್ತು
ಸತ್ಯಸ್ಯ ನೈಜತಾ ದರ್ಶಕಃ ಸದ್ಗುರುಃ
ಕೋಽಸ್ತಿ ಚೇತ್ ಕಿಂ ನು ಸರ್ವಜ್ಞ ೧೨

ಬಾಂಧವಾಸ್ತ್ವಾಗತ್ಯ ಯಾಂತಿ ಭುಕ್ತ್ವಾ ಚ ತೇ
ಬಂಧನಂ ಕಸ್ಯಾಪಿ ನ ಹಿ ಹರತಿ ಗುರುಸದೃಶ-
ಬಾಂಧವಃ ಕೋಽಸ್ತಿ ಸರ್ವಜ್ಞ ೧೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೪ ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ ಗುರುರಾಯ
ಬಂಧನವ ಕಳೆವ ಸರ್ವಜ್ಞ

೧೫ ಷರುಶನಗಳಾರರಿಂ ಪುರುಷರು ಮೂವರಿಂ
ಪರತತ್ತ್ವದಿರವು ಬೇರೆಂದು ತೋರಿದ
ಗುರು ತಾನೆ ಹರನು ಸರ್ವಜ್ಞ

೧೬ ಸುರತರುವು ಮರನಲ್ಲ ಸುರಭಿಯೊಂದಾವಲ್ಲ
ಪರುಷ ಪಾಷಾಣದೊಳಗಲ್ಲ ಗುರುರಾಯ
ನರರೊಳಗಲ್ಲ ಸರ್ವಜ್ಞ

೧೭ ಗುರುವ ನರನೆಂದವಗೆ ಹರನ ಶಿಲೆಯೆಂದವಗೆ
ಕರುಣ ಪ್ರಸಾದವನು ಎಂಜಲೆಂದವಗೆ
ನರಕ ತಪ್ಪುವುದೆ ಸರ್ವಜ್ಞ

೧೮ ಹಿರಿಯ ನಾನೆನಬೇಡ ಗುರುವ ನಿಂದಿಸಬೇಡ
ಬರೆವರ ಕೂಡ ಹಗೆ ಬೇಡ ಬಂಗಾರ-
ದೆರವು ಬೇಡೆಂದ ಸರ್ವಜ್ಞ

೧೯ ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡನಾಗಿ
ಮತ್ತೆ ಪಾದದ ಕೆರನಾಗಿ ಗುರುವಿನ
ಹತ್ತಿಲಿರು ಎಂದ ಸರ್ವಜ್ಞ

೨೦ ಬಳ್ಳಿಗುರುಡರು ಕೂಡಿ ಹಳ್ಳವನು ಬಿದ್ದಂತೆ
ಒಳ್ಳೆಯ ಗುರುವಿನುಪದೇಶವಿಲ್ಲದಿರೆ
ಎಲ್ಲಿಯದು ಮುಕ್ತಿ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪಿತುರಪಿ ಚ ಸದ್ಗುರೋರಸ್ತ್ಯೇ ಕಮಂತರಂ
ಪಿತ್ರೋಪನೀಯತೇ ಗುರುಸನ್ನಿಧಿಂ ಗುರುಃ
ಹಂತಿ ಬಂಧಂ ತು ಸರ್ವಜ್ಞ ೧೪

ದರ್ಶನಾತ್ ಷಟ್ಕತಃ ಪೂರುಷ ತ್ರಿತಯಾತ್ ಚ
ಪರತತ್ತ್ವ ಸಂಸ್ಥಿತಿಶ್ಚಾನ್ಯೇತಿ ದರ್ಶಯೇನ್
ಗುರುರೇವ ಹರಃ ಸರ್ವಜ್ಞ ೧೫

ಸುರತರುಸ್ತರುಕೋ ನ ಸುರಭಿರರ್ನ ಗೌರೇವ
ಪರುಷಮಣಿರನ್ಯ ಪಾಷಾಣೋ ನ ಗುರುರಪಿ ಚ
ನರಸಮಃ ನೈವ ಸರ್ವಜ್ಞ ೧೬

ಗುರುವರಂ ನರ ಇತಿ ಚ ಹರಮಪಿ ಶಿಲಾ ಚೇತಿ
ಕರುಣಾಪ್ರಸಾದಂ ಕದುಚ್ಛಿಷ್ಟಮಿತಿ ವದತಿ
ನಾರಕಿಃ ಸ ಖಲು ಸರ್ವಜ್ಞ ೧೭

ಗುರುರಹಂ ಮಾ ಬ್ರೂಹಿ ಗುರುನಿಂದನಂ ಚ ಮಾ
ಕರಣಿಕಜನೈರ್ಮಾಸ್ತು ಕಲಹೋಽಪಿ ಕನಕಾಧ-
ನುರ್ಣತಾ ಮಾಸ್ತು ಸರ್ವಜ್ಞ ೧೮

ವೃಷಭ ಇವ ದಾಸ ಇವ ಪಾರ್ಶ್ವತಶ್ಛಾಯೇವ
ಶುಶ್ರೂಷಯಾ ಪಾದರಕ್ಷೇವ ಸದ್ಗುರೋರ್
ವಶ್ಯತಾಂ ಭಜತು ಸರ್ವಜ್ಞ ೧೯

ಜಾತ್ಯಂಧಕಾಃ ಸಮಂ ಗರ್ತೇ ಪತಂತೀವ
ಸದ್ಗುರೋರುಪದೇಶನಂ ವಿನಾ ಲಭ್ಯತೇ
ಕುತ್ರ ಮುಕ್ತಿಸ್ತು ಸರ್ವಜ್ಞ ೨೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೨೧ ಮೊಸರು ಕಡೆಯಲು ಬೆಣ್ಣೆಯೊಸೆದು ತೋರುವ ತೆರದಿ
ಹಸನುಳ್ಳ ಗುರುವಿನುಪದೇಶದಿಂ ಮುಕ್ತಿ
ವಶವಾಗದಿಹುದೆ ಸರ್ವಜ್ಞ

೨೨ ಹೇಳಿದ್ದೆ ಹೇಳುವರು ಕೇಳಿದ್ದೆ ಕೇಳುವರು
ಕೇಳಿದ್ದ ಕೇಳಿ ಸುಖಿಸುವರು ಗುರುಗಳ
ಹೇಳಿಕೆಯೆ ಬೇರೆ ಸರ್ವಜ್ಞ

೨೩ ಹಂದಿ ಚಂದನದ ಸುಗಂಧವನು ಬಲ್ಲುದೆ
ಒಂದನು ತಿಳಿಯಲರಿಯದ ಗುರುವಿಂಗೆ
ನಿಂದೆಯೇ ಬಹುದು ಸರ್ವಜ್ಞ

೨೪ ಭಕ್ತಿಯಿಲ್ಲದ ಶಿಷ್ಯಗೊತ್ತಿ ಕೊಟ್ಟುಪದೇಶ
ಬಿತ್ತಿದ ಕೆರೆಯ ಬಯಲಲ್ಲಿ ರಾಜಾನ್ನ
ಬಿತ್ತಿ ಬೆಳೆದಂತೆ ಸರ್ವಜ್ಞ

೨೫ ಶ್ವಾನ ತೆಂಗಿನ ಕಾಯ ತಾನು ಮೆಲಬಲ್ಲುದೆ
ಹೀನ ಮನದವನಿಗುಪದೇಶವಿತ್ತಡೆ
ಹಾನಿ ಕಾಣಯ್ಯ ಸರ್ವಜ್ಞ

೨೬ ಹೇಳಬಲ್ಲಡೆ ಗುರುವು ಕೇಳಬಲ್ಲಡೆ ಶಿಷ್ಯ
ಹೇಳಲುಂ ಕೇಳಲರಿಯದಾ ಗುರುಶಿಷ್ಯ-
ಮೇಳವೆಂತೆಂದ ಸರ್ವಜ್ಞ

೨೭ ಕಟ್ಟಿಗೆಗಳೆರಡನ್ನು ಕಟ್ಟಿಟ್ಟರೇನಹುದು
ಗಟ್ಯಾಗಿ ಎರಡ ಮಥಿಸಲ್ಕೆ ಬೇಗೆಯದು
ಒಟ್ಟಿಕೊಂಡಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದಧ್ನಿ ಮಥಿತೇ ಯಥಾ ಚೋದ್ಭವತಿ ಮಂಥಜಂ
ಸದ್ಗುರೋರುಪದೇಶತಸ್ತಥಾ ಮುಕ್ತಿರಪಿ
ಸಿದ್ಧ್ಯತಿ ನ ಕಿಂ ನು ಸರ್ವಜ್ಞ ೧೦

ಕಥಿತಮಪಿ ಕಥಯಂತಿ ಶ್ರುತಮಪಿ ಚ ಶೃಣ್ವಂತಿ
ಶ್ರುತಮಪಿ ಚ ಸಂಶೃತ್ಯ ಸುಖಿತಾ ಭವಂತಿ ಗುರು-
ಕಥನಮಸ್ಯೃದ್ಧಿ ಸರ್ವಜ್ಞ ೧೧

ಸೂಕರಃ ಕಿಂ ಗಂಧಮಂಕಯತಿ ಚಂದನೇ
ಏಕಂ ಸದಿಶಿ ಯೋ ನ ಜಾನಾತಿ ಸ ಚ ಗುರುರ್
ಲೋಕನಿಂದ್ಯೋ ಹಿ ಸರ್ವಜ್ಞ ೧೨

ಭಕ್ತಿದೂರ ಕುಶಿಷ್ಯ ದತ್ತೋಪದೇಶಸ್ತು
ಅಸ್ತೋದಕಾಶ್ರಯಾಶ್ರಿತ ಭುವಿ ಚ ರಾಜಶಾ-
ಲ್ಯುಪ್ತ ಯಥೇವ ಸರ್ವಜ್ಞ ೧೩

ನಾರಿಕೇಲಂ ಶುನಿಃ ದಾರಯಿತ್ವಾತ್ತಿ ಕಿಂ
ಗುರುಣೋಪದೇಶೇನ ಹೀನಮನಸೇ ತಥಾ
ಭೂರಿ ಹಾನಿಸ್ತು ಸರ್ವಜ್ಞ ೧೪

ದೇಶಿಕತ್ವಾದ್ ಗುರುಃ ನಿಶಮನಾತ್ ಶಿಷ್ಯೋಽಪಿ
ದೇಶನಾ ನಿಶಮನೇ ಸಂಮೂಢ ಗುರುಶಿಷ್ಯ-
ವಶ್ಯತಾ ಕುತ್ರ ಸರ್ವಜ್ಞ ೧೫

ಕಾಷ್ಠಕ ದ್ವಂದ್ವಸ್ಯ ಸುಷ್ಠು ಬಂಧೇನ ಕಿಂ
ಧೃಷ್ಟಂ ದ್ವಯೋರ್ ಬಲಾತ್ ಮಥನೇನ ದಾಹಕಃ
ಸ್ಪಷ್ಟಮುದ್ಭವತಿ ಸರ್ವಜ್ಞ ೧೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೨೮ ಮೂರಿಟ್ಟರಾರಕ್ಕು ಆರು ಹನ್ನೆರಡಕ್ಕು
ಹೇರುವ ಗೊಡ್ಡು ಹಯನಕ್ಕು ಗುರುಕರುಣ
ತೋರುವ ದಿನಕೆ ಸರ್ವಜ್ಞ

೨೯ ಹಸಿಯ ಸಮಿಧೆಯು ತಾದು ಹೊಸೆದರುಂಟೇ ಕಿಚ್ಚು
ವಿಷಯಂಗಳುಳ್ಳ ಮನುಜಂಗೆ ಗುರುಕರುಣ
ವಶವರ್ತಿಯಹುದೆ ಸರ್ವಜ್ಞ

೩೦ ಗುರುಪಾದ ಸೇವೆ ತಾ ದೊರೆಕೊಂಡಿತಾದಡೆ
ಪಿರಿದಪ್ಪ ಪಾಪ ಪರಿವುದು ಕರ್ಪೂರದ
ಗಿರಿಯು ಬೆಂದಂತೆ ಸರ್ವಜ್ಞ

೩೧ ಬೆಟ್ಟ ಕರ್ಪೂರವುರಿದು ಬೊಟ್ಟಿಡಲು ಬೂದಿಲ್ಲ
ನೆಟ್ಟನೆ ಗುರುವಿಗೆರಗಿದನ ಸಂಸಾರ
ಸುಟ್ಟು ಹೋಗುವುದು ಸರ್ವಜ್ಞ

೩೨ ಗುರುರಾಯನುಪದೇಶ ದೊರೆಕೊಂಡಿತಾದಡೆ
ಪರಿವುದು ಪಾಪವೆಂತೆನಲು ವಜ್ರದಿಂ
ಗಿರಿಯು ಹೊಯಿದಂತೆ ಸರ್ವಜ್ಞ

೩೩ ಗುರುವಿಂದ ಬಂಧುಗಳು ಗುರುವಿಂದ ದೈವಗಳು
ಗುರುವಿಂದಲಹುದು ಪುಣ್ಯವದು ಜಗಕೆಲ್ಲ
ಗುರುವಿಂದ ಮುಕ್ತಿ ಸರ್ವಜ್ಞ

## ೨ ದೈವಪದ್ಧತಿ

೩೪ ಶಿವಪೂಜೆ ಮಾಡಿದಡೆ ಶಿವನ ಕೊಂಡಾಡಿದಡೆ
ಶಿವನಲ್ಲಿ ನೆನಹು ನೆಲಸಿರ್ದಡಾತಂಗೆ
ಶಿವಲೋಕದಿರವು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತ್ರಿಕಮೇತಿ ಷಟ್ಕತಾಂ ಷಟ್ಕಮು ದ್ವಾದಶಂ
ರಿಕ್ತಾ ಚ ಗೌರವಮೃತದಾಯಿನೀ ಗುರುಕೃಪಾ-
ಸಕ್ತಿಕಾಲೇ ತು ಸರ್ವಜ್ಞ ೨೮

ಧರ್ಷಣಾತ್ ಆರ್ದ್ರಸಮಿಧಶ್ಚ ಹುತಾಗ್ನಿರಿಹ
ವಿಷಯ ಬದ್ಧಸ್ಯ ಮನುಜಸ್ಯ ಗುರುಕರುಣಾಪಿ
ವಶಮಿಯಾತ್ ಕುತ್ರ ಸರ್ವಜ್ಞ ೨೯

ಗುರುಪಾದ ಸೇವನಂ ಪರಿಲಭೇತಾತ್ರ ಯದಿ
ಪರಿಪಕ್ವಪಾಪಮುಪಹ್ರಿಯತೇ ಚ ಕರ್ಪೂರ-
ಗಿರಿದಹನಮಿವ ಹಿ ಸರ್ವಜ್ಞ ೩೦

ಕರ್ಪೂರ ಶೈಲೇಽಗ್ನಿತರ್ಪಿತೇ ನ ಹಿ ಭಸ್ಮ
ಅರ್ಪಯಿತ್ವಾ ಗುರೌ ಪ್ರಣತಸ್ಯ ಸಂಸಾರ-
ಕಾರ್ಪಣ್ಯಮಿಹ ನ ಸರ್ವಜ್ಞ ೩೧

ಗುರುದೇವದೇಶನಾ ಕರಗತಾ ಸಾ ಚ ಯದಿ
ಪರಿಹೃತಂ ಪಾಪಮಿಹ ತದ್ಯಥಾ ವಜ್ರೇಣ
ಗಿರಿನಿಘಾತ ಇವ ಸರ್ವಜ್ಞ ೩೨

ಗುರುಣೈವ ಬಾಂಧವಾ ಗುರುಣೈವ ದೇವತಾಃ
ಗುರುಣೈವ ಲಭ್ಯಂ ಹಿ ಪುಣ್ಯಮಿಹ ಮುಕ್ತಿಶ್ಚ
ಗುರುಣೈವ ಜಗತಿ ಸರ್ವಜ್ಞ ೩೩

## ೨. ದೈವ ಪದ್ಧತಿಃ

ಶಿವಪೂಜನಂ ತಥಾ ಶಿವಮಹತ್ ಕೀರ್ತನಂ
ಶಿವನಿಭಾ ಸಂಸ್ಮೃತಿ ಸ್ಥಾಪನಂ ನಿಯತಮಿವ
ಶಿವಲೋಕದಾಯಿ ಸರ್ವಜ್ಞ ೩೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೩೫ ಸಿರಿಯು ಬಂದರೆ ಲೇಸು ತಿರದ ಜವ್ವನ ಲೇಸು
ಮರಣವಿಲ್ಲಾದ ಮಗ ಲೇಸು ಲಿಂಗಕೆ
ಶರಣವೇ ಲೇಸು ಸರ್ವಜ್ಞ

೩೬ ಮಲಯಜದ ಮರದೊಳಗೆ ಸಲೆ ಗಂಧವಿಪ್ಪಂತೆ
ಸುಲಲಿತವಾದ ಶರಣರ ಹೃದಯದಿ
ನೆಲಸಿಹನು ಶಿವನು ಸರ್ವಜ್ಞ

೩೭ ಗಂಗೆಯಾ ತಡಿ ಲೇಸು ಮಂಗಳನ ಬಲ ಲೇಸು
ಜಂಗಮ ಭಕ್ತರ ನಡೆ ಲೇಸು ಶರಣರ
ಸಂಗವೇ ಲೇಸು ಸರ್ವಜ್ಞ

೩೮ ಅಂಗದಿಚ್ಛೆಗೆ ಹರಿದು ಭಂಗಗೊಳದಿರು ಮನುಜ
ಲಿಂಗದೊಳು ನೆನಹನಿರಿಸಿ ಸತ್ಯದಲಿರಲು
ಲಿಂಗ ನೀನಪ್ಪೆ ಸರ್ವಜ್ಞ

೩೯ ಲಿಂಗದಲಿ ಮನವಾಗಿ ಲಿಂಗದಲಿ ನೆನಹಾಗಿ
ಲಿಂಗದಲಿ ನೋಟ ನುಡಿ ಕೂಟವಾದವನು
ಲಿಂಗವೇ ಅಕ್ಕು ಸರ್ವಜ್ಞ

೪೦ ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕೆ
ದೇಗುಲವೆ ಇಲ್ಲ ಸರ್ವಜ್ಞ

೪೧ ಆತುಮದ ಲಿಂಗವನು ಪ್ರೀತಿಯಲಿ ಅರಿದಂಗೆ
ಸೂತಕಗಳಿಲ್ಲ ಭವವಿಲ್ಲ ಪಂಚ ಮಹ
ಪಾತಕಗಳಿಲ್ಲ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವರಮಿಹ ಧನಾಗಮಃ ಸ್ಥಿರಯೌವನಂ ವರಂ
ಮರಣದೂರಃ ಪುತ್ರಕೋ ವರಂ ಲಿಂಗಸ್ಯ
ಶರಣಂ ವರಂ ಹಿ ಸರ್ವಜ್ಞ ೩೫

ಮಲಯಜೇ ವೃಕ್ಷೇ ವಿಮಲಗಂಧ ವಸತಿರಿವ
ಸುಲಲಿತ ಶ್ರೀಶರಣ ಹೃದಯೇ ನಿವಸತಿ ಶಿವ-
ಫಾಲನೇತ್ರಸ್ತು ಸರ್ವಜ್ಞ ೩೬

ಗಂಗಾತಟಂ ವರಂ ಮಂಗಲ ಬಲಂ ವರಂ
ಜಂಗಮ ಸುಭಕ್ತ ಚರಿತಂ ವರಂ ಶರಣಜನ-
ಸಂಗೋ ವರಂ ಹಿ ಸರ್ವಜ್ಞ ೩೭

ಅಂಗಿಕೇಚ್ಛಾರತಃ ಭಂಗಮಿಹಿ ಮಾ ಮನುಜ
ಲಿಂಗೇ ಸ್ಮೃತಿಂ ನಿಧಾಯ್ಯೈವ ಸತ್ಯೇ ರತಃ
ಲಿಂಗಲೀನೋಽಪಿ ಸರ್ವಜ್ಞ ೩೮

ಲಿಂಗೇ ಮನೋ ಯಸ್ಯ ಲಿಂಗೇ ಚ ಸಂಸ್ಮೃತಿಃ
ಲಿಂಗೇ ಚ ವಾಙ್ ನಯನ ಸಂಗಾಶ್ಚ ಯಸ್ಯ ಕಿಲ
ಲಿಂಗಂ ಸ ಭವತಿ ಸರ್ವಜ್ಞ ೩೯

ಸೃಷ್ಟಿರ್ ವಿಸೃಷ್ಟಿರ್ ನ ಮೂರ್ಧಾ ನ ಪಾದೋ ನ
ಘಾತೋ ನ ವಿಹತಿರ್ ನ ರೋಧೋ ನ ಲಿಂಗಾಯ
ವಾಸ್ತವ್ಯಮಪಿ ನ ಸರ್ವಜ್ಞ ೪೦

ಆತ್ಮನಿ ಚ ಲಿಂಗಮಿಹ ಪ್ರೀತ್ಯಾ ತು ಯೋ ವೇತ್ತಿ
ಸೂತಕಂ ತಸ್ಯ ನ ಭವೋ ನಾಸ್ತಿ ಪಂಚಕಂ
ಪಾತಕಂ ನೈವ ಸರ್ವಜ್ಞ ೪೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೪೨ ಅಷ್ಟವಿಧದರ್ಚನೆಯನೆಷ್ಟು ಮಾಡಿದಡೇನು
ನಿಷ್ಠೆ ನೆಲೆಗೊಳದೆ ಭಜಿಸುವ ಪೂಜೆಯದು
ನಷ್ಟ ಕಾಣಯ್ಯ ಸರ್ವಜ್ಞ

೪೩. ಬತ್ತಿ ಹೆತ್ತುಪ್ಪವನು ಹೊತ್ತಿಸಿದ ಫಲವೇನು
ನಿತ್ಯ ನೆಲೆಗೊಡದೆ ಭಜಿಸುವ ಪೂಜೆಯು
ಹತ್ತಿಗೇಡೆಂದ ಸರ್ವಜ್ಞ

೪೪ ಎಣಿಸುತಿರ್ಪುದು ಬೆರಳು ಗುಣಿಸುತಿರ್ಪುದು ಜಿಹ್ವೆ
ಮನ ಹೋಗಿ ಹಲವ ನೆನೆದರೆ ಹಾಳೂರ
ಶುನಕನಂತಕ್ಕು ಸರ್ವಜ್ಞ

೪೫ ಲಿಂಗಕ್ಕೆ ತೋರಿಸುತ ನುಂಗುವಾತನೆ ಕೇಳು
ಲಿಂಗವುಂಬುವುದೆ ಇದನರಿತು ಕಪಿಯೆ ನೀ
ಜಂಗಮಗೆ ನೀಡು ಸರ್ವಜ್ಞ

೪೬ ಹಲವನೋದಿದಡೇನು ಚಲುವನಾದಡದೇನು
ಕುಲವೀರನೆನಿಸಿ ಫಲವೇನು ಲಿಂಗದ
ಒಲುಮೆ ಇಲ್ಲದಲೆ ಸರ್ವಜ್ಞ

೪೭ ಕಟ್ಟಲೂ ಬಿಡಲು ಶಿವ ಬಟ್ಟಲವ ಕದ್ದನೇ
ಕಟ್ಟಲೂ ಬೇಡ ಬಿಡಬೇಡ ಕಣ್ಮನವ
ಕಟ್ಟಿದರೆ ಸಾಕು ಸರ್ವಜ್ಞ

೪೮ ಒಬ್ಬನಲ್ಲದೆ ಜಗಕೆ ಇಬ್ಬರುಂಟೆ ಮತ್ತೆ
ಒಬ್ಬ ಸರ್ವಜ್ಞ ಕರ್ತನೀ ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅಷ್ಟವಿಧಮರ್ಚನಂ ಸುಷ್ಠ್ವರ್ಪಿತಂ ವೃಥಾ
ನಿಷ್ಠಾ ಸುಸಂಸ್ಥಾಪಿತಾ ನ ಚೇತ್ ಭಜನೇನ
ನಷ್ಟಪೂಜ್ಯೈವ ಸರ್ವಜ್ಞ ೪೨

ಘೃತಘನಾ ವರ್ತಿಕಾ ದೀಪ್ತಾಪಿ ನಿಷ್ಫಲಂ
ನಿತ್ಯತತ್ತ್ವಂ ನ ಚೇತ್ ಸ್ಥಾಯಿ ತತ್ ಪೂಜನಂ
ವ್ಯರ್ಥತೂಲಂ ಹಿ ಸರ್ವಜ್ಞ ೪೩

ಗಣಯತಿ ಸದಾಂಗುಲೀ ಗುಣಿತಂ ಚ ಜಿಹ್ವಯಾ
ಮನಸಿ ಸುಸ್ಮರ್ಯತೇ ನಾನಾ ವಿಜನವಾಸ-
ಶುನಕಭೂರೇವ ಸರ್ವಜ್ಞ ೪೪

ಲಿಂಗಾಯ ದರ್ಶಯಿತ್ವಾ ಗಿಲಸಿ ಶೃಣು ಸಖೇ
ಲಿಂಗಂ ತದತ್ತಿ ಕಿಂ ಬುಧ್ವೇದಮಪಿ ದೇಹಿ
ಜಂಗಮಾಯಾತ್ರ ಸರ್ವಜ್ಞ

ಬಹ್ವಧೀತಂ ವೃಥಾ ವಿಹಿತರೂಪಂ ವೃಥಾ
ಅಹಿತೇಷು ವೀರಕ್ತ್ವಮಪಿ ವೃಥಾ ಲಿಂಗಾತ್ಮ-
ಸ್ನೇಹೋ ನ ಚೇದ್ಧಿ ಸರ್ವಜ್ಞ ೪೬

ಬಂಧಿತುಂ ಮೋಚಯಿತುಮಿಂದುಪಃ ಚೋರೋ ನ
ಬಂಧನಂ ಮೋಕ್ಷಮಪಿ ನ ಹಿ ತಸ್ಯ ತವ ಕರಣ-
ಬಂಧನಮಲಂ ಹಿ ಸರ್ವಜ್ಞ ೪೭

ಏಕ ದೈವಂ ಜಗತ್ ದ್ವಿಕದೈವಕಂ ನೈವ
ಏಕಸ್ತು ಸರ್ವಜ್ಞಕರ್ತಾಸ್ತಿ ವಿಶ್ವಂ ಸ-
ದೈಕದೈವಂ ಹಿ ಸರ್ವಜ್ಞ ೪೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೪೯ ಆ ದೇವ ಈ ದೇವ ಮಾದೇವನೆನಬೇಡ
ಆ ದೇವರ ದೇವ ಭುವನದ ಪ್ರಾಣಿಗಳಿ-
ಗಾದವನೆ ದೇವ ಸರ್ವಜ್ಞ

೫೦ ಚಿತ್ರವನು ನವಿಲೊಳು ವಿಚಿತ್ರವನು ಗಗನದೊಳು
ಪತ್ರ ಪುಷ್ಪಗಳ ವಿವಿಧ ವರ್ಣಗಳಿಂದ
ಚಿತ್ರಿಸಿದರಾರು ಸರ್ವಜ್ಞ

೫೧ ಇಂಗಿನೊಳು ನಾತವನು ತೆಂಗಿನೊಳಗೆಳನೀರ
ಭೃಂಗ ಕೋಗಿಲೆಯ ಕಂಠದೊಳು ಗಾಯನವ
ತುಂಬಿದವರಾರು ಸರ್ವಜ್ಞ

೫೨ ತನ್ನಲಿಹ ಲಿಂಗವನು ಮನ್ನಿಸಲಿಕರಿಯದೇ
ಬಿನ್ನಣದಿ ಕಟೆದ ಪ್ರತಿಮೆಗಳಿಗೆರಗುವ
ಅನ್ಯಾಯ ನೋಡು ಸರ್ವಜ್ಞ

೫೩ ಉಣಬಂದ ಜಂಗಮಕೆ ಉಣಬಡಿಸಲೊಲ್ಲದಲೆ
ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ
ಬಣಗುಗಳ ನೋಡು ಸರ್ವಜ್ಞ

೫೪ ಕಲ್ಲು ಕಲ್ಲನೆ ಒಟ್ಟಿ ಕಲ್ಲಿನಲಿ ಮನೆಕಟ್ಟಿ
ಕಲ್ಲ ಮೇಲ್ಕಲ್ಲ ಕೊಳುವ ಮಾನವರೆಲ್ಲ
ಕಲ್ಲಿನಂತಿಹರು ಸರ್ವಜ್ಞ

೫೫ ಕಲ್ಲು ಗುಂಡಿನಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಲ್ಲ-
ದಿಲ್ಲ ಕಾಣಯ್ಯ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದೇವಃ ಸ ದೇವ್ಯೋಽಯಮನ್ಯೋಽನ್ಯೇತಿ ಮಾ ನಿಗದ
ದೇವೇಷು ಭುವನಜ ಪ್ರಾಣಿಕುಲ ಭಾವನೋ
ದೇವ ನಾಮಾಸ್ತಿ ಸರ್ವಜ್ಞ ೪೯

ಚಿತ್ರಂ ಮಯೂರೇ ವಿಚಿತ್ರಮಥ ಗಗನೇಽಪಿ
ಪತ್ರ ಪುಷ್ಪಾಕರಂ ವಿಧವಿಧೈರ್ ವರ್ಣೈರ್ ವಿ-
ಚಿತ್ರಯತಿ ಕೋಽತ್ರ ಸರ್ವಜ್ಞ ೫೦

ಸಾರಮಪಿ ಹಿಂಗಕೇ ನಾರಿಕೇಲೇ ಜಲಂ
ಸುರಸಗಾನಂ ಭೃಂಗ ಪಿಕಕಂಠಯೋರ್ ಜಗತಿ
ಪೂರಿತಂ ಕೇನ ಸರ್ವಜ್ಞ ೫೧

ಆತ್ಮನಿಷ್ಠಂ ಲಿಂಗಮಾವಮಾನಯತಿ ನೈವ
ಸೂತ್ನ ಸಂಸ್ಥಾಪಿತ ಪ್ರತಿಮಾ ಪ್ರಣಮನಾದಿ
ಯತ್ನಸ್ ತ್ವಸಾಧು ಸರ್ವಜ್ಞ ೫೨

ಅನ್ನಾರ್ಥಿ ಜಂಗಮಾಯಾನ್ನಂ ನ ಸಂದಾಯ
ಅನ್ನದೂರಾಯ ಲಿಂಗಾಯ ದತ್ವಾ ಪುನಃ
ಪ್ರಣಮಂತಿ ಪಶ್ಯ ಸರ್ವಜ್ಞ ೫೩

ಉಪಲಮುಪಲೋಪರಿ ಸ್ಥಾಪಯಿತ್ವಾ ಗೃಹಂ
ಸುಪರಿನಿರ್ಮಾಯೋಪಲಂ ಪ್ರತಿಷ್ಠಾಪಯಂ-
ತ್ಯುಪಲ ಸದೃಶಾಸ್ತು ಸರ್ವಜ್ಞ ೫೪

ಗೋಲೋಪಲೋಪರಿ ಸುಮಲ್ಲಿಕಾಃ ಸಂಸ್ಥಾಪ್ಯ
ಫಾಲಂ ಮುಹುರ್ಮುಹುಃ ಸುವಿನಮ್ಯ ತಾಡನಾತ್
ಶೂಲಂ ಫಲಂ ಹಿ ಸರ್ವಜ್ಞ ೫೫

2

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೫೬ ಹೆಣ್ಣಿನಾ ಹೊನ್ನಿನಾ ಮಣ್ಣಿನಾ ಬಲೆಯನ್ನು
ಹಣ್ಣಿಸಿ ಜಗವನದರೊಳು ಹಿಡಿದ ಮು-
ಕ್ಕಣ್ಣ ನೋಡು ಸರ್ವಜ್ಞ

೫೭ ಕನಕದಿಂ ಹಿರಿದಿಲ್ಲ ದಿನಪನಿಂ ಬೆಳಕಿಲ್ಲ
ಬೆನಕನಿಂದಧಿಕ ಗಣವಿಲ್ಲ ವರದೈವ
ತ್ರಿಣಯನಿಂದಿಲ್ಲ ಸರ್ವಜ್ಞ

೫೮ ಭಾಷೆಯಿಂ ಮೇಲಿಲ್ಲ ದಾಸನಿಂ ಕೀಳಿಲ್ಲ
ಮೋಸದಿಂದಧಿಕ ಕೇಡಿಲ್ಲ ಪರದೈವ
ಈಶನಿಂದಿಲ್ಲ ಸರ್ವಜ್ಞ

೫೯ ನಿಂಬೆಗಿಂ ಹುಳಿಯಿಲ್ಲ ತುಂಬೆಗಿಂ ಕಿರಿದಿಲ್ಲ
ನಂಬಿಗೆಯಿಂದಧಿಕ ಗುಣವಿಲ್ಲ ದೈವ ತಾ
ಶಂಭುವಿಂದಿಲ್ಲ ಸರ್ವಜ್ಞ

## ೩. ಭಕ್ತಪದ್ಧತಿ

೬೦ ಖುಲ್ಲ ಮಾನವ ಬೇಡೆ ಕಲ್ಲು ತಾ ಕೊಡುವುದೇ
ಸೊಲ್ಲರಿವ ಶಿವನ ಬೇಡಿದಡೆ ಬಯಸಿರ್ದು-
ದೆಲ್ಲವನು ಕೊಡುವ ಸರ್ವಜ್ಞ

೬೧ ಭಕ್ತಿಯಿಂದಲೆ ಮುಕ್ತಿ ಭಕ್ತಿಯಿಂದಲೆ ಶಕ್ತಿ
ಭಕ್ತಿ ವಿರಕ್ತಿಯುಳಿದರೀ ಜಗದಲ್ಲಿ
ಮುಕ್ತಿಯಿಲ್ಲೆಂದ ಸರ್ವಜ್ಞ

೬೨ ಕಂಡವರು ಕೆರಳುವರು ಹೆಂಡತಿಯು ಕನಲುವಳು
ಖಂಡಿತದಿ ಲಕ್ಷ್ಮಿ ತೊಲಗುವಳು ಶಿವನೊಲುಮೆ
ಕಂಡುಕೊಳದಿರಲು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತರುಣೆರಿತಿ ಹೇಮ ಇತಿ ಧರಣೆರಿತಿ ಜಾಲಿಕಾಂ
ಪರಿಸಾರ್ಯ ಜಗದಖಿಲಮಾಬದ್ಧ್ಯ ಗೃಹ್ಣಾತಿ
ಹರಗುರುಃ ಪಶ್ಯ ಸರ್ವಜ್ಞ ೫೬

ಕನಕಾದ್ ಅಮೂಲ್ಯಂ ನ ದಿನಪಾತಿ ದೀಪ್ತಿರ್ ನ
ಗಣಪೋ ವಿನಾಯಕಾದ್ ಅಧಿಕೋ ನ ದೈವಮಪಿ
ತ್ರಿಣಯನಾನ್‌ನಾಸ್ತಿ ಸರ್ವಜ್ಞ ೫೭

ಭಾಷಾಧಿಕಂ ನೈವ ದಾಸಾಚ್ಚ ಸಾಧಮಃ
ಮೂಷಣಾದ್ ಅಧಿಕದೂಷ್ಯಂ ನ ಪರದೈವ-
ಮೀಶಾಧಿಕಂ ನ ಸರ್ವಜ್ಞ ೫೮

ನಿಂಬಾಧಿಕಾಮ್ಲಂ ನ ತುಂಬಾನ್ನ ಚಾಲ್ಪಮ್ ವಿ-
ಶ್ರಂಭಾಧಿಕೋ ಗುಣೋ ನ ಹಿ ಜಗತಿ ದೈವಮಪಿ
ಶಂಭುಂ ವಿನಾ ನ ಸರ್ವಜ್ಞ ೫೯

## ೩. ಭಕ್ತ ಪದ್ಧತಿಃ

ಕ್ಷುಲ್ಲ ಮನುಜಾರ್ಥಿತಃ ಶೈಲೋಽಪ್ರದಾಯಕಃ
ಸನ್ನುತೇಂಗಿತಬೋಧ ಶಿವನಿಧಿಂ ಸಂಪ್ರಾರ್ಥ್ಯ
ಫಲಿತಾರ್ಥ ಏವ ಸರ್ವಜ್ಞ ೬೦

ಭಕ್ತ್ಯಾ ವಿಮುಕ್ತಿರಪಿ ಭಕ್ತ್ಯಾ ಸುಶಕ್ತಿರಪಿ
ಭಕ್ತಿನಿಷ್ಠ ವಿರಕ್ತಿರಿಹ ಜಗತಿ ನಾಸ್ತಿ ಯದಿ
ಮುಕ್ತಿರಪಿ ನೈವ ಸರ್ವಜ್ಞ ೬೧

ಪರಿಚಿತಾಃ ಕ್ಷುಭ್ಯಂತಿ ದಾರಾಃ ಪ್ರಕುಪ್ಯಂತಿ
ತ್ವರಿತಮುಪಯಾತಿ ಲಕ್ಷ್ಮೀಃಕೃಪಾ ಯದಿ ನಾಸ್ತಿ
ಹರರತಿರ್ ಮನಸಿ ಸರ್ವಜ್ಞ ೬೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೬೩ ಜ್ವರಬಂದ ಮನುಜಂಗೆ ನೊರೆವಾಲು ವಿಷವಕ್ಕು
ನರಕದಲಿ ಬೀಳ್ವ ಅಧಮಂಗೆ ಶಿವಭಕ್ತಿ
ಹಿರಿದು ವಿಷವಕ್ಕು ಸರ್ವಜ್ಞ

೬೪ ಕಡು ಭಕ್ತನಾಗಲಿ ಜಡೆ ಧಾರಿಯಾಗಲಿ
ನಡೆವ ವೃತ್ತಿಯಲಿ ನಡೆಯದೊಡೆ ಆ ಭಕ್ತಿ
ಹೊಡೆವ ಶಂಖೆಂದ ಸರ್ವಜ್ಞ

೬೫ ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ

೬೬ ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು
ಮನದಲ್ಲಿ ನೆನೆಯದಿರುವವನು ದೇಗುಲದ
ಕೊನೆಯಲಿದ್ದೇನು ಸರ್ವಜ್ಞ

೬೭ ಈಶಭಕ್ತನು ಆಗಿ ವೇಶಿಯನು ಸಾರಿಹರೆ
ಮೀಸಲಾಗಿರ್ದ ಬೋನವನು ಹಂದಿಯು
ಮೂಸಿ ಹೋದಂತೆ ಸರ್ವಜ್ಞ

೬೮ ಪರುಷ ಕಬ್ಬುನದೆಸೆವ ಕರಡಿಗೆಯೊಳಡಗಿಹುದೆ
ಹರಭಕ್ತಿಯುಳ್ಳ ಮಹಿಮ ಸಂಸಾರದೊಳು
ಎರಕವಾಗಿಹನೆ ಸರ್ವಜ್ಞ

೬೯ ತೆಪ್ಪವನು ನಂಬಿದಡೆ ತಪ್ಪದಲೆ ತಡಿಗಹುದು
ಸರ್ಪಭೂಷಣನ ನಂಬಿದಡೆ ಭವಭಯ
ತಪ್ಪಿ ಹೋಗುವುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪಟುಭಕ್ತಿರಪಿ ವೃಥಾ ಜಟಿಲಶೀರ್ಷಂ ವೃಥಾ
ದಿಷ್ಟವೃತ್ತೌ ವರ್ತನಂ ನ ಚೇತ್ ಭಕ್ತಿರಿಹ
ಘುಷ್ಟಶಂಖ ಇವ ಸರ್ವಜ್ಞ ೬೩

ಚಿತ್ತಶೂನ್ಯೇನ ಕಿಂ ಚೈತ್ಯಪ್ರದಕ್ಷಿಣಂ
ನಿತ್ಯಂ ವೃಷಸ್ತೈಲ ಪೇಷಕಂ ಪರಿವೃತ್ಯ
ವ್ಯರ್ಥಂ ಪ್ರಯಾತಿ ಸರ್ವಜ್ಞ ೬೪

ಜ್ವರಮತ್ತ ಮನುಜಾಯ ಗರಲಮಿವ ನವಪಯಃ
ನರಕಾಭಿಮುಖಿನೋಽಧಮಾಯ ಶಿವಭಕ್ತಿರಪಿ
ಖರಗರಲಮೇವ ಸರ್ವಜ್ಞ ೬೫

ಮನಸಿ ನಿಧ್ಯಾಯತೋ ಭಿನ್ನಂ ನ ಗೃಹಮತೇ
ಮನಸಿ ಯೋ ನ ಸ್ಮರತಿ ದೇವಕುಲ ಶಿಖರೇಽಪಿ
ಶೂನ್ಯ ಹೃದಯಸ್ಸ ಸರ್ವಜ್ಞ ೬೬

ಈಶಭಕ್ತೋಽಪಿ ಸನ್ ವೇಶ್ಯಾರತಶ್ಚ ಯದಿ
ಭೃಶರಕ್ಷಿತಂ ಭೋಜನಂ ಗೃಹೇ ಸೂಕರಹ-
ತಾಶಿತನಿಭಂ ಹಿ ಸರ್ವಜ್ಞ ೬೭

ಪರುಷಮಣೇರಪ್ಯಯಃ ಕಾರಂಡ ಗುಪ್ತೋ ನ
ಹರಭಕ್ತಿ ಸಂವಿಷ್ಟ ಮಹಿಮಾಪಿ ಸಂಸಾರ
ವಿರತಿ ಗುಣ ಏವ ಸರ್ವಜ್ಞ ೬೮

ತರಣಿ ವಿಶ್ವಾಸೇನ ಪಾರಂಗತೋ ಭವೇತ್
ಉರಗ ಭೂಷಣ ಹರೇ ವಿಶ್ವಸಿಹಿ ಭವ ಭಯಃ
ಪರಿಹೃತೋ ಭವತಿ ಸರ್ವಜ್ಞ ೬೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೭೦ ಲಿಂಗದಾ ಗುಡಿ ಲೇಸು ಗಂಗೆಯಾ ತಡಿ ಲೇಸು
ಲಿಂಗಸಂಗಿಗಳ ನುಡಿ ಲೇಸು ಭಕ್ತರ
ಸಂಗವೇ ಲೇಸು ಸರ್ವಜ್ಞ

೭೧ ಸಾರವನು ಬಯಸುವೊಡೆ ಕ್ಷಾರವನು ಬೆರಸುವುದು
ಮಾರಸಂಹರನ ನೆನೆದಡೆ ಮೃತ್ಯು ತಾ
ದೂರಕ್ಕೆ ದೂರ ಸರ್ವಜ್ಞ

೭೨ ಸತಿಯರಿರ್ದಡದೇನು ಸುತರಾಗಿ ಫಲವೇನು
ಶತಕೋಟಿ ಧನವ ಗಳಿಸೇನು ಭಕ್ತಿಯ
ಸ್ಥಿತಿಯಿಲ್ಲದನಕ ಸರ್ವಜ್ಞ

೭೩ ಭಕ್ತಿಗೆರಡಕ್ಕರವು ಮುಕ್ತಿಗೆರಡಕ್ಕರವು
ಭಕ್ತಿಯಿಂ ಮುಕ್ತಿ ಪಡೆವರೆ ಬಿಡದೆ ಆ-
ರಕ್ಷರವ ಹೇಳೊ ಸರ್ವಜ್ಞ

೭೪ ಕಚ್ಚೆ ಕೈ ಬಾಯಿಗಳು ಇಚ್ಛೆಯಲಿ ಇದ್ದಿಹರೆ
ಅಚ್ಯುತನಪ್ಪ ಅಜನಪ್ಪ ಲೋಕದಲಿ
ನಿಶ್ಚಿಂತನಪ್ಪ ಸರ್ವಜ್ಞ

೭೫ ಗಾದೆ ಓದುಗಳೇಕೆ ವೇದ ಆಗಮವೇಕೆ
ವೇದಾಂತವಾದ ತನಗೇಕೆ ಶರಣರ
ಹಾದಿ ಹಿಡಿದವಗೆ ಸರ್ವಜ್ಞ

## ೪. ಜ್ಞಾನಪದ್ಧತಿ

೭೬ ಜ್ಞಾನದಿಂ ಮೇಲಿಲ್ಲ ಶ್ವಾನನಿಂ ಕೀಳಿಲ್ಲ
ಭಾನುವಿಂದಧಿಕ ಬೆಳಗಿಲ್ಲ ಜಗದೊಳಗೆ
ಜ್ಞಾನವೇ ಮಿಗಿಲು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಲಿಂಗಯುತ ಮಂದಿರಂ ಗಂಗಾತಟಂ ವರಂ
ಲಿಂಗಸಂಗೀ ವಚನಮಪಿ ವರಂ ಭಕ್ತಜನ-
ಸಂಗೋ ವರಂ ಹಿ ಸರ್ವಜ್ಞ ೭೦

ಸಾರಮಿಚ್ಛಂತಿ ಚೇತ್ ಕ್ಷಾರ ಮೇಲನಮಸ್ತು
ಮಾರ ಸಂಹರ ಸಂಸ್ಮರಣಮಸ್ತಿ ಚೇತ್ ಮೃತಿಃ
ದೂರತೋ ದ್ರವತಿ ಸರ್ವಜ್ಞ ೭೧

ಪತ್ನೀ ಜನೋ ವೃಥಾ ಪುತ್ರೋದ್ಭವೋ ವೃಥಾ
ಶತಕೋಟಿ ಧನ ಸಂಚಯೋ ವೃಥಾ ಯದಿ ಭಕ್ತಿ-
ರಿಕ್ತಾ ಭವತಿ ಸರ್ವಜ್ಞ ೭೨

ದ್ವ್ಯಕ್ಷರಾ ಭಕ್ತಿರಪಿ ದ್ವ್ಯಕ್ಷರಾ ಮುಕ್ತಿರಪಿ
ಭಕ್ತ್ಯೈ ವಿಮುಕ್ತಿ ಸಂಪಾದನೇ ಸತತಂ ಷ-
ಡಕ್ಷರಂ ಜಪತ ಸರ್ವಜ್ಞ ೭೩

ಕಚ್ಛಂ ಕರಶ್ಚ ವಾಕ್ ಇಚ್ಛಾನುಯಾಂತಿ ಚೇತ್
ಅಚ್ಯುತಶ್ಚಾಜಶ್ಚ ಭವತಿ ಲೋಕೇ ನರಃ
ನಿಶ್ಚಿಂತ ಏವ ಸರ್ವಜ್ಞ ೭೪

ಗಾಥಾದಿ ಪಠನಮಪಿ ವೇದಾಗಮಾನಿ ಕಿಮು
ವೇದಾಂತವಾದ ಮಥನಂ ಚ ಕಿಂ ಶಿವಶರಣ-
ವೀಥೀಗತಸ್ಯ ಸರ್ವಜ್ಞ ೭೫

## ೪. ಜ್ಞಾನಪದ್ಧತಿಃ

ಜ್ಞಾನಾತ್ ಪರಂ ನೈವ ಧ್ಯಾನಾಚ್ಚ ನಾಪರಃ
ಭಾನೋಶ್ಚ ಸಮಧಿಕಂ ಜ್ಯೋತಿರ್ನ ಜಗತೀಹ
ಜ್ಞಾನಂ ಪರಂ ಹಿ ಸರ್ವಜ್ಞ ೭೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೭೭ ಎತ್ತ ಹೋದರು ಮನವ ಹತ್ತಿಕೊಂಡೇ ಬಹುದು
ಮತ್ತೊಬ್ಬ ಮುನಿದುಕೊಳಲರಿಯು ಜ್ಞಾನದ
ಬಿತ್ತು ಲೇಸೆಂದ ಸರ್ವಜ್ಞ

೭೮ ನಾಟರಾಗವು ಲೇಸು ತೋಟಮಲ್ಲಿಗೆ ಲೇಸು
ಕೂಟವದು ಲೇಸು ಹಿರಿಯರೊಳು ಶಿವನ ಆರಿ-
ದಾಟವೇ ಲೇಸು ಸರ್ವಜ್ಞ

೭೯ ಕ್ಷೀರದಲಿ ಘೃತ ವಿಮಲ ನೀರಿನೊಳು ಶಿಖಿಯಿರ್ದು-
ಆರಿಗು ತೋರದದರಂತೆ ಎನ್ನೊಳಗೆ
ಸಾರಿಹನು ಶಿವನು ಸರ್ವಜ್ಞ

೮೦ ಕಲ್ಲಿನಲಿ ಮಣ್ಣಿನಲಿ ಮುಳ್ಳಿನಾ ಮೊನೆಯಲ್ಲಿ
ಎಲ್ಲಿ ನೆನೆದಲ್ಲಿ ಶಿವನಿರ್ಪ ಅವ ನೀನಿ-
ದ್ದಲ್ಲಿಯೇ ಇರುವ ಸರ್ವಜ್ಞ

೮೧ ಸಣ್ಣನೆಯ ಮಳಲೊಳಗೆ ನುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆವ ಪಟದೊಳಗೆ ಇರುವಾತ
ತನ್ನೊಳಗೆ ಇರನೆ ಸರ್ವಜ್ಞ

೮೨ ಆನೆ ಕನ್ನಡಿಯಲ್ಲಿ ತಾನಡಗಿ ಇಪ್ಪಂತೆ
ಜ್ಞಾನವುಳ್ಳವರ ಹೃದಯದಲಿ ಪರಶಿವನು
ತಾನಡಗಿ ಇಹನು ಸರ್ವಜ್ಞ

೮೩ ಸತ್ತು ಹುಟ್ಟುವರೆಂಬ ಮಿಥ್ಯದಾ ನುಡಿಯೇಕೆ
ಬಿತ್ತಿದರೆ ಬೀಜ ಬೆಳೆದಂತೆ ವೃಕ್ಷ ತಾ
ಸತ್ತು ಹುಟ್ಟುವುದೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯತ್ರ ಗಚ್ಛೇತ್ ತತ್ರ ಸಕ್ತಂ ಮನೋ ಯಾತಿ
ಹರ್ತುಮನ್ಯೇನ ತತ್ ಶಕ್ಯಂ ನ ಜ್ಞಾನಂ ಸು-
ವಿಸ್ತೃತಂ ಜಯತಿ ಸರ್ವಜ್ಞ ೭೭

ಜಾನಪದ ಗಮಕಮುಪವನಜಾತ ಮಲ್ಲಿಕಾ
ಜ್ಞಾನಿಜನ ಸಂಗೋ ವರಂ ತಥಾ ಶೈವಸು-
ಜ್ಞಾನಂ ವರಂ ಹಿ ಸರ್ವಜ್ಞ ೭೮

ಕ್ಷೀರೇ ಘೃತಂ ವಿಮಲ ನೀರೇ ಶಿಖೀ ಯಥಾ
ಪರಿನಿಷ್ಠಿತಾವದೃಶ್ಯೌ ಪರ್ವೈರ್ ಮಯಿ ಶಿವಃ
ಸಾರಭೂತೋಽಸ್ತಿ ಸರ್ವಜ್ಞ ೭೯

ಪ್ರಸ್ತರೇ ಮೃತ್ಕಣೇ ದುಸ್ತರೇ ಕಂಟಕೇ
ಯತ್ರ ಸಂಸ್ಮರಸಿ ತತ್ರೈವಾಸ್ತಿ ಶಿವವಿಭುಃ
ತ್ವತ್ಸಮೀಪೇಽಪಿ ಸರ್ವಜ್ಞ ೮೦

ಅಣುರೂಪ ಸಿಕತಾಸು ಶಾಣೀಕೃತೋಪಲೇ
ವರ್ಣಾಂಚಿತೇ ಪಟೇ ಯೋ ವಸತಿ ಸೋಽಪ್ಯಾತ್ಮ-
ಸನ್ನಿಧೌ ಕಿಂ ನ ಸರ್ವಜ್ಞ ೮೧.

ಪೀನೋ ಗಜೋ ಯಥಾ ಕ್ಷೀಣೋಽಸ್ತಿ ದರ್ಪಣೇ
ಜ್ಞಾನಿಜನ ಹೃದಯಮಪಿ ಪರಶಿವಃ ಸ್ವಯಮೇವ
ಲೀನೋಽಧಿವಸತಿ ಸರ್ವಜ್ಞ ೮೨

ಪ್ರೇತೋಽತ್ರ ಜಾತ ಇತಿ ಮಿಥ್ಯಾ ಪ್ರವಾಕ್ ಕುತಃ
ಲುಪ್ತಮಂಕುರಮೇತಿ ಬೀಜಂ ಯಥಾ ತರೋಃ
ಪ್ರೇತಸ್ತಥಾ ನ ಸರ್ವಜ್ಞ ೮೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೮೪ ಮುತ್ತು ನೀರೊಳು ಪುಟ್ಟಿ ಮತ್ತೆ ನೀರಪ್ಪುದೇ
ತತ್ತ್ವವನರಿದ ಶಿವಯೋಗಿ ಸಂಸಾರ–
ದತ್ತಲೊಂದುವನೆ ಸರ್ವಜ್ಞ

೮೫ ಗಗನಕ್ಕೆ ಹೊಗೆ ಹೋಗಿ ಮಿಗೆ ಜಗಕೆ ಬಪ್ಪುದೇ
ಅಘಹರನ ಪದವ ಸವಿದವನು ಸಂಸಾರ–
ದಘವ ಹೊದ್ದುವನೆ ಸರ್ವಜ್ಞ

೮೬ ಆನೆ ಮುಕುರದೊಳಡಗೆ ಭಾನು ಸರಸಿಯೊಳಡಗೆ
ಆನೆನ್ನ ಗುರುವಿನೊಳಗಡಗೆ ಸಂಸಾರ
ತಾನದೆತ್ತಣದು ಸರ್ವಜ್ಞ

೮೭ ಇಂದ್ರಿಯುವ ತೊರೆದಾತ ವಂದ್ಯನಹ ಜಗಕೆಲ್ಲ
ಬಿಂದುವಿನ ಭೇದವರಿವ ಮಹಾತ್ಮನು
ಬೆಂದ ನುಲಿಯಂತೆ ಸರ್ವಜ್ಞ

೮೮ ತನ್ನ ತಾನರಿದಂಗೆ ಮುನ್ನ ಹೊದ್ದದು ಮಾಯೆ
ಉನ್ನತವಪ್ಪ ಗಜವೇರಿ ಬಪ್ಪವನ
ಕುನ್ನಿ ಕಚ್ಚುವುದೆ ಸರ್ವಜ್ಞ

೮೯ ಜಾತಿ ಸೂತಕವಳಿದು ಭ್ರಾಂತಿನಾ ಗುಣವಳಿದು
ಆಶುಮನ ನೆಲೆಯು ನೆರೆಯರಿದು ನಿಂದವಗೆ
ಯಾತರ ಚಿಂತೆ ಸರ್ವಜ್ಞ

೯೦ ತನ್ನ ತಾನರಿದಂಗೆ ಭಿನ್ನ ಭಾವನೆಯಿಲ್ಲ
ತನ್ನವರು ಇಲ್ಲ ಪರರಿಲ್ಲ ತ್ರೈಭುವನ
ತನ್ನೊಳಗೆ ಇಹುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವ್ಯಾಕ್ತಿಕಂ ನೀರಜಂ ನಾಸ್ತಿ ನೀರಂ ಪುನಃ
ತತ್ತ್ವದರ್ಶೀ ಶೈವಯೋಗೀಹ ಸಂಸಾರ-
ಸಕ್ತಜೀವೀ ನ ಸರ್ವಜ್ಞ ೮೪

ಗಗನಗೋ ಧೂಮಃ ಸ ಜಗದೇತಿ ಕಿಂ ಪುನಃ
ಅಘಹರ ಸುಪಾದಸೇವೀ ಜನಃ ಸಂಸೃತೇಃ
ಅಘಮುತ್ತಿ ನೈವ ಸರ್ವಜ್ಞ ೮೫

ವಾರಣೇ ಮುಕುರಕೇ ಸೂರ್ಯೇ ಸರೋವರೇ
ಗುರುಮಹತಿ ಮಯಿ ವಿಲೀನೇ ತದಾ ಸಂಸಾರ-
ಭಾರಃ ಕುತೋಽಸ್ತಿ ಸರ್ವಜ್ಞ ೮೬

ಇಂದ್ರಿಯಜಿನೋಽಖಿಲೇ ಮಂದಸ್ನೇಯೋ ಜಗತಿ
ಬಿಂದು ತತ್ತ್ವಜ್ಞೋಽಸ್ತಿ ಯೋ ಮಹಾತ್ಮಾ ಸೋಽಪಿ
ದಗ್ಧ ಗುಣ ಏವ ಸರ್ವಜ್ಞ ೮೭

ಸನ್ಮತಾತ್ಮಜ್ಞಂ ನ ಮ್ಲಾನಯತಿ ಮಾಯೇಹ
ಪ್ರೋನ್ನತ ಗಜಾರೂಢ ಯಾಯಿನಂ ವೀಥೀಷು
ಶುನಕೋ ನ ದಶತಿ ಸರ್ವಜ್ಞ ೮೮

ಜಾತಿ ಸೂತಕ ಗಲಿತ ಭ್ರಾಂತಿ ಗುಣ ಮುಕ್ತಸ್ಯ
ಆತ್ಮನೋಽಧಿಷ್ಠಾನಮಧಿಗಮ್ಯ ತಿಷ್ಠತಃ
ಚಿಂತಾಪಿ ಕಸ್ಯ ಸರ್ವಜ್ಞ ೮೯

ಸನ್ಮತಾತ್ಮಜ್ಞಸ್ಯ ಭಿನ್ನಭಾವೋ ನೈವ
ತನ್ಮನಸಿ ನ ಪರಃ ಸ್ವಕೀಯಶ್ಚ ತ್ರೈಭುವನ-
ಲೀನತಾ ತತ್ರ ಸರ್ವಜ್ಞ ೯೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೯೧ ಆತುಮನ ಜ್ಯೋತಿಯನು ಪ್ರೀತಿಯಲಿ ಅರಿದಂಗೆ
ಸೂತಕವದಿಲ್ಲ ಭಯವಿಲ್ಲ ಪಂಚ ಮಹ-
ಪಾತಕಗಳಿಲ್ಲ ಸರ್ವಜ್ಞ

೯೨ ಜ್ಞಾನಿ ಸಂಸಾರದೊಳು ತಾನಿರಲು ತಿಳಿದಿಹನು
ಭಾನು ಮೋಡದಲಿ ಹೊಳೆವಂತೆ ಸದಮಲ
ಸ್ಥಾನದೊಳಿಹನು ಸರ್ವಜ್ಞ

೯೩ ಎಂಜಲವು ಹೊಲೆಯಿಲ್ಲ ಸಂಜೆ ಬೆಳಗುಗಳಿಲ್ಲ
ಅಂಜಿಕೆಯಿಲ್ಲ ಭಯವಿಲ್ಲ ಜ್ಞಾನವೆಂ-
ಬಂಜನವಿರಲು ಸರ್ವಜ್ಞ

೯೪ ಆನೆ ಮೇಲಿದ್ದವನು ಶ್ವಾನ ಕಂಡೋಡುವನೆ
ಜ್ಞಾನ ಹೃದಯದಲಿ ನೆಲೆಸಿದ ಶಿವಯೋಗಿ
ಹೀನಗಂಜುವನೆ ಸರ್ವಜ್ಞ

೯೫ ಆನೆ ನೀರಾಟದಲಿ ಮೀನ ಕಂಡಂಜುವದೆ
ಹೀನ ಮಾನವರ ಬಿರುನುಡಿಗೆ ತತ್ವದ
ಜ್ಞಾನಿಯಂಜುವನೆ ಸರ್ವಜ್ಞ

೯೬ ಯೋಗಿಗೆ ಹೊಲೆಯಿಲ್ಲ ಸಾಗರಕೆ ನೆಲೆಯಿಲ್ಲ
ಯೋಗವಟ್ಟಿಗೆಗೆ ಮೊಳವಿಲ್ಲ ಜ್ಞಾನಿಗೆ
ಆಗು ಹೋಗಿಲ್ಲ ಸರ್ವಜ್ಞ

೯೭ ಸತ್ಯವೆಂಬುದು ತಾನು ಹಿತ್ತಲದ ಗಿಡ ನೋಡ
ಮತ್ತೆಲ್ಲಿ ನೋಡಿಯರಸದೆ ತಾನಿರ್ದ
ಹತ್ತಿಲೇ ನೋಡ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಆತ್ಮನಿ ಜ್ಯೋತಿಶ್ಚ ಪ್ರೀತ್ಯಾನುಭಾವಿನಃ
ಸೂತಕಂ ನೈವಾಸ್ತಿ ನ ಚ ಭಯಃ ಪಂಚಕಂ
ಪಾತಕಂ ನ ಖಲು ಸರ್ವಜ್ಞ ೯೧

ಜ್ಞಾನವಾನ್ ಸಂಸೃತೌ ಜಾನಾತಿ ಸ್ವಸ್ಥಿತಿಂ
ಭಾನುರ್ ಯಥಾ ಗಗನ ಮಧ್ಯೇ ಲಸತ್ಯಮಲ-
ಸ್ಥಾನ್ಯಯಂ ಲಸತಿ ಸರ್ವಜ್ಞ ೯೨

ನೋಚ್ಛಿಷ್ಟಮಪಿ ಮಲಂ ನ ಜ್ಯೋತಿರಪಿ ತಮಃ
ನ ಚ ಕಂಪನಂ ಭಯಂ ಜಿತಮತೇರ್ ಜ್ಞಾನನಿ-
ತ್ಯಂಜನೇ ಭವತಿ ಸರ್ವಜ್ಞ ೯೩

ಯಾನಂ ಗಜೋ ಯಸ್ಯ ಶುನಿಭಯಃ ಕಿಂ ತಸ್ಯ
ಜ್ಞಾನಂ ಹೃದಿ ಸ್ಥಿತಂ ಯಸ್ಯ ಶಿವಯೋಗಿನಃ
ಹೀನಭೀಃ ಸ ನ ಹಿ ಸರ್ವಜ್ಞ ೯೪

ವನಕೇಲಿ ರತಕರೀ ಮೀನಾದ್ ಬಿಭೇತಿ ಕಿಂ
ಹೀನ ಮಾನವ ರೂಕ್ಷಭಣಿತಾಚ್ಚ ಕಿಂ ತತ್ತ್ವ
ಜ್ಞಾನೀ ಬಿಭೇತಿ ಸರ್ವಜ್ಞ ೯೫

ಯೋಗಿನೋ ನ ಹಿ ಮಲಂ ಸಾಗರೋ ನಾಚಲಃ
ಯೋಗವಾಟ್ಯಾ ಮಾನವೋಯಂ ನ ಜ್ಞಾನಿನಃ
ಪ್ರಗತಾಗತಂ ನ ಸರ್ವಜ್ಞ ೯೬

ಸತ್ಯಮಿತಿ ಯತ್ ಸ್ವಯಂ ವರ್ತತೇಽನ್ತಿಕ ಏವ
ಕುತ್ರಾಪಿ ಚಾನ್ಯತ್ರ ಮಾ ಗವೇಷಯ ತತ್ತು
ತ್ವತ್ ಸಮೀಪೇಽಸ್ತಿ ಸರ್ವಜ್ಞ ೯೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೯೮ ಇಲ್ಲಿಲ್ಲ ಎಂಬುದನು ಇಲ್ಲಿಯೆ ಅರಸುವುದು
ಇಲ್ಲಿಲ್ಲದಿಲ್ಲವೆಂದರಿತ ಒಡನೆ ಜಗ-
ವೆಲ್ಲ ಒಳಗಿಕ್ಕು ಸರ್ವಜ್ಞ

೯೯ ಅಲ್ಲಿಪ್ಪನಿಲ್ಲಿಪ್ಪನೆಲ್ಲಿಪ್ಪನೆನಬೇಡ
ಕಲ್ಲಿನಂತಿಪ್ಪ ಮಾನವನ ಮನ ಕರಗೆ
ಅಲ್ಲಿಪ್ಪ ನೋಡ ಸರ್ವಜ್ಞ

೧೦೦ ಬಲ್ಲೆನೆಂಬುವ ಮಾತು ಎಲ್ಲವೂ ಹುಸಿ ಕಾಣೊ
ಬಲ್ಲರೆ ಬಲ್ಲೆನೆನಬೇಡ ಸುಮ್ಮನಿರ-
ಬಲ್ಲವನೆ ಬಲ್ಲ ಸರ್ವಜ್ಞ

೧೦೧ ಬೊಮ್ಮವನು ಅರಿದಿಹರೆ ಸುಮ್ಮನೆ ಇರಬೇಕು
ಬೊಮ್ಮವನರಿದು ಉಸುರಿದರೆ ಕಳಹೋಗಿ
ಕೆಮ್ಮಿದಂತಕ್ಕು ಸರ್ವಜ್ಞ

೧೦೨ ತನ್ನ ನೋಡಲಿ ಎಂದು ಕನ್ನಡಿಯು ಕರೆಯುವುದೆ
ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು
ಕನ್ನಡಿಯವೋಲು ಸರ್ವಜ್ಞ

೧೦೩ ಸುಂದರಾಂಗನೆ ಬಂದು ಮುಂದೆ ತಾ ನಿಂದಿರಲು
ಸಂದರಿವನರಿದ ಜ್ಞಾನಿ ತಾನೆಲುವಿನ
ಹಂದರವ ಕಾಂಬ ಸರ್ವಜ್ಞ

೧೦೪ ಕಪ್ಪರದಲುಂಬುವರು ಒಪ್ಪರದಿ ನಡೆಯುವರು
ತಪ್ಪಿದರೆ ಹಲ್ಲ ಕಳೆವರು ಮಹಾತ್ಮರ
ಒಪ್ಪವಂ ನೋಡ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯನ್ನಾಸ್ತಿ ಚೇಹ ಮತಮನ್ವೇಷಯಾತ್ರೈವ
ಯನ್ನಾಸ್ತಿ ಚೇಹ ತನ್ನೈವೇತಿ ಬುದ್ಧೇ ಜ-
ಗನ್ನಿಜಾಂತೇಽಸ್ತಿ ಸರ್ವಜ್ಞ ೯೮

ತತ್ರಾಸ್ತಿ ಚಾತ್ರಾಸ್ತಿ ಕುತ್ರಾಸ್ತಿ ಚೇತಿ ನ ಹಿ
ಪ್ರಸ್ತರಸಮೋ ಮನುಜ ಮನಸಿ ಮೃದಿತೇ ತದಾ
ತತ್ರಾಸ್ತಿ ಪಶ್ಯ ಸರ್ವಜ್ಞ ೯೯

ವೇದಾಹಮಖಿಲಮಿತಿ ವಾದ ಏವಾನೃತಂ
ವೇದ್ಮೀತಿ ವಾ ಬ್ರೂಹಿ ವೇತ್ಸಿ ಚೇತ್ ತ್ವಂ ವೇತ್ತಿ
ನಾದ ವಿಮುಖಸ್ತು ಸರ್ವಜ್ಞ ೧೦೦

ಬ್ರಹ್ಮಬೋಧೋಽಸ್ತಿ ಚೇತ್ ಸಂಮೌನಮಪಿ ಭಜೇತ್
ಬ್ರಹ್ಮವಿದ್ ಘೋಷಣಂ ಚೋರೇಣ ಕಾಸರವ-
ಬೃಂಹಣಮಿವೇಹ ಸರ್ವಜ್ಞ ೧೦೧

ಏಹಿ ಮಾಂ ಪಶ್ಯೇತಿ ನಾಹ್ವಯತಿ ದರ್ಪಣಃ
ವಿಹಿತಸುಜ್ಞಾನ ಸಂಬುದ್ಧೋ ಮಹಾತ್ಮಾಪಿ
ಮುಕುರ ಕಲ್ಪೋಽಸ್ತಿ ಸರ್ವಜ್ಞ ೧೦೨

ಸುಂದರಾಂಗೀ ಪುರಶ್ಛಂದತಶ್ಚೈತಿ ಯದಿ
ಸಂಧಾರ್ಯ ತತ್ತ್ವವಿದ್ ಜ್ಞಾನೀ ನೃಕಾಯಾಸ್ಥಿ-
ಬಂಧಮಂಕಯತಿ ಸರ್ವಜ್ಞ ೧೦೩

ಖಾದತಿ ಚ ಕರ್ಪೂರೇ ಮೋದತೇ ಸುಚರಿತೇ
ನುದತಿ ದಶನಾನಿ ಪ್ರಮಾದೇ ಮಹಾತ್ಮನೋ
ಹೃದಿ ಗತಂ ಪಶ್ಯ ಸರ್ವಜ್ಞ ೧೦೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೦೫ ದೊರಕಿದನು ಉಂಡುಂಡು ದೊರಕಿದನು ಉಟ್ಟುಟ್ಟು
ದೊರಕಿದಲಿ ಶಯನಗೆಯ್ವಾತ ಲೋಕಕ್ಕೆ
ನಿರುತನಾಗಿಕ್ಕು ಸರ್ವಜ್ಞ

೧೦೬ ಚಂದನವ ಕರಗಿಸಲು ಬೆಂದು ಪರಿಮಳವಕ್ಕು
ಸಂದರಿವನರಿದ ಸತ್ಪುರುಷರೆನಿಪರು
ನೊಂದು ಸೈರಿಪರು ಸರ್ವಜ್ಞ

೧೦೭ ಬಂದೀತು ರೋಗ ನಿನಗೆಂದು ಅಂಜಿಕೆ ಬೇಡ
ಬಂದುದನು ಉಂಡು ಸುಖಿಸುತ ರೋಗ ಬಂ-
ದಂದಿಗೆದ್ದೇಳು ಸರ್ವಜ್ಞ

೧೦೮ ಏನಾದಡೇನಯ್ಯ ತಾನಾಗದನ್ನಕ್ಕ
ತಾನಾಗಿ ತನ್ನನರ್ದವನು ಲೋಕದಲಿ
ಏನಾದಡೇನು ಸರ್ವಜ್ಞ

೧೦೯ ಜ್ಞಾನಿಗಜ್ಞಾನಿಗೆ ತಾನೊಂದು ಕುರುಹುಂಟು
ಏನೊಂದನಾತ ನುಡಿದರೂ ಜ್ಞಾನಿ ತಾ
ಮೌನವಾಗಿಹನು ಸರ್ವಜ್ಞ

೧೧೦ ನೀರ ಬೊಬ್ಬುಳಿಯಂತೆ ತೋರುತಿಹ ದೇಹದಾ
ಸಾರವರಿಯದಲೆ ಸುಖಿಪುದಜ್ಞಾನದ
ದಾರಿಯಹುದೆಂದ ಸರ್ವಜ್ಞ

೧೧೧ ಕುರಿ ಕಬ್ಬಿನೊಳಹೊಕ್ಕು ಅರಿವುದೇ ತನಿರಸವ
ಹೊರಗಣ ಸೋಗೆಯುಗಿವಂತೆ ಜ್ಞಾನದ
ಕುರುಹು ಬೇರೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಪ್ತಮೇವಾಭುಜ್ಯ ಪ್ರಾಪ್ತಮೇವಾವಾಸ್ಯ
ಪ್ರಾಪ್ತೇ ಸ್ಥಲೇ ಶಯನಮಪಿ ಗತೋ ಲೋಕೇ ಸ-
ಮಾಪ್ತಧರ್ಮಾ ಸ ಸರ್ವಜ್ಞ ೧೦೫

ಚಂದನೇ ದಗ್ಧೇ ಸುನಂದ ಪರಿಮಲಮೇವ
ಸಂಧಾರ್ಯ ತತ್ತ್ವವಿದ್ ಸತ್ಪುರುಷ ನಾಮಕಃ
ಸಂದಹಕ್ಷಮಃ ಸರ್ವಜ್ಞ ೧೦೬

ಸಂಭವೇದ್ ರೋಗ ಇತಿ ತ್ವಂ ಭಯಂ ಮಾ ನಿವಿಶ
ಸಂಭೃತಂ ಸೌಖ್ಯೇನ ಸಂಭುಜ್ಯ ರೋಗಸ್ಯ
ಸಂಭವೇ ಪ್ರೇಹಿ ಸರ್ವಜ್ಞ ೧೦೭

ಕಿಂ ಭವೇಶ್ಚೇತ್ ಕಿಮಿಹ ಸ್ವಂಭವೇರ್ನೈವ ಯದಿ
ಸ್ವಂಬೋಧಿಮಾವರ್ಜ್ಯ ಲೋಕೇ ಸ್ವಯಂ ಸ್ಥಿತಃ
ಕಿಂ ಭವೇತ್ ಕಿಂ ನು ಸರ್ವಜ್ಞ ೧೦೮

ಜ್ಞಾನಿನೋಽಜ್ಞಾನಿನೋಽಭಿಜ್ಞಾನಮಿದಮೇವ
ಅಜ್ಞಃ ಪ್ರಲಪತಿ ಯತ್ ಕಿಂಚಿದಪಿ ಜ್ಞಾನೀ ಹ್ಯ-
ವಜ್ಞತಾಂ ಭಜತಿ ಸರ್ವಜ್ಞ ೧೦೯

ಜಲಬುದ್ಬುದಾಭಂ ಸುವಿಲಸತೋ ದೇಹಸ್ಯ
ಮೂಲಸಾರಾವಗಮ ಮೂಢಸ್ಸ ಸುಖಿತೋಽಪಿ
ಛಲಿತ ಏವಾತ್ರ ಸರ್ವಜ್ಞ ೧೧೦

ಅವಿರಿಕ್ಷು ವನಗತೋಽಪ್ಯವಲೇಢಿ ಕಿಂ ರಸಂ
ಕವಲಯತಿ ಬಾಹ್ಯಂ ತೃಣಂ ತಥಾ ಜ್ಞಾನಪ್ರ-
ಸ್ರವಣಮನ್ಯತ್ರ ಸರ್ವಜ್ಞ ೧೧೧

3

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೧೨ ಜ್ಞಾನವುಳ್ಳವನೊಡಲು ಭಾನುವಿನ ತೆರನಕ್ಕು
ಜ್ಞಾನವಿಲ್ಲದನ ಬರಿಯೊಡಲು ಹಾಳೂರ
ಸ್ಥಾನದಂತಕ್ಕು ಸರ್ವಜ್ಞ

೧೧೩ ಮಾತಿನಾ ಬೊಮ್ಮವೂ ತೂತಾದ ಮಡಕೆಯೂ
ಪಾತಕದ ನೆರೆಯು ಇವು ಮೂರು ಲೋಕದೊಳ-
ಗೇತಕ್ಕು ಬೇಡ ಸರ್ವಜ್ಞ

೧೧೪ ಗುರಿಯು ತಾಗದ ಬಾಣ ನೂರಾರನೆಸೆದೇನು
ಬರಿ ಮಾತನಾಡಿ ಫಲವೇನು ನಿಜಗುಣದ
ಅರಿವಿಲ್ಲದಿರಲು ಸರ್ವಜ್ಞ

೧೧೫ ವೇದಶಾಸ್ತ್ರಾಗಮವನೋದಿದೊಡೆ ಫಲವೇನು
ವೇದಿಸುವ ಚಿತ್ತ ಸಮರಸವಿಲ್ಲದೊಡೆ
ಬೂದಿಯಲಿ ಹೋಮ ಸರ್ವಜ್ಞ

೧೧೬ ಬಿಂದುನಾದಗಳೆಂಬ ನಂದನದ ವನವುಂಟು
ಇಂದುಧರನೆಂಬ ಕೊಳನುಂಟು ತಿಳಿನೀರ
ಮಿಂದುಂಬರಿಲ್ಲ ಸರ್ವಜ್ಞ

೧೧೭ ತತ್ತ್ವಮಸಿ ಎಂಬುದರ ಅರ್ಥವನು ಅರಿಯದಲೆ
ತುತ್ತು ಸವಿಯೆಂದು ಉಣಗಲಿತ ಶಿವಯೋಗಿ-
ಗೆತ್ತಣದು ಮುಕ್ತಿ ಸರ್ವಜ್ಞ

೧೧೮ ಅದ್ವಯಿತಕೋಡಾಡಿ ಇದ್ದುದನು ಹೋಗಾಡಿ
ಉದ್ದನೆಯ ಮರನ ತುದಿಗೇರಿ ತಲೆಯೂರಿ
ಬಿದ್ದು ಸತ್ತಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಜ್ಞಾನಿನೋ ದೇಹೋऽಪಿ ಭಾನುಕಾಂತ್ಯಾ ಭಾತಿ
ಜ್ಞಾನಶೂನ್ಯಸ್ಯ ತದ್ ದೀನಂ ವಪುರ್ ವಿಜನ-
ಸ್ಥಾನಸಮಮೇವ ಸರ್ವಜ್ಞ ೧೧೨

ವಾರ್ತತ ಬ್ರಹ್ಮಾಪಿ ಕ್ಷತರಂಧ್ರ ಪಾತ್ರಮಪಿ
ಪಾತಕಃ ಪರಿಸರಸ್ತ್ರಯಮಿದಂ ಲೋಕೇ ನಿ-
ಹತಫಲಂ ವಿದ್ಧಿ ಸರ್ವಜ್ಞ ೧೧೩

ಲಕ್ಷ್ಯಮವಿಭೇದಕಾ ಲಕ್ಷೇಷವೋ ಹತಾಃ
ರಿಕ್ತಾರ್ಥ ವಚನೇನ ಕಿಂ ಫಲಂ ನೈಜಗುಣ-
ಲಕ್ಷ್ಯಂ ನ ಚೇತ್ ತು ಸರ್ವಜ್ಞ ೧೧೪

ವೇದಶಾಸ್ತ್ರಾಗಮ ಸುವೇದನೇ ಕಿಂ ಫಲಂ
ವೇದಕಂ ಚಿತ್ತಂ ನ ಸಮರಸಂ ಚೇದ್ ರಜಸಿ
ವಿದ್ಧಿ ಹುತಮೇವ ಸರ್ವಜ್ಞ ೧೧೫

ಬಿಂದು ನಾದಶ್ಚೇತಿ ನಂದನಂ ವನಮಸ್ತಿ
ಇಂದುಧರ ನಾಮಕಾ ದೀರ್ಘಿಕಾ ; ಸ್ನಾತ್ವಾ ಜ-
ಲಂಧಯಾ ನೈವ ಸರ್ವಜ್ಞ ೧೧೬

ತತ್ತ್ವಮಸಿ ಸೂಕ್ತಿಗತಮರ್ಥಮನಿಬೋಧ್ಯೈವ
ಭುಕ್ತಿಃ ಸುರುಚಿರೇತಿ ಭುಂಜತೋ ಯೋಗಿನಃ
ಮುಕ್ತಿರಿಹ ಕುತ್ರ ಸರ್ವಜ್ಞ ೧೧೭

ಅದ್ವೈತ ಮಿತಮಿತಿಃ ಸದ್ದ್ರವ್ಯಮಾಕ್ಷಿಪನ್
ಉದ್ದಂಡ ತರುಶಿಖರಮಧಿರುಹ್ಯ ವಿನತಮುಖ-
ಮಧೋಧಃ ಪತತಿ ಸರ್ವಜ್ಞ ೧೧೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೧೯ ಧ್ಯಾನದಾ ಹೊಸಬತ್ತಿ ಮೌನದಾ ತಿಳಿದುಪ್ಪ
ಸ್ವಾನುಭವವೆಂಬ ಬೆಳಗಿನಾ ಜ್ಯೋತಿಯ-
ಜ್ಞಾನವಂ ಸುಡುಗು ಸರ್ವಜ್ಞ

೧೨೦ ಅಕ್ಷರವು ಲೇಖಕ್ಕೆ ತರ್ಕ ತಾ ವಾದಕ್ಕೆ
ಮಿಕ್ಕ ಓದುಗಳು ತಿರುಪಕ್ಕೆ ಮೋಕ್ಷಕಾ-
ರಕ್ಷರವೆ ಸಾಕು ಸರ್ವಜ್ಞ

೧೨೧ ಮಾನವದು ಮನುಜಂಗೆ ಮೌನ ಶಿವಯೋಗಿಗೆ
ಜ್ಞಾನವದು ಬೇಕು ಹಿರಿಯರಿಗೆ ಮೋಕ್ಷಕ್ಕೆ
ಧ್ಯಾನವೇ ಬೇಕು ಸರ್ವಜ್ಞ

೧೨೨ ಎಣ್ಣೆ ಬೆಣ್ಣೆಯು ಋಣವು ಅನ್ನ ವಸ್ತ್ರದ ಋಣವು
ಹೊನ್ನು ಹೆಣ್ಣಿನ ಋಣವು ತೀರಿದಾಕ್ಷಣವೆ
ಮಣ್ಣು ಪಾಲೆಂದ ಸರ್ವಜ್ಞ

೧೨೩ ಸತ್ತುಹೋದರೆ ನಿನಗದೆತ್ತಣದು ಮೋಕ್ಷವೈ
ಸತ್ತುಹೋಗದಲೆ ಜೀವಿಸಿರೆ ಮೋಕ್ಷದ
ಗೊತ್ತು ತಿಳಿಯೆಂದ ಸರ್ವಜ್ಞ

## ೫. ಯೋಗ ಪದ್ಧತಿ

೧೨೪ ಕತ್ತಲೆಯು ತಾವಿಂಗೆ ಉತ್ತಮವು ಜ್ಯೋತಿ ತಾ
ಮತ್ತೆ ಪ್ರಜ್ವಲಿಸುವಾ ಠಾವು ಬೆಳಗಲ-
ತ್ಯುತ್ತಮುವದಕ್ಕು ಸರ್ವಜ್ಞ

೧೨೫ ಯೋಗವನು ಮನಮುಟ್ಟಿ ಭೋಗವನು ತೊರೆದಿಹರೆ
ಮಾಗಿಯು ಮಳೆಯು ಸುರಿದಂತೆ ಆ ಯೋಗ
ಸಾಗುತ್ತಲಿಹುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ಯಾನ ನವವರ್ತಿಕಾ ಮೌನ ನಿರ್ಮಲಘೃತಂ
ಸ್ವಾನುಭವ ಇತಿ ಃಂಜ್ವಲಜ್ಜ್ಯೋತಿರಾದಹ-
ತ್ಯಜ್ಞಾನಮೇವ ಸರ್ವಜ್ಞ ೧೧೯

ಅಕ್ಷರಂ ಲೇಖಾಯೆ ತರ್ಕೋಽಪಿ ವಾದಾಯೆ
ಭಿಕ್ಷಾರ್ಥಮಪ್ಯನ್ಯ ಶಿಕ್ಷಾಶ್ಚ ಮೋಕ್ಷಾರ್ಥ-
ಮಕ್ಷರಷಡೇವ ಸರ್ವಜ್ಞ ೧೨೦

ಮಾನಸ್ತು ಮನುಜಸ್ಯ ಮೌನಮಪಿ ಯೋಗಿನಃ
ಜ್ಞಾನಂ ತದೀಪ್ಸಿತಂ ವೃದ್ಧೈಶ್ಚ ಮೋಕ್ಷಾಯ
ಧ್ಯಾನಮಿಷ್ಟಂ ಹಿ ಸರ್ವಜ್ಞ ೧೨೧

ಋಣಮಿಹ ಘೃತಾದಿಗತಮನ್ನ ವಸ್ತ್ರರ್ಣಮಪಿ
ಸ್ವರ್ಣರ್ಣ ನಾರೀಋಣಂ ತೀರ್ಣಮಸ್ತಿ ಚೇತ್
ಕ್ಷಣ್ಣ ಮೃದ್ ಭವಸಿ ಸರ್ವಜ್ಞ ೧೨೨

ಮೃತ್ಯುವಶಮಾಗತೇ ಕುತ್ರ ಮೋಕ್ಷಸ್ತು ತವ
ಮೃತ್ಯುವಶಪೂರ್ವಮಿಹ ಜೀವನೇ ತ್ವಂ ಮೋಕ್ಷ-
ಪಥಮಂಕಯಾತ್ರ ಸರ್ವಜ್ಞ ೧೨೩

## ೫. ಯೋಗಪದ್ಧತಿಃ

ತಮಸಾವೃತೇ ಸ್ಥಲೇ ಸುಮಹತೀ ಸಾ ದ್ಯುತಿಃ
ಧಾಮ ಜ್ವಲತ್ ಪುನರ್ ಜ್ಯೋತಿಸಾತ್ ತತ್ ಕೃತಂ
ಭೂಮೋತ್ತಮಮಿಹ ಸರ್ವಜ್ಞ ೧೨೪

ಯೋಗೇ ಸುಕೃತಮನಾಃ ಭೋಗಂ ಯದಿ ತ್ಯಜೇತ್
ಮಾಘರ್ತು ವೃಷ್ಟಿರಿವ ಸತತಂ ಪ್ರವರ್ತತೇ
ಯೋಗೋಽಪಿ ತಸ್ಯ ಸರ್ವಜ್ಞ ೧೨೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೨೬ ಹೊಲೆಯಿಲ್ಲ ಅರಿದಂಗೆ ಬಲವಿಲ್ಲ ಬಡವಂಗೆ
ತೊಲೆ ಕಂಬವಿಲ್ಲ ಗಗನಕ್ಕೆ ಯೋಗಿಗೆ
ಕುಲವೆಂಬುದಿಲ್ಲ ಸರ್ವಜ್ಞ

೧೨೭ ಆಗು ಹೋಗುಗಳಿಲ್ಲ ಮೇಗು ಕೀಳುಗಳಿಲ್ಲ
ಭೋಗಗಳಿಲ್ಲ ಮೊದಲಿಲ್ಲ ಯೋಗಿಗೆ
ರಾಗವೇ ಇಲ್ಲ ಸರ್ವಜ್ಞ

೧೨೮ ಹಸಿವ ಕೊಂದಾ ಯೋಗಿ ವಸುಧೆಗೀಶ್ವರನಕ್ಕು
ಪಶುಪತಿಯಕ್ಕು ಕೈಲಾಸವಾತಂಗೆ
ವಶವರ್ತಿಯಕ್ಕು ಸರ್ವಜ್ಞ

೧೨೯ ಹಸಿವ ಕೊಂದಾತಂಗೆ ಪಶುವಧೆಯು ಮಾಡದಗೆ
ಹುಸಿ ಕರ್ಮ ಕಾಮವಳಿದವಗೆ ಇಹಪರದಿ
ಶಶಿಧರನೊಲಿವ ಸರ್ವಜ್ಞ

೧೩೦ ಓದಿ ಬೂದಿಯು ಪೂಸಿ ಕೇದು ಕಾವಿಯು ಹೊದೆದು
ಹೋದಾತ ಯೋಗಿಯೆನಬೇಡ ಇಂದ್ರಿಯವ
ಕಾದಾತ ಯೋಗಿ ಸರ್ವಜ್ಞ

೧೩೧ ಒಡಲು ತಾನಳಿವಲ್ಲಿ ಮಡದಿಯರು ಕೆಡುವಲ್ಲಿ
ತಡೆಯೆಡರು ನಿಂದೆ ಬರುವಲ್ಲಿ ಸಮತೆಯನು
ಬಿಡದಿಹನೆ ಯೋಗಿ ಸರ್ವಜ್ಞ

೧೩೨ ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದೆದು
ಹಿಂಡನಗಲಿದ ಗಜದಂತೆ ಇಪ್ಪವರ
ಕಂಡು ನಂಬುವುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮಲಮಿಹ ನ ವಿದುರಸ್ಯ ಬಲಮಪಿ ದರಿದ್ರೇ ನ
ತ್ರೋಲಯಷ್ಟಿರ್‌ನಾಸ್ತಿ ಗಗನಸ್ಯ ಯೋಗಿನಃ
ಕುಲಮತ್ರ ನೈವ ಸರ್ವಜ್ಞ ೧೨೬

ಆಗತಂ ವಿಗತಂ ನ ಸುಗತಿರ್ ಅಥ ಕುಗತಿರ್‌ನ
ಭೋಗಸರ್ವಸ್ವಮಿತಿ ನೈವಾಸ್ತಿ ಯೋಗಿನಃ
ರಾಗೋಽಪಿ ನೈವ ಸರ್ವಜ್ಞ ೧೨೭

ಅಶನಾರ್ತಿಜಿದ್ ಯತಿರ್ ವಸುಧೇಶ್ವರೋ ಭವತಿ
ಪಶುಪತಿರ್‌ಭವತಿ ಕೈಲಾಸಸ್ತದ್‌ಆದೇಶ-
ವಶವರ್ತಿರ್‌ಏವ ಸರ್ವಜ್ಞ ೧೨೮

ಅಶನಾರ್ತಿ ದಮನಶ್ಚ ಪಶುವಧತ್ಯಾಗೀ ಚ
ಪಿಶುನತಾ ಕರ್ಮ ಕಾಮಘ್ನೋಽಪಿ ಭುವಿ ದಿವಿ ಚ
ಶಶಿಧರಪ್ರಿಯಃ ಸರ್ವಜ್ಞ ೧೨೯

ಪ್ರಾಪ್ತವಿದ್ಯಂ ಭಸ್ಮ ಲಿಪ್ತಂ ಕಷಾಯಿನಂ
ಆಪ್ತಯೋಗೀತಿ ಮಾ ಭಾವಯತ ನಿಯತೇಂದ್ರಿ-
ಯಸ್ತು ಯೋಗೀಹ ಸರ್ವಜ್ಞ ೧೩೦

ದೇಹಪ್ರಣಾಶನೇ ಗೇಹಿನೀ ಪಾತನೇ
ಬಹುವಿಘ್ನ ರೋಧ ದೂಷಣ ಹತೌ ಸಮತಾಂ ನ
ಜಹತಿ ಯೋಗಿನಃ ಸರ್ವಜ್ಞ ೧೩೧

ಮುಂಡನಂ ಸುವಿಧಾಯ ಖಂಡ ಕಂಬಲಧರಃ
ಶೌಂಡ ಇವ ಗಜಯೂಥಮುತ್‌ಸೃಜ್ಯ ಯಶ್ಚರತಿ
ಮುಂಡಯತು ತಮಿಹ ಸರ್ವಜ್ಞ ೧೩೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೩೩ ಪಕ್ಷಿಗೆ ಸ್ವರ ಚಂದ ಕುಕ್ಷಿಗಶನವು ಚಂದ
ನಕ್ಷತ್ರ ಚಂದ ಗಗನಕ್ಕೆ ಯೋಗಿಗೆ
ಭಿಕ್ಷವೇ ಚಂದ ಸರ್ವಜ್ಞ

೧೩೪ ತಿರುಕರಿಲ್ಲದ ಊರು ನರಕಭಾಜನವುಕ್ಕು
ತಿರುಕರೆ ಗತಿಯು ಮುಕ್ತಿಗೆ ಶಿವನೆಂಬ
ತಿರುಕ ತಾ ದೈವ ಸರ್ವಜ್ಞ

೧೩೫ ಬೇಡುವುದು ಭಿಕ್ಷೆಯನು ಮಾಡುವುದು ತಪವನ್ನು
ಕಾಡದೇ ಪರರ ನೋಡುವನು ಶಿವನೊಳಗೆ
ಕೂಡಬಹುದೆಂದ ಸರ್ವಜ್ಞ

೧೩೬ ಕರದಿ ಕಪ್ಪರವುಂಟು ಹಿರಿದೊಂದು ನಾಡುಂಟು
ಹರನೆಂಬ ದೈವ ನಮಗುಂಟು ತಿರಿವರಿಂ
ಸಿರಿವಂತರಾರು ಸರ್ವಜ್ಞ

೧೩೭ ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ
ಕಡುರೋಷವೆಂಬ ವಿಷವೇರೆ ಸಮತೆ ಗಾ–
ರುಡಿಗನಂತಕ್ಕು ಸರ್ವಜ್ಞ

೧೩೮ ಆಶೆ ರೋಷವ ಬಿಟ್ಟು ಈಶಧ್ಯಾನದೊಳಿರಲು
ಮೋಸವ ಮಾಡಿ ಸತಿ ಬಂದು ಪಿಡಿದರೆ
ಹೇಸಿ ತೊಲಗುವುದು ಸರ್ವಜ್ಞ

೧೩೯ ಸಂಗವನು ತೊರೆದಂಗೆ ಅಂಗನೆಯರಿರಲೇಕೆ
ಬಂಗಾರವೇಕೆ ಬಲವೇಕೆ ಲೋಕದ
ಶೃಂಗಾರವೇಕೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಕ್ಷಿಣೋ ರವೋ ವರಂ ಕುಕ್ಷ್ಯಾಶಿತಂ ವರಂ
ನಕ್ಷತ್ರಮಪಿ ವರಂ ಗಗನಭಂ ಯೋಗಿನೇ
ಭಿಕ್ಷಾ ವರಂ ಹಿ ಸರ್ವಜ್ಞ ೧೩೩

ಭಿಕ್ಷುಹೀನಾ ಪುರೀ ಲಕ್ಷ್ಯಮಿವ ನರಕಸ್ಯ
ಭಿಕ್ಷವೋ ಗತಿರತ್ರ ಮುಕ್ತಯೇ ಶಿವ ಏವ
ಭಿಕ್ಷುದೈವಂ ಹಿ ಸರ್ವಜ್ಞ ೧೩೪

ಭರಣಂ ಸುಭಿಕ್ಷಯಾ ಕರಣಂ ಮಹತ್ ತಪಃ
ಪರಿಪೀಡನಂ ವಿನಾ ಪರಹಿತೇ ನಿರತಃ ಸ
ಹರಲೀನ ಏವ ಸರ್ವಜ್ಞ ೧೩೫

ಕರಗತಃ ಕರ್ಪರೋ ವಿರಲೋಽಸ್ತಿ ಜನಪದಃ
ಹರನಾಮಕಂ ದೈವಮಸ್ತಿ ನೋ ಭಿಕ್ಷುಸಮ-
ವರಧನೀ ಕುತ್ರ ಸರ್ವಜ್ಞ ೧೩೬

ದೇಹವಲ್ಮೀಕಕೇ ಜಿಹ್ವೈವ ಸರ್ಪಿಣೀ
ಬಹುರೋಷಜೇ ವಿಷೇ ದೀಪಿತೇ ಸಮತೋಽಲ-
ಮಹಿಕೇಲಿಮೇತಿ ಸರ್ವಜ್ಞ ೧೩೭

ರೋಷಮಾಶಾಂ ವಿಹಾಯೇಶಧ್ಯಾನೇ ಸ್ಥಿತಃ
ಯೋಷಿದಾಗತ್ಯ ಚೌರ್ಯೇಣ ಸಂಪೀಡಿತಃ
ವಿಷಮಿವ ಜಹಾತು ಸರ್ವಜ್ಞ ೧೩೮

ಸಂಗ ಸಂತ್ಯಾಗಿನೇ ಹ್ಯಂಗನಾಶ್ಚಾಪಿ ಕಿಂ
ಭೃಂಗಾರಮಪಿ ಬಲಂ ತಸ್ಯ ಕಿಂ ಲೋಕಸ್ಯ
ಶೃಂಗಾರಣಂ ಚ ಸರ್ವಜ್ಞ ೧೩೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೪೦ ಅಂತಿರ್ದ ಇಂತಿರ್ದ ಎಂತಿರ್ದನೆನಬೇಡ
ಕಂತೆಯನು ಹೊತ್ತು ತಿರಿದುಂಬ ಶಿವಯೋಗಿ
ಎಂತಿರ್ದಡೇನು ಸರ್ವಜ್ಞ

೧೪೧ ಜೋಗಯ್ಯನೆನಬೇಡ ತ್ಯಾಗಿ ನಿಂದಿಸಬೇಡ
ನಾಗಭೂಷಣನ ಹಳಿದ ದಕ್ಷನ ತಲೆ
ಹೋಗಿಹುದು ನೋಡ ಸರ್ವಜ್ಞ

೧೪೨ ಕೋಪವೆಂಬುದು ಕೇಳಿ ಪಾಪದಾ ನೆಲೆಗಟ್ಟು
ಕೂಪದೊಳು ನೇಣು ಹರಿದಂತೆ ನರಕಕ್ಕೆ
ಕೋಪಿ ತಾನಿಳಿವ ಸರ್ವಜ್ಞ

೧೪೩ ಜಡೆಯು ಕಟ್ಟಲುಬಹುದು ಕಡವಸವನುಡಬಹುದು
ಬಿಡದೆ ದೇಗುಲದೊಳಿರಬಹುದು ಕರಣಗಳ
ತಡೆಯುವುದೆ ಕಷ್ಟ ಸರ್ವಜ್ಞ

೧೪೪ ಅಡವಿಯನು ಹೊಗಬಹುದು ಮಡದಿಯನು ಬಿಡಬಹುದು
ಬಿಡದೆ ಧ್ಯಾನದೊಳಿರಬಹುದು ವಾಸನೆಯ
ಕೊಡಹಲಳವಲ್ಲ ಸರ್ವಜ್ಞ

೧೪೫ ತಪವ ಮಾಡುವೆನೆಂದು ಗುಹೆಯ ಹೊಕ್ಕಿರಬೇಡ
ತಪದಲ್ಲಿ ಕೋಪ ಬಿಡದಿರಲು ಆ ತಪವು
ತಪತಾಪ ಕಂಡ್ಯ ಸರ್ವಜ್ಞ

೧೪೬ ಬೆಣ್ಣೆ ಬೆಂಕಿಯು ನಡುವೆ ತಣ್ಣಗಿರಬಲ್ಲುದೆ
ಹೆಣ್ಣಿದ್ದ ಮನೆಗೆ ಎಡತಾಕಿ ಶಿವಯೋಗಿ
ಮಣ್ಣುಮುಸಿಯಾದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತ್ಥಮಿವ ಕುತ್ಸಿತಮಿವೇತಿ ತಂ ಮಾ ನಿಗದ
ಕಂಥಾಧರೋ ಭಿಕ್ಷು ಶಿವಯೋಗಿ ರಾಜಸ್ತು
ಕಥಮಪಿ ಚ ಭವತು ಸರ್ವಜ್ಞ ೧೪೦

ಜೋಗೀತಿ ಮಾ ಬ್ರೂಹಿ ತ್ಯಾಗಿನಂ ಮಾ ನಿಂದ
ನಾಗಭೂಷಣ ದೂಷಣಂ ದಕ್ಷಶೀರ್ಷಮಪಿ
ಕ್ವ ಗತಮಿತಿ ಪಶ್ಯ ಸರ್ವಜ್ಞ ೧೪೧

ಕೋಪ ಇತ್ಯಸ್ತಿ ಯತ್ ಪಾಪಭೂಸ್ತಚ್ಚ ಶೃಣು
ಕೂಪರೋಹಣ ರಜ್ಜುಭೇದ ಇವ ನರಕೇಽಪಿ
ಕೋಪೀ ನಿಪತತಿ ಸರ್ವಜ್ಞ ೧೪೨

ಜಟಿಲೋ ಭವೇತ್ ಸುಖಂ ಪಟಲಾಜಿನಂ ವಸೇತ್
ತ್ರುಟಿರಹಿತ ದೇವಕುಲ ವಾಸೇಽಪಿ ಕರಣಸಂ-
ಘಟನಮಸುಖಂ ಹಿ ಸರ್ವಜ್ಞ ೧೪೩

ವನಮೇವ ಸಂವಿಶೇತ್ ವನಿತಾಂ ತ್ಯಜೇದ್ ಅಪಿ
ಅನಿರತಂ ಧ್ಯಾನಮಗ್ನೋ ಭವೇತ್ ವಾಸನಾ-
ಹನನಮಸುಖಂ ಹಿ ಸರ್ವಜ್ಞ ೧೪೪

ತಪ ಏವ ಲಕ್ಷ್ಯಮಿತಿ ತ್ವಂ ಪ್ರವಿಶ ಮಾ ಗುಹಾಂ
ತಪಸಿ ಕೋಪಂ ನ ಚೇತ್ ಪ್ರಜಹಾಸಿ ತತ್ತಪಃ
ತಪತಾಪ ಏವ ಸರ್ವಜ್ಞ ೧೪೫

ಪಾವಕಸ್ಯಾಂತಿಕೇ ನವನೀತ ಶೈತ್ಯಮಿವ
ಯುವತೀ ನಿವಾಸಮಭಿನಿವಿಶತೋ ಯೋಗಿನಃ
ಅವನತಿರ್ಭವತಿ ಸರ್ವಜ್ಞ ೧೪೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೪೭ ಇಂದ್ರಿಯದ ಆಶೆಗಳ ಸಂದಿಸುತ ಕೊಂದವನು
ಸುಂದರನಕ್ಕು ಸುಖಿಯಕ್ಕು ಲೋಕಕ್ಕೆ
ಇಂದುಧರನಕ್ಕು ಸರ್ವಜ್ಞ

೧೪೮ ನವದ್ವಾರಗಳ ಮುಚ್ಚಿ ಶಿವಧ್ಯಾನದೊಳಗಿರಲು
ನವಖಂಡ ಪೃಥ್ವಿಯೊಳಗಣ ಮಾತೆಲ್ಲ
ಕಿವಿಯೊಳಗೆ ಇಹುದು ಸರ್ವಜ್ಞ

೧೪೯ ಅರ್ತಿಗೆ ಬೆಲೆಯಿಲ್ಲ ಚಿತ್ರಕ್ಕೆ ಹೊಲೆಯಿಲ್ಲ
ಬತ್ತಲಿದ್ದವಗೆ ಭಯವಿಲ್ಲ ಯೋಗಿಗೆ
ಕತ್ತಲೆಯೆ ಇಲ್ಲ ಸರ್ವಜ್ಞ

೧೫೦ ಉತ್ತುಂಗ ಮಾಣಿಕದ ಬಿತ್ತು ಮಂಟಪದೊಳಗೆ
ನಿತ್ಯ ನಿರ್ಮಲದ ನಿಜಗಂಡ ಶಿವಯೋಗಿ-
ಗೆತ್ತಣದು ಸಾವು ಸರ್ವಜ್ಞ

೧೫೧ ವೈರಾಗ್ಯ ಬಲದಿ ಸಂಸಾರ ಸಾಗರದೊಳಗೆ
ಆರಾರು ಧೀರರೀಜುವರೊ ಅವರೆಲ್ಲ
ಪಾರಾಗಿ ಸಿಗರು ಸರ್ವಜ್ಞ

೧೫೨ ಬಿಂದು ನಾದಗಳರಿತು ಇಂದ್ರಿಯವನಡಗಿಸುತ
ನಿಂದಿರದ ಮನದ ನಿಜಗಂಡ ಶಿವಯೋಗಿ
ಮುಂದೆ ಹುಟ್ಟುವನೆ ಸರ್ವಜ್ಞ

೧೫೩ ಪ್ರಾರಬ್ಧ ಕರ್ಮಕ್ಕೆ ಆರಯಿಕೆ ಮುನ್ನಿಲ್ಲ
ಹಾರೈಸಿ ಬಯಸಿ ಬಂದುದಕೆ ತಾನೇಕ-
ನಾರೂಢ ಯೋಗಿ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂದ್ರಿಯಾಶಾಕುಲಂ ಸಂಧಾಯ ಯೋ ಹನ್ತಿ
ಸೌಂದರ್ಯಮಪಿ ಸೌಖ್ಯಮನುಭವತಿ ಲೋಕೇಷು
ಇಂದುಧರನಿಭಃ ಸರ್ವಜ್ಞ ೧೪೭

ನವದ್ವಾರಮಾಬಧ್ಯ ಶಿವಧ್ಯಾನ ನಿರತಸ್ಯ
ನವಖಂಡ ಪೃಥ್ವೀಷು ಪ್ರೋಕ್ತಸರ್ವಂ ವಚಃ
ಶ್ರವಣೇ ವಿಲಸತಿ ಸರ್ವಜ್ಞ ೧೪೮

ಪ್ರೀತಿಸ್ತ್ವಮೂಲ್ಯೈವ ಚಿತ್ತಸ್ಯ ನ ಹಿ ಮಲಂ
ನಾಸ್ತಿ ಚ ಭಯಸ್ತ್ಯಕ್ತಗೇಹಿನೇ ಯೋಗಿನೇ
ಕತ್ತಿಮಿರಮಪಿ ನ ಸರ್ವಜ್ಞ ೧೪೯

ಉತ್ತುಂಗ ಮಾಣಿಕ್ಯ ವಿಸ್ತೃತೇ ಮಂಡಪೇ
ನಿತ್ಯ ನಿರ್ಮಲ ತತ್ತ್ವ ನಿಜದರ್ಶಿ ಯೋಗಿನೇ
ಮೃತ್ಯುರಪಿ ಕುತ್ರ ಸರ್ವಜ್ಞ ೧೫೦

ವೈರಾಗ್ಯ ಬಲಯುತಾ ಧೀರಸತ್ತ್ವಾಶ್ಚ ಸಂ-
ಸಾರಸಾಗರಮಥೋತ್ತೀರ್ಯ ಪಾರಂಗತಾಃ
ಭಾರಮುಕ್ತಾ ಹಿ ಸರ್ವಜ್ಞ ೧೫೧

ಬಿಂದುನಾದಜ್ಞಃ ಸ್ವಕೇಂದ್ರಿಯಾಣ್ಯಾದಮ್ಯ
ಸ್ಪಂದತೋ ಮನಸಃ ಸ್ಥಿತಿಜ್ಞ ಶಿವಯೋಗಿನೇ
ಬಂಧನಂ ನಾಸ್ತಿ ಸರ್ವಜ್ಞ ೧೫೨

ಪ್ರಾರಬ್ಧ ಕರ್ಮಣೇ ಹ್ಯಾರಾತ್ ಶಮೋ ನೈವ
ಆರೂಢಯೋಗೀ ತ್ವಭೀತೋಽಭಿಮುಖ ನಿಹಿತ-
ಭಾರೋ ಯತೋಽಪಿ ಸರ್ವಜ್ಞ ೧೫೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೫೪ ಹರನಿಷ್ಠೆಯಿಲ್ಲದಾ ಪರಮರ್ಷಿ ಮುಖ್ಯನೇ
ಹರನಿಷ್ಠೆಯುಳ್ಳ ಶ್ವಪಚನಾದೆಡೆ ಆತ
ಪರಮರ್ಷಿ ಕಾಣೊ ಸರ್ವಜ್ಞ

೧೫೫ ವೇಷಗಳ ಧರಿಸೇನು ದೇಶಗಳ ತಿರುಗೇನು
ದೋಷಗಳ ಹೇಳಿ ಫಲವೇನು ಮನಸಿನ
ಆಶೆ ಬಿಡದನಕ ಸರ್ವಜ್ಞ

೧೫೬ ಕತ್ತೆ ಬೂದಿಲಿ ಹೊರಳಿ ಮತ್ತೆ ಯತಿಯಪ್ಪುದೇ
ತತ್ವವರಿಯದಲೆ ಭಸಿತವಿಟ್ಟವ ಶುದ್ಧ
ಕತ್ತೆಯಂತೆಂದ ಸರ್ವಜ್ಞ

೧೫೭ ಅತ್ತಿಮರ ತಾ ಕಾಯ ಹೊತ್ತಿರ್ದ ತೆರನಂತೆ
ತತ್ವಭೇದವನು ಅರಿಯದಲೆ ರುದ್ರಾಕ್ಷಿ
ಹೊತ್ತು ಫಲವೇನು ಸರ್ವಜ್ಞ

೧೫೮ ಚಿತ್ತಿಯಾ ಮಳೆ ಹನಿದು ಮುತ್ತಾಗಬಲ್ಲುದೇ
ಚಿತ್ತವಿಲ್ಲದಲೆ ಬೋಳಾದಡಾ ಯೋಗ
ಕತ್ತೆಯಿಂದತ್ತ ಸರ್ವಜ್ಞ

೧೫೯ ಸಾಧು ಸಿದ್ಧರು ಎಂದು ತೋದ ಕಾವಿಯ ಹೊದ್ದು
ಮೇದಿನಿಯ ಮೇಲೆ ವಿಷಯಕ್ಕೆ ತಿರುಗುವಾ
ಮಾದಿಗರ ನೋಡು ಸರ್ವಜ್ಞ

೧೬೦ ದಂಡಕೋಲಿನ ತುದಿಗೆ ಪಿಂಡ ಕೌಪವ ಕಟ್ಟಿ
ಮುಂಡೆಯರ ಕಂಡು ಮಿಡುಕುವ ಯೋಗಿಯ
ಮಂಡೆ ಬೋಳೇಕೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹರಸುನಿಷ್ಠೋ ನ ಚೇತ್ ಪರಮರ್ಷಿಮುಖ್ಯೋ ನ
ಹರಸುನಿಷ್ಠೋ ಯೋಽಸ್ತಿ ಶ್ವಪಚೋಽಪಿ ಸಃ ಶೃಣುತ
ಪರಮರ್ಷಿರೇವ ಸರ್ವಜ್ಞ ೧೫೪

ವೇಷಧರಣಂ ವೃಥಾ ದೇಶಾಟನಂ ವೃಥಾ
ದೋಷಕಥನಂ ವೃಥಾ ಯಾವದಪಿ ಮಾನಸೀಂ
ಆಶಾಂ ನ ಜಹತಿ ಸರ್ವಜ್ಞ ೧೫೫

ಲಿಪ್ತಭಸ್ಮಾ ಖರಃ ಕುತ್ರ ಯತಿಪದಮೇತಿ
ತತ್ತ್ವಾವಗಮನಂ ವಿನಾ ಭಸ್ಮಧಾರೀ ಪ್ರ-
ಮತ್ತ ಖರ ಏವ ಸರ್ವಜ್ಞ ೧೫೬

102887

ಕಾಂತಾರಕಾಂಜೂರಕ ಸ್ತಬಕಫಲನಿಭಃ
ತತ್ತ್ವಭೇದಾವಗಮ ಮೂಢಃ ಸ ರುದ್ರಾಕ್ಷಿ
ತತಿವಾಟ್ ಮುಧೈವ ಸರ್ವಜ್ಞ ೧೫೭

ಚಿತ್ರತಾರಾವೃಷ್ಟಿರೇತಿ ಮೌಕ್ತಿಕತಾಂ ನ
ಚಿತ್ತಶೂನ್ಯಸ್ಯಾಥ ಮುಂಡಿತೋ ಯೋಗೋಽಪಿ
ಕುತ್ಸಿತ ಖರೋಽಸ್ತಿ ಸರ್ವಜ್ಞ ೧೫೮

ಸಾಧುಸಿದ್ಧಾಶ್ಚೇತಿ ಬದ್ಧಕಾಷಾಯಿನಃ
ಮೇದಿನೀ ಜೀವನೇ ವಿಷಯಸಕ್ತಾಃ ಪುನರ್
ಮಾತಂಗಕಾ ಹಿ ಸರ್ವಜ್ಞ ೧೫೯

ದಂಡಕಾಷ್ಠೋತ್ತರೇ ಶುಂಡಾಭಕಚ್ಛವಾಟ್
ಮುಂಡನವತೀ ದೃಷ್ಟಿಚಲಿತೋಽಸ್ತಿ ಚೇತ್ ತದಾ
ಮುಂಡನಂ ಕಿಂ ನು ಸರ್ವಜ್ಞ ೧೬೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೬೧ ಆಲದಾ ಬಿಳಲಂತೆ ಜೋಲು ಜಡೆಗಳ ಬಿಟ್ಟ್ವ
ನಾಲಿಗೆ ಕೌಪ ಶುದ್ಧಿಲ್ಲ ಮರಿನಾಯ
ಬಾಲದಂತಕ್ಕು ಸರ್ವಜ್ಞ

೧೬೨ ಈಶತ್ವವುಳ್ಳನಕ ಈಶ್ವರನು ತಾನಕ್ಕು
ಈಶತ್ವ ಹೋದಡದು ದಾರ ಹರಿದು ಮಣಿ
ಪೂಸಿದಂತಕ್ಕು ಸರ್ವಜ್ಞ

೧೬೩ ಒಡಲ ದಂಡಿಸಿ ಮುಕ್ತಿ ಪಡೆವೆನೆಂಬುವನೆಗ್ಗ
ಬಡಿಗೆಯಲಿ ಹುತ್ತ ಹೊಡೆಯಲಡಗಿಹ ಸರ್ಪ
ಮಡಿಯುವುದೆ ಹೇಳು ಸರ್ವಜ್ಞ

೧೬೪ ಮಂಡೆ ಬೋಳಾದವರ ಕಂಡು ನಂಬಲಿ ಬೇಡ
ಖಂಡಿತಮಪ್ಪ ಪರತತ್ವ ವಿಷಯವನು
ಕಂಡು ನಂಬುವುದು ಸರ್ವಜ್ಞ

೧೬೫ ಎಲ್ಲ ಆಶೆಯು ಬಿಟ್ಟರಿಲ್ಲಿಯೇ ಕೈಲಾಸ
ಎಲ್ಲವ ಬಯಸಿ ಭ್ರಮಿಸಿದಡೆ ನರಕ ತಾ-
ನಿಲ್ಲಿಯೇ ನೋಡ ಸರ್ವಜ್ಞ

## ೬. ದಾನಪದ್ಧತಿ

೧೬೬ ಗಾನವಿದ್ಯವು ಲೇಸು ಮಾನವತಿ ಸತಿ ಲೇಸು
ಸ್ವಾನುಭಾವಿಗಳ ಕೆಳೆ ಲೇಸು ಎಲ್ಲಕ್ಕು
ದಾನಿಯೇ ಲೇಸು ಸರ್ವಜ್ಞ

೧೬೭ ಈವಂಗೆ ದೇವಂಗೆ ಆವುದಂತರವಯ್ಯ
ದೇವನು ಜಗಕೆ ಕೊಡುತಿಹನು ಕಯ್ಯಾರೆ
ಈವನೇ ದೇವ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಟಿಕಾವರೋಹ ಇವ ಜಟಿಲಜೂಟಂ ಧರಃ
ಘಟಿತ ಜಿಹ್ವಾ ಕಚ್ಛ ಶುದ್ಧೋ ನ ಚೇತ್ ಶುನಕ-
ವಟುವಾಲಕಃ ಸ ಸರ್ವಜ್ಞ ೧೬೧

ಈಶತ್ವಮಸ್ತಿ ಚೇದ್ ಈಶ್ವರಃ ಸ್ವಯಮೇವ
ಈಶತ್ವಮುಪಯಾತಿ ಚೇತ್ ಸೂತ್ರವಿಚ್ಛಿತ್ತಿ-
ವ್ಯಸ್ತ ಮಣಿದಾಮ ಸರ್ವಜ್ಞ ೧೬೨

ದಂಡನಾತ್ ದೇಹಸ್ಯ ಮುಕ್ತಿರಿತಿ ಮೂಢಧೀಃ
ದಂಡಘಾತೇನ ವಲ್ಮೀಕ ಗುಪ್ತೋರಗಃ
ಖಂಡಿತಃ ಕಿಂ ನು ಸರ್ವಜ್ಞ ೧೬೩

ಕೃತಮುಂಡನಾಜ್ಞೇತಿ ಪ್ರತ್ಯಯೋ ಮಾಸ್ತು ತವ
ಅಸ್ತಿ ಚೇತ್ ಪರತತ್ವ ವಿಷಯ ಬೋಧಸ್ತೇಷು
ಪ್ರತ್ಯಯೋ ಭವತು ಸರ್ವಜ್ಞ ೧೬೪

ತ್ಯಕ್ತ ಸಕಲಾಶಿನೋ ವ್ಯಕ್ತಕೈಲಾಸೋಽತ್ರ
ಸಕ್ತಸಕಲಾಶಯಾ ಭ್ರಾಂತಸ್ಯ ನರಕೋಽಪಿ
ಭುಕ್ತೋಽತ್ರ ಏವ ಸರ್ವಜ್ಞ ೧೬೫

## ೬ ದಾನಪದ್ಧತಿಃ

ಗಾನವಿದ್ಯಾ ವರಂ ಮಾನಿನೀ ಸ್ತ್ರೀ ವರಂ
ಸ್ವಾನುಭಾವೀ ಸಂಗತಿರ್ವರಂ ಸರ್ವೇಷು
ದಾನೀ ವರಂ ಹಿ ಸರ್ವಜ್ಞ ೧೬೬

ದೇವಸ್ಯ ದಾನಿನೋ ಕಿಂ ವಾನ್ತರಂ ಬ್ರೂಹಿ
ದೇವೋ ದದಾತೀಹ ಜಗತಿ ದಾನೀ ಸ್ವಯಂ
ದೇವಾಯತೇಽತ್ರ ಸರ್ವಜ್ಞ ೧೬೭



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೬೮ ಇಕ್ಕುವವನೂರಿಗೊಂದೊಕ್ಕಲೆಂದೆನಬೇಡ
ಅಕ್ಷಯಪದವ ಪಡೆದು ಕೈಲಾಸದಿಂ-
ದೊಕ್ಕಲಿರಬಂದ ಸರ್ವಜ್ಞ

೧೬೯ ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ

೧೭೦ ದಾನದಾ ಫಲದಿಂದ ಭೂನಾಥನಾಗುವನು
ಭಾನುಮಂಡಲವನೊಡೆದಮಳ ಸ್ವರ್ಗಕ್ಕೆ
ತಾನೊಡೆಯನಹನು ಸರ್ವಜ್ಞ

೧೭೧ ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯಕ್ಕು ಸರ್ವಜ್ಞ

೧೭೨ ಸ್ವಾತಿಯಾ ಹನಿ ಬಿದ್ದು ಜಾತಿಮುತ್ತಾದಂತೆ
ಸಾತ್ವಿಕನಪ್ಪ ಯತಿಗಿಕ್ಕೆ ಪಂಚಮಹಾ
ಪಾತಕವು ಕೆಡುಗು ಸರ್ವಜ್ಞ

೧೭೩ ಹುಟ್ಟುವಾಗಲೆ ಧನವ ಮೊಟ್ಟೆಗಟ್ಟಿಳಿದನೇ
ಕಟ್ಟಕಡೆಯಲ್ಲಿ ಕೊಂಡೊಯ್ಯುಸಿದನರಿದು
ಕೊಟ್ಟುಂಬ ದಾನಿ ಸರ್ವಜ್ಞ

೧೭೪ ನೋಡಿದಡೆ ನಾಡೊಳಗೆ ಬೇಡುವುದು ಕಡುಪಾಪ
ಬೇಡಿದಡೆ ಈಯದದು ಪಾಪ ಕೊಡುವವರ
ತಡೆವುದೇ ಪಾಪ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಭಿಕ್ಷದಂ ಗ್ರಾಮೋ ತಮೇಕಕಮುವೇಹಿ ಮಾ
ಅಕ್ಷಯಪದಂ ಸೋಽಭಿಗಮ್ಯ ಕೈಲಾಸತೋ
ಭೂಕ್ಷಿತಾ ವಸತಿ ಸರ್ವಜ್ಞ ೧೬೮

ಅನ್ನದಾನಂ ತಥಾ ನಾನೃತೋಕ್ತಿಶ್ಚಾಪಿ
ಅನ್ಯೇಷು ಚಾತ್ಮಭಾವನಮತ್ರ ಕೈಲಾಸ-
ಮಾನ್ಯತಾಮೇತಿ ಸರ್ವಜ್ಞ ೧೬೯

ದಾನಸ್ಯ ಸುಫಲೇನ ಭೂನಾಥ ಪದಮೇತಿ
ಭಾನುಮಂಡಲ ಭೇದನಾದ್ಅಮಲ ಸ್ವರ್ಗಸ್ಯ
ಸನ್ನಿಯಂತಾ ಸ ಸರ್ವಜ್ಞ ೧೭೦

ಪುರುಧನೀ ತ್ವಂ ಯದಾ ಕುರು ದಾನಮಾಹೂಯ
ಪರಿಣತಿರ್ಭವತಿ ಪದವೀ ಭವತಿ ಕೈಲಾಸ-
ಪುರಸಮೀಪೋಽಸಿ ಸರ್ವಜ್ಞ ೧೭೧

ಸ್ವಾತ್ಯಾಂ ಜಲಂ ಭವತಿ ಶುಕ್ತಿಜಂ ಮೌಕ್ತಿಕಂ
ಸತ್ಪಾಥ್ಯ ಯತಯೋ ಪ್ರದಾನಮಪಿ ಪಂಚಕಂ
ಪಾತಕಂ ಹನ್ತಿ ಸರ್ವಜ್ಞ ೧೭೨

ಜನನಕಾಲೇ ಕಿಮಿಹ ಧನಭಾಂಡಮುಪನತಂ
ನೋ ನಯತ್ಯಂತ್ಯ ಇತಿ ಸಂಬುಧ್ಯ ದತ್ವಾತ್ತಿ
ದಾನೀ ತು ಜಗತಿ ಸರ್ವಜ್ಞ ೧೭೩

ಪ್ರಾರ್ಥನೇ ಪ್ರಾರ್ಥಯತ ಸಾರ್ಥಿನಂ ಧರ್ಮಿಣಂ
ಕೀರ್ತಯಿತ್ವಾ ಮೂಢ ಮೂರ್ಖ ಪಿಶುನಂ ಜನಂ
ಪ್ರಾರ್ಥಯತ ಮೈವ ಸರ್ವಜ್ಞ ೧೭೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೭೫ ಬೇಡಿದರೆ ಬೇಡುವುದು ಮಾಡುವಾ ಧರ್ಮಿಯನು
ಮೂಢ ಮೂರ್ಖರನು ಪಿಸುಣಿಗಳ ಪೀಡಿಸಿ
ಬೇಡಬೇಡೆಂದ ಸರ್ವಜ್ಞ

೧೭೬ ಮರಣವೆಂಬುದು ಸತ್ಯ ಹರನಾಣೆ ಹುಸಿಯಲ್ಲ
ತರುಣಿಯರಿಗಿರಿಸೆ ಪರರುಂಬರದರಿಂದೆ
ವರದಾನವೀಯೊ ಸರ್ವಜ್ಞ

೧೭೭ ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಂಗೆ
ಕೊಟ್ಟು ನಾ ಕೆಟ್ಟೆನೆನಬೇಡ ಅದು ಮುಂದೆ
ಕಟ್ಟಿದಾ ಬುತ್ತಿ ಸರ್ವಜ್ಞ

೧೭೮ ಕೊಟ್ಟು ಕುದಿಯಲಿಬೇಡ ಕೊಟ್ಟಾಡಿಕೊಳಬೇಡ
ಕೊಟ್ಟು ನಾ ಕೆಟ್ಟೆನೆನಬೇಡ ಶಿವನಲ್ಲಿ
ಕಟ್ಟಿಹುದು ಬುತ್ತಿ ಸರ್ವಜ್ಞ

೧೭೯ ಇಕ್ಕಿದಾತನು ಉಂಡು ನಕ್ಕು ಸ್ವರ್ಗಕೆ ಹೋದ
ಇಕ್ಕದಾತನು ಹೋದ ನರಕಕ್ಕೆ ಲೋಕದೊಳ–
ಗಿಕ್ಕಲೇ ಬೇಕು ಸರ್ವಜ್ಞ

೧೮೦ ಆಗ ಬಾ ಈಗ ಬಾ ಹೋಗಿ ಬಾ ಎನ್ನದಲೆ
ಆಗಲೇ ಕರೆದು ಕೊಡುವವನ ಧರ್ಮ ಹೊ–
ನ್ನಾಗದೇ ಬಿಡದು ಸರ್ವಜ್ಞ

೧೮೧ ಮೇಲು ಕೀಳೆನಬೇಡ ಶೀಲವನು ಬಿಡಬೇಡ
ಕಾಲವಕಾಲವೆನಬೇಡ ಧರ್ಮದಾ
ಕೀಲು ಬೇರೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತುತೋ ಲೋಕೇಽತ್ರ ಪಾತಕಂ ಭಿಕ್ಷೈವ
ಪ್ರಾರ್ಥನಾ ಧಿಕ್ಕೃತಿಃ ಪಾಪಮಿಹ ದಾಸಸ್ಯ
ಘಾತಿರಘಮೇವ ಸರ್ವಜ್ಞ ೧೭೫

ಮರಣಮಿತಿ ಸತ್ಯಮಿಹ ಹರನಾಮತೋ ಶಪೇ
ತರುಣೇಭ್ಯ ಗುಪ್ತಮಪಿ ಪರಭುಕ್ತಿಮೇತ್ಯತಃ
ವರದೋ ಭವಾತ್ರ ಸರ್ವಜ್ಞ ೧೭೬

ದತ್ತಂ ಸ್ವಕಂ ಭವತಿ ಗುಪ್ತಂ ಪರೇಷಾಂ ಚ
ದತ್ತಂ ಪ್ರಣಷ್ಟಮಿತಿ ಮಾ ನಿಗದ ಪರಲೋಕ-
ಭುಕ್ತಿಸ್ ತವೈವ ಸರ್ವಜ್ಞ ೧೭೭

ದತ್ವಾಸ್ತು ಮಾ ವ್ಯಥಾ ದತ್ವಾಸ್ತು ಮಾ ಕಥಾ
ದತ್ವಾ ಪ್ರಣಷ್ಟಮಿತಿ ಮಾ ನಿಗದ ಪರಶಿವೇ
ನ್ಯಸ್ತಂ ತದಸ್ತಿ ಸರ್ವಜ್ಞ ೧೭೮

ದಾನೀಹ ಸಂಭುಂಜ್ಯ ಮಾನ್ಯತೇ ಸ್ವರ್ಗೇಽಪಿ
ದಾನಹೀನೋ ನರಕಮಭಿಗತೋ ಲೋಕೇಽತ್ರ
ದಾನಂ ವರಂ ಹಿ ಸರ್ವಜ್ಞ ೧೭೯

ಯಾಹಿ ಪುರತಃ ಪುನಶ್ಚೈಹೀತಿ ನ ನಿಗದ್ಯ
ಮುಹುರ್ ಏವ ಯಃ ಪ್ರಯಚ್ಛತಿ ತಸ್ಯ ದಾನಮಿಹ
ಬಹುಸುವರ್ಣಮಿವ ಸರ್ವಜ್ಞ ೧೮೦

ಕಲಯ ಸರ್ವಾನ್ ಸಮಂ ಶೀಲಂ ಸದಾಪಿ ಭಜ
ಕಾಲೋಽವಕಾಲ ಇತಿ ಮಾ ಕಲಯ ಧರ್ಮಸ್ಯ
ಕೀಲಿಕಾನ್ಯೈವ ಸರ್ವಜ್ಞ ೧೮೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೮೨ ಕೊಡುವವನ ಧರ್ಮಕ್ಕೆ ಕಡೆಯೇನು ಮೊದಲೇನು
ಎಡತಾಕಿಸಿಕೊಂಡು ಕೊಡುವವನ ಧರ್ಮವು
ಪುಡಿಯು ಮಣ್ಣೆಂದ ಸರ್ವಜ್ಞ

೧೮೩ ತುಮ್ಮಲೂಟಕೆ ಲೇಸು ಬಯ್ಯದಾ ಸೊಸೆ ಲೇಸು
ಅಯ್ಯ ಬಾರೆಂಬ ಮಗ ಲೇಸು ಧರ್ಮವದು
ಕೈಯ್ಯಾರೆ ಲೇಸು ಸರ್ವಜ್ಞ

೧೮೪ ಸೂಕ್ಷ್ಮವಾದರು ಒಂದು ಭಿಕ್ಷವೀಯಲಿ ಬೇಕು
ಅಕ್ಷಯಪಾತ್ರೆ ತನಗಕ್ಕು ಮೋಕ್ಷವದು
ತತ್ಕ್ಷಣದೊಳಕ್ಕು ಸರ್ವಜ್ಞ

೧೮೫ ಆಡದಲೆ ಕೊಡುವವನು ರೂಢಿಯೊಳಗುತ್ತಮನು
ಆಡಿ ಕೊಡುವವನು ಮಧ್ಯಮನಧಮ ತಾ_
ನಾಡಿ ಕೊಡದವನು ಸರ್ವಜ್ಞ

೧೮೬ ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೆ
ಕೊಡಬೇಡ ಕೊಡದೆ ಇರಬೇಡ ಧರ್ಮವನು
ಬಿಡಬೇಡವೆಂದ ಸರ್ವಜ್ಞ

೧೮೭ ಇಚ್ಛೆಯನು ಅರಿದಿತ್ತ ನುಚ್ಚೊಂದು ಮಾಣಿಕವು
ಇಚ್ಛೆಯದು ತೀರ್ದ ಬಳಿಕಿತ್ತ ಮಾಣಿಕವು
ನುಚ್ಚಿಗು ಕಷ್ಟ ಸರ್ವಜ್ಞ

೧೮೮ ಆಸೆಯನು ಅರಿದಿತ್ತ ವೀಸವದು ಸವಲಕ್ಷ
ಆಸೆ ತಾ ತೀರ್ದ ಬಳಿಕಿತ್ತ ಸವಲಕ್ಷ
ವೀಸದಿಂ ಕಷ್ಟ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂದಾತೃ ದಾನಸ್ಯ ಕಾದಿರಂತ್ಯಂ ಕುತಃ
ಮುಧಾ ಪ್ರಸಹ್ಯೈವ ದದತಃ ಪ್ರದಾನಂ ತು
ಮೃದ್ ಧೂಲಿರ್‌ಏವ ಸರ್ವಜ್ಞ ೧೮೨

ಪರಮಾನ್ನಮಿಹ ವರಂ ವರಮುನಿಂದತ್ ಸ್ನುಷಾ
ಆರ್ಯೆ ಇತ್ಯಾಹ್ವಯತ್ ಪುತ್ರೋ ವರಂ ಸ್ವಕೃತ
ಧರ್ಮೋ ವರಂ ಹಿ ಸರ್ವಜ್ಞ ೧೮೩

ಸೂಕ್ಷ್ಮಮಣುಕಂ ಭವತು ಭಿಕ್ಷಾ ಪ್ರದೇಯಾ ಹಿ
ಅಕ್ಷಯ್ಯ ಪಾತ್ರಮಿವ ಭವತಿ ತವ ಮೋಕ್ಷೋಽಪಿ
ತತ್‌ಕ್ಷಣಂ ಭವತಿ ಸರ್ವಜ್ಞ ೧೮೪

ನಾಶ್ರುತ್ಯ ದದತಿ ಯೇ ವಿಶ್ರುತಾಸ್ತೇ ಜಗತಿ
ಆಶ್ರುತ್ಯ ಸಂದದತಿ ಮಧ್ಯಮಾ ಹ್ಯಧಮಾಸ್ತು
ಆಶ್ರುತ್ಯ ನೈವ ಸರ್ವಜ್ಞ ೧೮೫

ದೀಪತ್ತೈಲಕ್ಷಯೋ ನಾರ್ಜಿತಂ ಭಾಂಡಮಪಿ
ಮಾಪ್ಯದೇಯಂ ಮಾತಿದೇಯಂ ಚ ಧರ್ಮಸ್ಯ
ಹಾಪನಂ ಮಾಸ್ತು ಸರ್ವಜ್ಞ ೧೮೬

ಇಚ್ಛಾನುದತ್ತಂ ಸುತುಚ್ಛಮಪಿ ಮಣಿನಿಭಂ
ಇಚ್ಛಾವಸಾನೇ ಪ್ರದತ್ತಂ ಸುಮಣಿರಪಿ
ತುಚ್ಛಾವರಂ ಹಿ ಸರ್ವಜ್ಞ ೧೮೭

ಆಶಾನುದತ್ತಂ ಸುಲೇಶಮಪಿ ಲಕ್ಷಮಿವ
ಆಶಾವಸಾನೇ ಚ ಲಕ್ಷ ನವ ದಾನಮಪಿ
ಲೇಶಾವರಂ ಹಿ ಸರ್ವಜ್ಞ ೧೮೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೮೯ ಅಂದಳವನೇರುವರೆ ಅಂದದಲಿ ಸುಖಿಸುವರೆ
ಮಂದಗಮನೆ ಸಿರಿ ದೊರೆಯುವರೆ ಹಸಿದರ್ಗೆ
ಚೆಂದದಿಂದಿಕ್ಕು ಸರ್ವಜ್ಞ

೧೯೦ ಪಾತಕವ ನೂಕುವಡೆ ಸೂತಕವ ಕಳೆಯುವಡೆ
ಭೂತೇಶನೊಲುಮೆ ಪಡೆಯುವಡೆ ಹಸಿದರಿಗೆ
ಕಾತರಿಸದಿಕ್ಕು ಸರ್ವಜ್ಞ

೧೯೧ ಎತ್ತಣಾ ಹನಿ ಬಿದ್ದು ಮುತ್ತಾದ ತೆರನಂತೆ
ಉತ್ತಮದ ಗತಿಯು ಪಡೆಯುವಡೆ ಯತಿಗೊಂದು
ತುತ್ತನಿಕ್ಕೆಂದ ಸರ್ವಜ್ಞ

೧೯೨ ಅರಿಯದೀಯುವ ದಾನ ತೆರೆದು ನೋಡದ ಕಣ್ಣು
ತಿರುಗಿ ಬಯಸದನ ಶಿವಪೂಜೆ ಶಿವನಿಂದ
ಹಿರಿದೆಂದು ಅರಿಗು ಸರ್ವಜ್ಞ

೧೯೩ ಧರ್ಮದಾ ಕರ್ಮದಾ ಮರ್ಮವನು ನೋಡುವರೆ
ಧರ್ಮಿಯಂದಳದಿ ಬರುತಿರಲು ಆದ ಹೊತ್ತು
ಕರ್ಮಿ ಬರುತಿಪ್ಪ ಸರ್ವಜ್ಞ

೧೯೪ ಅನ್ನವನು ಇಕ್ಕುವಾ ಅನ್ಯಜಾತನೆ ಕುಲಜ
ಅನ್ನವನು ಇಕ್ಕದುಣುತಿರ್ಪ ಕುಲಜಾತ-
ನನ್ಯನೆಂದರಿಗು ಸರ್ವಜ್ಞ

೧೯೫ ಉಣ್ಣದೊಡವೆಯು ಗಳಿಸಿ ಮಣ್ಣಿನೊಳು ತಾನಿರಿಸಿ
ಸಣ್ಣಿಸಿ ನೆಲನ ಸಾರಿದನ ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅಟ್ಟಿಕಾರೋಹಣೇ ಸುಷ್ಠು ಸೌಖ್ಯಾರ್ಜನೇ
ಪುಷ್ಪಾಂಗನಾ ದ್ರವಿಣ ಪ್ರಾಪಣೇಽಪ್ಯನ್ನಾರ್ತ-
ಕೇಷ್ವಂ ಪ್ರದೇಹಿ ಸರ್ವಜ್ಞ ೧೮೯

ಪಾತಕಾಪಾಸನೇ ಸೂತಕ ವಿನಾಶನೇ
ಭೂತೇಶ ಸುಪ್ರಸಾದಾರ್ಜನೇ ಕ್ಷುಧಿತಾಯ
ವಿತರಾಶನಾನಿ ಸರ್ವಜ್ಞ ೧೯೦

ಕುತ್ರತೋ ಬಿಂದುಸ್ಸ ಮೌಕ್ತಿಕತ್ವಂ ಪ್ರೈತಿ
ಉತ್ತಮಗತಿ ಪ್ರಾಪ್ತಿಲಾಭಾಯ ಯತಿಜನೇ
ವಿತರತಾನ್ನಮಿಹ ಸರ್ವಜ್ಞ ೧೯೧

ದಾನಮುಜ್ಞಾತಂ ತದ್‌ಅಸವೇಕ್ಷಕಾಕ್ಷಿರಪಿ
ಅನಪೇಕ್ಷಮಾಣಫಲ ಶಿವಪೂಜನಂ ಶಿವಾತ್
ಶೃಣ್ವಧಿಕಮೇವ ಸರ್ವಜ್ಞ ೧೯೨

ದಾನಿನೋ ಗರ್ಧಿನೋ ಜಾನಾಸಿ ಕಿಂ ಮರ್ಮ
ದಾನೀ ಸಮಾಯಾತಿ ವಾಹನೇ ಗರ್ಧೀ ತ-
ಮಾನಯತಿ ಶಿರಸಿ ಸರ್ವಜ್ಞ ೧೯೩

ಅನ್ನದಾನೀ ಜಗತ್ಯನ್ಯಜಃ ಕುಲಜೋಽಸ್ತಿ
ಅನ್ನಂ ನ ಸಂದಾಯ ಯೋಽತ್ತಿ ಕುಲಜಾತೋಽಪಿ
ಸೋಽನ್ಯತ್ವಮೇತಿ ಸರ್ವಜ್ಞ ೧೯೪

ವ್ಯರ್ಥವಸು ಸಂಪಾದ್ಯ ಗರ್ತಕೇ ಸುನಿಧಾಯ
ಮರ್ದಯಿತ್ವಾ ಭೂಮಿಸಮಮಿವ ಕೃತಂ ಯೇನ
ಮೃತ್‌ತನ್ಮುಖೇಽತ್ರ ಸರ್ವಜ್ಞ ೧೯೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೧೯೬ ಅನ್ನವನು ಇಕ್ಕುವನು ಉನ್ನತವ ಪಡೆಯುವನು
ಉನ್ನತನಪ್ಪ ಯತಿಗಿಕ್ಕದಾ ಲೋಭಿ
ಕುನ್ನಿಗಿಂ ಕಷ್ಟ ಸರ್ವಜ್ಞ

೧೯೭ ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
ಪುಣ್ಯವ ಮಾಡಿ ಉಣಲೊಲ್ಲದವನಿರವು
ಉಣ್ಣೆಯಿಂ ಕಷ್ಟ ಸರ್ವಜ್ಞ

೧೯೮ ವಿನಯವಿದ್ದಧಿಕರನು ತನುಗೆಟ್ಟ ಬಡವರನು
ಘನಹೀನವಳಿದು ಕರೆದುಣ್ಣದವನೂಟ
ಶುನಕ ತಿಂದಂತೆ ಸರ್ವಜ್ಞ

೧೯೯ ಹೊತ್ತಾರೆ ಬಯ್ಗಿಂಗೆ ಮತ್ತೆ ಬಾ ಎಂದೆನುತ
ಹೊತ್ತನೆ ಕೊಂದು ಹುಸಿವವನಿಗಿಂತಲೂ
ಸತ್ತಾತ ಲೇಸು ಸರ್ವಜ್ಞ

೨೦೦ ಭಿಕ್ಷವೆಂದವರಿಗೆ ಭಿಕ್ಷವನು ನೀಡಿದರೆ
ಅಕ್ಷಯ ಪದವು ತನಗಕ್ಕು ಇಲ್ಲವೆನೆ
ಭಿಕ್ಷುಕನಕ್ಕು ಸರ್ವಜ್ಞ

೨೦೧ ತಿರಿದುಂಬುತೊಬ್ಬರನು ಕರೆದುಂಬುದತಿಹಿತವು
ಕರೆಯದೊಬ್ಬರನು ಉಣುತಿಪ್ಪನೂಟವದು
ನರಕದಾ ಊಟ ಸರ್ವಜ್ಞ

೨೦೨ ಹೆಂಡತಿಮಕ್ಕಳಿಗೆಂದು ದಂಡಿಸದಿರು ದೇಹವ
ಕಂಡ ವಸ್ತುವನು ಕೊಡದುಣದೆ ಬೈಚಿಡಲು
ಕಂಡವರಿಗಹುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನ್ನದಾನೀ ಜಗತ್ಯುನ್ನತಿಮವಾಪ್ನೋತಿ
ಉನ್ನತಾರೂಢ ಯತಯೋಽದಾತ್ರ ಲೋಭೀ ತು
ಶ್ವಾನಾವರೋ ಹಿ ಸರ್ವಜ್ಞ ೧೯೬

ಚೂಷಿಕೋಧಃಸ್ಥಿತಾ ಚೂಷತಿ ಪಯೋ ನೈವ
ಅಶ್ನಾತಿ ಪುಣ್ಯಪ್ರದಂ ಯೋ ನ ತತ್‌ಸ್ಥಿತಿಃ
ಚೂಷಾವರ್ರೈವ ಸರ್ವಜ್ಞ ೧೯೭

ವಿನಯ ಯುಕ್ತಾಧಿಕಾನ್ ತನುಕೃಶಾನ್ ಅಧನಾಂಶ್ಚ
ಘನಹೀನಮಾಧೂಯ ಚಾಹೂಯ ನಾತ್ತಿ ಚೇತ್
ಶುನಿಭುಕ್ತಿರ್‌ಏವ ಸರ್ವಜ್ಞ ೧೯೮

ಪ್ರಾತೋಽಥವಾ ಸಾಯಮತ್ರ ತ್ವಮೇಹೀತಿ
ಹತಕಾತ್ ಸುಸಮಯಸ್ಯ ಚಾಸತ್ಯ ಭಾಷಿಣಃ
ಮೃತಕೋ ವರಂ ಹಿ ಸರ್ವಜ್ಞ ೧೯೯

ಭಿಕ್ಷಾರ್ಥಿನೇ ಜಗತಿ ಭಿಕ್ಷಾಪ್ರದಾನೇನ
ಅಕ್ಷಯಪದಂ ಫಲತಿ ನೇತಿ ವಾದೇ ಪುನಃ
ಭಿಕ್ಷುಕೋ ಭವತಿ ಸರ್ವಜ್ಞ ೨೦೦

ಭಿಕ್ಷಾಶನೇऽಪೀಹ ಭಕ್ಷ್ಯಃ ಪರೈರ್ಹಿತಂ
ತ್ಯಕ್ತ್ವಾನ್ಯಮೇಕೇನ ಭಕ್ಷಣಂ ನರಕಸ್ಯ
ಭಕ್ಷ್ಯಸಮಮೇವ ಸರ್ವಜ್ಞ ೨೦೧

ಸತ್ಯೈಸುತೇಭ್ಯ ಇತಿ ಘಾತಯತ ಮಾ ತನುಂ
ಅತ್ತವಸ್ತೂನಿ ಚಾನನುಭೂಯ ಗುಪ್ತಾನಿ
ಸತ್ಯಮನ್ಯಸ್ಯ ಸರ್ವಜ್ಞ ೨೦೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೨೦೩ ಮಾನವರ ದುರ್ಗುಣವನೇನೆಂದು ಬಣ್ಣಿಪೆನು
ದಾನಗೆಯ್ಯೆನಲು ಕನಲುವರು ದಂಡವನು
ಮೌನದೀಯುವರು ಸರ್ವಜ್ಞ

೨೦೪ ದಾನವೆಂದರೆ ತಲೆಯ ಚಾಣದಲಿ ಕಡಿದಂತೆ
ತಾನೊಂದು ತಪ್ಪು ಮಾಡಿ ನೂರಾರನು
ಮೌನದಿಂ ಕೊಡುವ ಸರ್ವಜ್ಞ

೨೦೫ ಕಳ್ಳರಿಗೆ ಸುಳ್ಳರಿಗೆ ಡೊಳ್ಳರಿಗೆ ಡೊಂಬರಿಗೆ
ಸುಳ್ಳು ಗೊರವರಿಗೆ ಕೊಡುವವರು ಧರ್ಮಕ್ಕೆ
ಎಳ್ಳಷ್ಟು ಕೊಡರು ಸರ್ವಜ್ಞ

೨೦೬ ಕಂಡವರ ದಂಡಿಸುತ ಕೊಂಡವರ ಒಡವೆಗಳ-
ನುಂಡುಂಡು ಮಲಗಿ ಮಡಿದ ಸೂಳೆಗೆ ಯಮ-
ಗಂಡ ತಪ್ಪುವುದೆ ಸರ್ವಜ್ಞ

೨೦೭ ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ
ಉಳ್ಳಲ್ಲಿ ದಾನ ಕೊಡಲಿಲ್ಲದವನೊಡವೆ
ಕಳ್ಳಗೆ ನೃಪಗೆ ಸರ್ವಜ್ಞ

೨೦೮ ಕೊಟ್ಟುಂಬ ಕಾಲದಲಿ ಕೊಟ್ಟುಣಲಿಕರಿಯದೆ
ಹುಟ್ಟಿಯು ಒಳಗೆ ಜೇನಿಕ್ಕಿ ಪರರಿಂಗೆ
ಬಿಟ್ಟು ಹೋದಂತೆ ಸರ್ವಜ್ಞ

೨೦೯ ಇದ್ದಾಗ ಉಣ್ಣದವನೆದ್ದಾಗ ಉಣ್ಣುವನೆ
ಬಿದ್ದ ದೇಹವನು ಗುದ್ದಿನೊಳಿಡುವಾಗ
ಬುದ್ಧಿ ಬಂದಪುದೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನವಾನಾಂ ದುರ್ಗುಣಂ ವರ್ಣಯಾಮಿ ಶೃಣು
ದಾನಾಯ ನೂನಮತಿಕುಪ್ಯಂತಿ ದಂಡಾಯ
ಮೌನೇನ ದದತಿ ಸರ್ವಜ್ಞ ೨೦೩

ದಾನಮಿತಿ ಶಬ್ದಿತೇ ಚಾಣಘಾತಃ ಶಿರಸಿ
ಪುನರೇಕಮುಪರಾಧ್ಯ ದಂಡಿತಃ ಶತಕಮಪಿ
ಮೌನಂ ಪ್ರದಾತಿ ಸರ್ವಜ್ಞ ೨೦೪

ಸ್ತೇನಾಯ ಪಿಶುನಾಯ ಚಾನಕೇ ನೀಚಾಯ
ಹೀನ ಗುರುವೇಷಿಣೇ ಯಚ್ಛಂತಿ ದಾನಾಯ
ತೃಣಮಪಿ ನ ದದತಿ ಸರ್ವಜ್ಞ ೨೦೫

ಪೀಡಯನ್ ಪರಜನಾನ್ ಲೋಡಯನ್ ತದ್ಧನಂ
ಗಾಢಂ ಪ್ರಭುಜ್ಯ ಸುಖನಿದ್ರಾಂ ಗತಸ್ಯ ಯಮ-
ಪೀಡಾ ಮೃತಸ್ಯ ಸರ್ವಜ್ಞ ೨೦೬

ಪ್ರಾಪ್ತಮನುಭುಕ್ತಂ ನ ಪ್ರಾಪ್ತಂ ಧೃತಂ ನಾಪಿ
ಪ್ರಾಪ್ತಂ ಪ್ರದತ್ತಂ ನ ಯೇನ ತತ್ ಸರ್ವಮಪಿ
ನೃಪಚೋರವಸ್ತು ಸರ್ವಜ್ಞ ೨೦೭

ಆದಾಯ ಕಾಲೇ ತು ನ ದದಾತಿ ನಾತ್ತ್ಯಪಿ ಚ
ಮಧು ನೀಡಗುಪ್ತಂ ವಿಹಾಯಾನ್ಯಸಾತ್ ಕೃತಂ
ಖಾದ್ಯಂ ಯಥೇವ ಸರ್ವಜ್ಞ ೨೦೮

ಸತ್ಯಪಿ ನ ಭುಂಕ್ತೇಽತ್ರ ಭುಂಕ್ತೇ ಸ ಕಿಂ ಪ್ರೇತ್ಯ
ಪತಿತ ದೇಹೋ ಯದಾ ಗರ್ತೇ ನಿಧೀಯತೇ
ಮತಿರಪಿ ತು ಕುತ್ರ ಸರ್ವಜ್ಞ ೨೦೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೧೦ ಸಿರಿಯು ಭರ ಉಳ್ಳಾಗ ಮರೆಯದಿರುವವ ಜಾಣ
ಕೊರತೆಯಾದಾಗ ಕೊಡಲೆನಗಿಲ್ಲೆಂದು
ಅರಸುವನೆ ಹೆಡ್ಡ ಸರ್ವಜ್ಞ

೨೧೧ ಅನ್ನದಾನಗಳಿಂದ ಮುನ್ನ ದಾನಗಳಿಲ್ಲ
ಅನ್ನಕ್ಕೆ ಮಿಗಿಲು ಇನ್ನಿಲ್ಲ ಜಗದೊಳಗೆ
ಅನ್ನವೇ ಪ್ರಾಣ ಸರ್ವಜ್ಞ

೨೧೨ ಕಾಗೆಯುಗುಳನು ಕಂಡು ಕೂಗುವುದು ಬಳಗವನು
ಕಾಗೆ ಕೋಳಿಗಳ ತೆರದುಣ್ಣದವನಿರವು
ಕಾಗೆಗು ಕಷ್ಟ ಸರ್ವಜ್ಞ

## ೭. ರಾಜನೀತಿ

೨೧೩ ತಂತ್ರಿವಾದ್ಯವು ಲೇಸು ಮಂತ್ರಿಯಾ ಕೆಳೆ ಲೇಸು
ಯಂತ್ರವಾಹಕನ ದಯೆ ಲೇಸು ಜಗದಿ ಸ್ವ-
ತಂತ್ರವೇ ಲೇಸು ಸರ್ವಜ್ಞ

೨೧೪ ಗುರುವು ಇಲ್ಲದ ಮಠವು ಹಿರಿಯರಿಲ್ಲದ ಮನೆಯುಂ
ಅರಸಿಲ್ಲದೂರು ಇವು ಮೂರು ನುಲಿ ಹರಿದ
ಹೊರಸಿನಂತಕ್ಕು ಸರ್ವಜ್ಞ

೨೧೫ ನಾಡೆಂಬ ದೇಹಕ್ಕೆ ರೂಢಿಪತಿಯೆ ಪ್ರಾಣ
ನಾಡಳಿಯೆ ರೂಢಿಪತಿ ಕೆಡುಗು ಅರಸಳಿಯೆ
ನಾಡೆಲ್ಲ ಕೆಡುಗು ಸರ್ವಜ್ಞ

೨೧೬ ದೊರೆತನವ ಮಾಡುವರು ಕರೆದನ್ನ ನೀಡುವರು
ಉರಗಭೂಷಣನ ನೆನೆವರು ಧರೆಯೊಳಗೆ
ನರರಲ್ಲ ನೋಡು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಧನಪೂರಕೇ ಕ್ಷಣೇ ಜ್ಞಾನೀ ನ ವಿಸ್ಮರತಿ
ನ್ಯೂನತಾ ಚೇತ್ ಪ್ರದಾತುಂ ನೇತಿ ಮೂರ್ಖಸ್ತ-
ದಾನ್ವೇಷಯತಿ ಚ ಸರ್ವಜ್ಞ ೨೧೦

ಅನ್ನದಾನಾತ್ ಪರಂ ಚಾನ್ಯ ದಾನಂ ನೈವ
ಅನ್ನಾತ್ ಪರಂ ಮಾನ್ಯಮಸ್ಯನ್ನ ಶೃಣು ಜಗತಿ
ಪ್ರಾಣೋಽನ್ನಮೇವ ಸರ್ವಜ್ಞ ೨೧೧

## ೬. ರಾಜನೀತಿಪದ್ಧತಿಃ

ತಂತುವಾದ್ಯಂ ವರಂ ಮಂತ್ರಿಸಖ್ಯಂ ವರಂ
ಯಂತ್ರವಾಹಕ ದಯಾ ಬಹುವರಂ ಜಗತಿ ಸ್ವ-
ತಂತ್ರಂ ವರಂ ಹಿ ಸರ್ವಜ್ಞ ೨೧೨

ಗುರುವಿರಹಿತೋ ಮತಶ್ಚಾರ್ಯಹೀನಂ ಗೃಹಂ
ನರಪಹೀನಾ ಪುರೀ ತ್ರಯಮಿದಂ ಛಿದ್ರಗುಣ-
ಸ್ತ್ರಿಮಾ ಸಮಂ ಹಿ ಸರ್ವಜ್ಞ ೨೧೩

ಜಾನಪದ ದೇಹಸ್ಯ ಜನಪತಿಃ ಪ್ರಾಣ ಇವ
ಜನಪದಹತೌ ಪತತಿ ಪತಿರಪಿ ಚ ಪತಿಹತೌ
ಜವಪದಃ ಪತತಿ ಸರ್ವಜ್ಞ ೨೧೪

ಭೂಪಾಲಕಾಶ್ಚ ಯೇ ದಾಪಯಂತ್ಯನ್ನಮಿಹ
ಸರ್ವಭೂಷಣ ಸುಸಂಸ್ಕಾರಿಣೋ ಧರಣಿ ಭವ-
ಕಿಂಪುಮಾಂಸೋ ನ ಸರ್ವಜ್ಞ ೨೧೫

ಮಂತ್ರಿಯುತ ರಾಜ್ಯಂ ಸುತಂತ್ರಬದ್ಧಂ ಭವತಿ
ಮಂತ್ರಿಹೀನಸ್ಯ ಸಾಮ್ರಾಜ್ಯಮಪಿ ಗತಕೀಲ-
ಯಂತ್ರಾಯತೇ ಚ ಸರ್ವಜ್ಞ ೨೧೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೧೭ ಮಂತ್ರಿಯುಳ್ಳಾ ರಾಜ್ಯವೆಂತಿರಿಸಿದಂತಕ್ಕು
ಮಂತ್ರಿಯಿಲ್ಲದನ ಸಾಮ್ರಾಜ್ಯ ಕೀಲ್ಗಳೆದ
ಯಂತ್ರದಂತಕ್ಕು ಸರ್ವಜ್ಞ

೨೧೮ ಮಂದಿಯಿಲ್ಲದ ರಾಜ್ಯ ಕಂದನಿಲ್ಲದ ಭಾಗ್ಯ
ಬಂಧುವಿಲ್ಲದ ಮನೆತನ ಜಗದೊಳು
ಚಂದವಲ್ಲೆಂದ ಸರ್ವಜ್ಞ

೨೧೯ ಊರಿಗೆ ದೊರೆ ರೂಪು ನಾರಿಗೆ ಗುಣ ರೂಪು
ಚಾರು ಕೋಕಿಲೆಗೆ ಸ್ವರ ರೂಪು ರಾಜಗೆ
ಧೀರತ್ವ ರೂಪು ಸರ್ವಜ್ಞ

೨೨೦ ಜಾತಿ ವೀರರು ಸಾವ ಭೀತಿಗಂಜುಳಿವರೇ
"ಜಾತಸ್ಯ ಮರಣಂ ಧ್ರುವಂ" ಎಂದಿರುತಿರಲು
ಏತಕಂಜುವದು ಸರ್ವಜ್ಞ

೨೨೧ ಕೋಟೆ ಕದನಕೆ ಲೇಸು ಬೇಟೆಯರಸಿಗೆ ಲೇಸು
ನೀಟಾದ ಹೆಣ್ಣು ತರಲೇಸು ಸುಜನರೊಡ-
ನಾಟವೇ ಲೇಸು ಸರ್ವಜ್ಞ

೨೨೨ ಅರಿವು ಇರದಿರೆ ಹೊಲ್ಲ ಕರಿಯು ಬೆದರಲು ಹೊಲ್ಲ
ಅರಿಯುದೂರೊಳಗೆ ಇರ ಹೊಲ್ಲ ದೊರೆಗಳಿಗೆ
ಸರಸವೇ ಹೊಲ್ಲ ಸರ್ವಜ್ಞ

೨೨೩ ಕತ್ತಿಯನು ಹಿಡಿಯುವಡೆ ಶಕ್ತಿ ತುಂಬಿರಬೇಕು
ಶತ್ರುವು ಸುತ್ತ ಮುತ್ತಲು ಕತ್ತಿಯಿ-
ನೆತ್ತಿ ಹೊಯ್ಯೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರಿಯುತ ರಾಜ್ಯಂ ಸುತಂತ್ರಬದ್ಧಂ ಭವತಿ
ಮಂತ್ರಿಹೀನಸ್ಯ ಸಾಮ್ರಾಜ್ಯಮಪಿ ಗತಕೀಲ-
ಯಂತ್ರಾಯತೇ ಚ ಸರ್ವಜ್ಞ ೨೧೭

ಪ್ರಕೃತಿಹೀನಂ ರಾಜ್ಯಮತ್‌ಅಕಿಶೋರ ಭಾಗ್ಯಮಪಿ
ರಿಕ್ತ ಬಾಂಧವಕುಲಂ ತ್ರಯಮಿದಂ ಜಗತಿ ಶೃಣು
ಸುಖಕರಂ ನೈವ ಸರ್ವಜ್ಞ ೨೧೮

ಪುರಭೂಷಣಂ ನೃಪೋ ನಾರ್ಯೋ ಗುಣಾಸ್ತಥಾ
ಚಾರು ಕೋಕಿಲಕಾಯು ಸ್ವರ ಏವ ಭೂಷಣಂ
ಧೀರತಾ ರಾಜ್ಞಿ ಸರ್ವಜ್ಞ ೨೧೯

ಜಾತಿವೀರಾ ಮೃತ್ಯುಭೀತಾ ದ್ರವಂತಿ ಕಿಂ
ಜಾತಸ್ಯ ಮರಣಮಪಿ ಧ್ರುವಮಿತಿ ಹಿ ಸಂಸ್ಥಿತೌ
ಕಿಂ ತದ್‌ಭಯೋಽತ್ರ ಸರ್ವಜ್ಞ ೨೨೦

ದುರ್ಗೋ ವರಂ ರಣೇ ಮೃಗಯಾ ವರಂ ರಾಜ್ಞಿ
ಸುಗುಣರೂಪಾ ವಧೂರ್ ವೇಶ್ಮನಿ ವರಂ ಸುಜನ-
ಸಂಗೋ ವರಂ ಹಿ ಸರ್ವಜ್ಞ ೨೨೧

ನಿರವಬೋಧೋ ಮಾಸ್ತು ಕರಿಣಿ ಭೀತಿರ್‌ಮಾಸ್ತು
ಪರಿಚಿತಿ ವಿಹೀನ ಸ್ಥಲೇಽಪಿ ವಾಸೋ ಮಾಸ್ತು
ಸರಸೋ ನೃಪತಿಷು ಸರ್ವಜ್ಞ ೨೨೨

ನಿಸ್ತ್ರಿಂಶ ಧಾರಣೇ ಶಕ್ತಾಃ ಭೃತೋ ಭವೇತ್
ಶತ್ರುಃ ಸುಪರಿವೃತ್ಯ ಚಾಪತತಿ ಚೇತ್ ಪ್ರಹರ
ನಿಸ್ತ್ರಿಂಶಕೇನ ಸರ್ವಜ್ಞ ೨೨೩



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨೨೪ ನೆತ್ತ ವಿತ್ತಕೆ ಬಲವು ಒತ್ತೆ ಸೂಳೆಗೆ ಬಲವು
ಕತ್ತಲೆಯು ಬಲವು ಕಳ್ಳಂಗೆ ಅರಸಿಂಗೆ
ಸತ್ಯವೇ ಬಲವು ಸರ್ವಜ್ಞ

೨೨೫ ಪರನಾರಿ ಸೋದರನು ಪರಶತ್ರು ದಲ್ಲಣನು
ಕರಪಾಪ ಭಯ ಹೊರೆವ ಗುಣಿಯುಹ ನೃಪಗೆ
ಸ್ಥಿರವಿಹಳು ಲಕ್ಷ್ಮಿ ಸರ್ವಜ್ಞ

೨೨೬ ಭಂಡಾರ ತುಂಬಿ ನೀ ಭಂಡಿಯಲಿ ಹೇರುವರೆ
ಮಂಡಲವನಾಳಿ ಮೆರೆವರೆ ಒಕ್ಕಲನು
ಕೊಂಡಾಡಬೇಕು ಸರ್ವಜ್ಞ

೨೨೭ ಚಿತ್ತವರಸಿನ ಕರದ ಬೆತ್ತ ತಾ ಮಣಿದಂತೆ
ಕುತ್ತ ಹೋಗುವುದು ಅರಸೊಲಿಯೆ ಮುನಿದರೆ
ಕತ್ತು ಹೋಗುವುದು ಸರ್ವಜ್ಞ

೨೨೮ ಹಾವ ನೀರೆಳೆವಳ್ಳಿ ತುರಗ ಬೈತ್ರವು ಬಂಡಿ
ಅರಸಿನ ಮನವು ಬೆಲೆವೆಣ್ಣು ಇವು ಏಳು
ತಿರುಹುವವರಿಚ್ಛೆ ಸರ್ವಜ್ಞ

೨೨೯ ಅರಸೊಲಿದು ನಡೆಸಿದರೆ ಸಿರಿಯಕ್ಕು ಜಸಮಕ್ಕು
ಕರಿ ತುರಗ ಬಲವು ಪಿರಿದಕ್ಕು ಮುನಿದರೆ
ಕರನಾಶವಕ್ಕು ಸರ್ವಜ್ಞ

೨೩೦ ಅನವರತವಗಲದಲೆ ಜನಪತಿಯನೋಲೈಸು
ಧನಮಕ್ಕು ತೇಜ ಪಿರಿದಕ್ಕು ಕಡು ವೈರಿ
ತನಗೆ ಸಖನಕ್ಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿತ್ತಬಲಮುಕ್ಷ್ಯೈಶ್ಚ ಭ್ರಷ್ಟಾ ಬಲಂ ಪಣಃ
ಧ್ವಾಂತಂ ಬಲಂ ಚೌರ್ಯಕರ್ಮಿಣೋ ನೃಪತಯೋ
ಸತ್ಯಂ ಬಲಂ ಹಿ ಸರ್ವಜ್ಞ ೨೨೪

ಪರವಧೂ ಸೋದರೋ ವರಶತ್ರು ಭೀಕರಃ
ಉರುಪಾಪ ಭಯಗುಣೋ ಯೋ ನೃಪಸ್ತಸ್ಯಾನ-
ವರತ ಲಕ್ಷ್ಮೀರಿಹ ಸರ್ವಜ್ಞ ೨೨೫

ಕೋಶಪ್ರಪೂರಣ ವಿಶೇಷಧನ ವಾಹನೈರ್
ದೇಶಪ್ರಶಾಸನ ಸುಖೇಪ್ಸಿತಾ ಚೇತ್ ಪ್ರಜಾ-
ಶಂಸಕೋ ಭವತು ಸರ್ವಜ್ಞ ೨೨೬

ಚಿತ್ತಂ ತು ನರಪತೇರ್ ನೇತ್ರಲತಿಕಾ ಕರೇ
ಕುತ್ಸಿತಾಪದ್ ದ್ರವತಿ ಸುಪ್ರಸನ್ನೇ ಕ್ರುಧಿ ನಿ-
ಕೃತ್ತಕಂಠೋ ಹಿ ಸರ್ವಜ್ಞ ೨೨೭

ಪರಿವಹತ್ ಜಲ ಬಾಲವೀರುತ್ ತುರಗ ಶಕಟ
ತರಣಿ ನರಪತಿಮನೋ ಗಣಿಕಾಶ್ಚ ಸಪ್ತ ನೇ-
ತಾರಮನುಸರತಿ ಸರ್ವಜ್ಞ ೨೨೮

ರಾಜನಿ ಪ್ರೀತೇ ವಿರಾಜತೇ ಶ್ರೀರ್ ಯಶಃ
ಗಜ ತುರಗ ಬಲಮಪಿ ವಿವರ್ಧತೇ ಕುಪಿತೇ ತು
ವ್ರಜಸಿ ಲಯಮೇವ ಸರ್ವಜ್ಞ ೨೨೯

ಅನವರತಮವಿಹಾಯ ಜನಪತಿಂ ಸೇವಸ್ವ
ಧನಮಧಿಕ ತೇಜೋಽಪಿ ವರ್ಧತೇ ಕಟ್ವರಿಃ-
ಘನಸಖೋ ಭವತಿ ಸರ್ವಜ್ಞ ೨೩೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೨೩೧ ಮೆಚ್ಚಿದಂತರಸಿನಲಿ ಎಚ್ಚರಿಂದಿರಬೇಕು
ಎಚ್ಚರವು ತಪ್ಪಿ ನಡೆದರೆ ಆ ಮೆಚ್ಚು
ಕಿಚ್ಚಿನಂತಕ್ಕು ಸರ್ವಜ್ಞ

೨೩೨ ಅರಸನೋಲಯ್ಸುವರೆ ಕರಭೀತಿ ಬೇಕಯ್ಯ
ಅರಸು ಕರಿ ಉರಗನೊಳೆಚ್ಚರಿಲ್ಲದಡೆ
ತ್ವರಿತದಿಂ ಕೊಲುಗು ಸರ್ವಜ್ಞ

೨೩೩ ಎದ್ದು ಮಾತಾಡದಿರು ಎದ್ದೆದ್ದು ನಿಲ್ಲದಿರು
ಇದ್ದ ಮಾನಿಸರ ಜರೆಯದಿರು ಓಲಗದೊ-
ಳಿದ್ದಾಗ ನೀನು ಸರ್ವಜ್ಞ

೨೩೪ ಕುದುರೆಯನು ಏರದ ಕದನವನು ಜಯಿಸದ
ಸುದತಿಯರ ಒಲುಮೆ ಅರಿಯದ ಅರಸು ತಾ
ಸಿದಿಗೆಯ ಹೆಣನು ಸರ್ವಜ್ಞ

೩೫ ರಾಗವಿಲ್ಲದ ವಿದ್ಯೆ ಭೋಗವಿಲ್ಲ ನಿದ್ರೆ
ತ್ಯಾಗವಿಲ್ಲದನ ದೊರೆತನ ಹಾಳೂರ
ಗೂಗೆಯಂತಕ್ಕು ಸರ್ವಜ್ಞ

೨೩೬ ಬಂದವರ ಕರೆಯಿಸನು ನಿಂದವರ ನುಡಿಯಿಸನು
ಹಂದಿಯು ಗಜವು ಸರಿಯೆಂಬನೋಲಗವು
ಎಂದಿಗೂ ಬೇಡ ಸರ್ವಜ್ಞ

೨೩೭ ಅಂತರವನರಿವಲ್ಲಿ ಎಂತಾದರಿರಲಕ್ಕು
ದಂತಿ ಸೂಕರನು ಸರಿಯೆಂಬ ಠಾವಿನಲಿ
ಎಂತಿರುವುದಕ್ಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಪ್ರಸನ್ನೇ ರಾಜ್ಞಿ ನ ಪ್ರಮತ್ತೋ ಭವೇತ್
ಅಪ್ರಜಾಗ್ರತಚರಂ ತತ್ಪ್ರಸಾದಶ್ಚಾಪಿ
ಕ್ಷಿಪ್ರಂ ಪ್ರದಹತಿ ಸರ್ವಜ್ಞ ೨೩೧

ಭೂಪತಿ ನಿಷೇವಣೇ ಕಾಪಿ ಭೀತಿರ್ಭವೇತ್
ಭೂಪತೌ ಚೋರಗೇ ಕರಿಣಿ ಚಾಜಾಗ್ರತಃ
ಸಪದಿ ನಿಹತಸ್ಸ ಸರ್ವಜ್ಞ ೨೩೨

ಉತ್ಥಾಯ ಮಾ ಪ್ರಲಪ ಪ್ರೋತ್ಥಿತೋ ಮಾ ತಿಷ್ಠ
ಆಸ್ಥಾನಮಂಡಿತಾನ್ ಮಾ ದೂಷಯ ತ್ವಮಪಿ
ಸಂಸ್ಥಿತಸ್ತತ್ರ ಸರ್ವಜ್ಞ ೨೩೩

ಯೋಽಶ್ವಮಾರೋಹತಿ ನ ಶಶ್ವದ್ಆಜೌ ಜಿತಃ
ಯಸ್ಸ ಸುದತೀರತಿಂ ನ ಚ ವೇದ ಸ ಹ್ಯಾಸ-
ನಸ್ಥ ಕುಣಪಮಿವ ಸರ್ವಜ್ಞ ೨೩೪

ರಾಗೂನ ವಿದ್ಯಾ ಚ ಭೋಗೂನ ನಿದ್ರಾ ಚ
ತ್ಯಾಗೂನ ರಾಜತ್ವಮೇತಾನಿ ವಿಜನಭೂ-
ಭಾಗಘೂಕ ಇವ ಸರ್ವಜ್ಞ ೨೩೫

ಆಗತಮನಾಹ್ವಯತಿ ದ್ವಾರ್ಗತಂ ನ ಹಿ ವದತಿ
ಕುಘೃಷ್ಟಿರಪಿ ಗಜಸಮಾನ ಇತಿ ಮತಸಭಾ-
ತ್ಯಾಗೋ ವರಂ ಹಿ ಸರ್ವಜ್ಞ ೨೩೬

ಅಂತರವಿದಾಂ ಸ್ಥಲೇ ಸಂಸ್ಥಿತಿಃ ಕಾ ವಾಸ್ತು
ದಂತೀ ಕುಸೂಕರ ಸಮಾನ ಇತಿ ಯತ್ರಾಸ್ತಿ
ಕಿಂ ಸ್ಥಿತಿಸ್ತತ್ರ ಸರ್ವಜ್ಞ ೨೩೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೩೮ ನಾಡನಾಳುವ ಅರಸು ರೂಢಿಗೀಶ್ವರನಕ್ಕು
ಕಾಡುಮಿಗದಂತೆ ಮೊರೆದುರಿಯಲಾ ನಾಡು
ಕಾಡಾಗದಿಹುದೆ ಸರ್ವಜ್ಞ

೨೩೯ ಅಸಗನತಿಗರ್ವಿಸಲು ಹಸು ಕಾಡಿ ಕರೆಯಲು
ಉಸುರಿಲ್ಲದರಸು ಪ್ರಭುವಾಗೆ ಪ್ರಜೆಯೆಲ್ಲ
ಮಸಿವಣ್ಣವಕ್ಕು ಸರ್ವಜ್ಞ

೨೪೦ ಅರಸ ರಕ್ಕಸನಂತೆ ಪರಮಂತ್ರಿ ಹುಲಿಯಂತೆ
ಬರೆವಾತ ನಾಡ ನರಿಯಂತೆ ಪರಿವಾರ
ಗರಗಸದಂತೆ ಸರ್ವಜ್ಞ

೨೪೧ ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧಫಲ ಸ್ವಾಮಿಕಾರ್ಯಕ್ಕೆ
ಮಡಿಯಲೇ ಬೇಕು ಸರ್ವಜ್ಞ

## ೮. ಸಂಗಪದ್ಧತಿ

೨೪೨ ಮೇರುವಿಂಗೆಣೆಯಿಲ್ಲ ಧಾರುಣಿಗೆ ಪಡಿಯಿಲ್ಲ
ಕಾರುಣಿಕರಪ್ಪ ಹಿರಿಯರ ಸಂಸರ್ಗ-
ವಾರಿಂದಲಧಿಕ ಸರ್ವಜ್ಞ

೨೪೩ ಕಪ್ಪೆಗಳು ಮೀನುಗಳು ಇಪ್ಪುದದು ತೀರ್ಥವೆ
ತುಪ್ಪ ಓಗರಕೆ ಸಲುವುದು ಸತ್ಪುರುಷ-
ರಿಪ್ಪುದೇ ತೀರ್ಥ ಸರ್ವಜ್ಞ

೨೪೪ ಸತ್ಯರಾ ನುಡಿ ತೀರ್ಥ ನಿತ್ಯರ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ-
ರೆತ್ತಣದು ತೀರ್ಥ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನಪದ ಸುರಾಜಾ ತು ಜನಪದೇ ರಾಜತೇ
ವನಮೃಗ ಇವಾಚರನ್ ತಪತಿ ಚೇತ್ ಜನಪದೋ
ವನಪದೋ ಭವತಿ ಸರ್ವಜ್ಞ ೨೩೮

ದೃಪ್ತೇಷು ರಜಕೇಷು ತಪ್ತದೋಗ್ರಾಹ್ಯಂ ಗವೌ
ಲುಪ್ತಶಕ್ತೌ ರಾಜ್ಞಿ ಶಾಸಕೇ ತತ್ಪ್ರಜಾ
ಸುಪ್ತಧೃತಿಮೇತಿ ಸರ್ವಜ್ಞ ೨೩೯

ಭೂಪಸ್ತು ರಾಕ್ಷಸೋ ದ್ವೀಪೀವ ಮಂತ್ರೀ ಚ
ಲಿಪಿಕರೋ ಜನಪದಸ್ಸೃಗಾಲ ಇವ ಕ್ರಕಚ ಇವ
ತತ್ಪರಿವೃತಾಶ್ಚ ಸರ್ವಜ್ಞ ೨೪೦

ಸ್ವರ್ಗೋಽಗ್ರಪದಹತೌ ನರಕಃ ಪರಾಹತೌ
ಅಗ್ರಯಾನೇಽಶ್ವಮೇಧಂ ಫಲಂ ಸ್ವಾಮಿನೇ
ವ್ಯಗ್ರಮೃತಿರಸ್ತು ಸರ್ವಜ್ಞ ೨೪೧

## ೮. ಸಂಗ ಪದ್ಧತಿಃ

ಮೇರುಸಮಮೇವ ನ ಹಿ ಧಾರಿಣೇ ಪ್ರತಿಮಾ ನ
ಕಾರುಣಿಕ ಗುರುಜನ ಸುಸಂಗತಿಃ ಸರ್ವೇಷು
ಭೂರ್ಯಧಿಕಮೇವ ಸರ್ವಜ್ಞ ೨೪೨

ಮಂಡೂಕ ಮತ್ಸ್ಯ ಕುಲ ಭಾಂಡಂ ನ ತೀರ್ಥಮಿಹ
ಮಂಡಿತಂ ಘೃತಮೋದನೇನ ತೀರ್ಥಂ ಸುಜನ-
ಷಂಡಮೇವಾತ್ರ ಸರ್ವಜ್ಞ ೨೪೩

ತೀರ್ಥಂ ಹಿ ಸತ್ಯವಾಕ್ ತೀರ್ಥಂ ಸುಚರಿತಮಪಿ
ತೀರ್ಥಮುತ್ತಮ ಸಂಗತಿಶ್ಚ ನಿವಹತ್ ಜಲಂ
ತೀರ್ಥಂ ಕುತೋ ನು ಸರ್ವಜ್ಞ ೨೪೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೪೫ ಸಿಂದೆಯನು ನುಡಿದರೂ ಸಂದ ಸಜ್ಜನ ಲೇಸು
ಹೊಂದಿ ಸಾಸಿರವ ಕೊಟ್ಟರೂ ದುರ್ಜನರ
ದಂದುಗವೆ ಬೇಡ ಸರ್ವಜ್ಞ

೨೪೬ ಹಾಲುಳ್ಳ ಹಸು ಲೇಸು ಶೀಲುಳ್ಳ ಶಿಶು ಲೇಸು
ಬಾಲೆ ಸಜ್ಜನೆಯು ಬಲು ಲೇಸು ಹುಸಿಯದ
ನಾಲಿಗೆಯೆ ಲೇಸು ಸರ್ವಜ್ಞ

೨೪೭ ಸಜ್ಜನರ ಸಂಗವದು ಹೆಜ್ಜೇನು ಕೊಡದಂತೆ
ದುರ್ಜನರ ಸಂಗದೊಡನಾಟ ಬಚ್ಚಲ
ರೊಚ್ಚಿನಂತಿಹುದು ಸರ್ವಜ್ಞ

೨೪೮ ಡೊಂಕು ಹಣ್ಣುಗಳಲ್ಲಿ ಡೊಂಕು ಬಾಳೆಯ ಹಣ್ಣು
ಡೊಂಕುಂಟು ಒಳಗೆ ರುಚಿಯುಂಟು ಸಜ್ಜನರ
ಡೊಂಕು ಲೇಸೆಂದ ಸರ್ವಜ್ಞ

೨೪೯ ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾದಂತೆ ಸರ್ವಜ್ಞ

೨೫೦ ಮಾನಹೀನರ ಸಂಗವೇನು ಕೊಟ್ಟರು ಬೇಡ
ಮಾನವುಳ್ಳವರ ಸಂಗ ತಾ ಸಕ್ಕರೆಯು
ಜೇನು ಸವಿದಂತೆ ಸರ್ವಜ್ಞ

೨೫೧ ಸಜ್ಜನರು ಸಾಯಲೊಡೆ ನಿರ್ಜರರು ಮರುಗುವರು
ದೌರ್ಜನ್ಯಕಾರಿ ಸಾಯ್ವಲೊಡೆ ಹತ್ತಿರ್ದ
ಕಜ್ಜಿ ಹರಿದಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ನಿಂದನೇ ಪ್ರೋಕ್ತೇಽಪಿ ಬಂಧುಃ ಸ ಸಜ್ಜನಃ
ಸಂದತ್ತಮಪಿ ಸಹಸ್ರಂ ದುರ್ಜನೇನ ತೇ
ಬಂಧುತಾ ಮಾಸ್ತು ಸರ್ವಜ್ಞ ೨೪೫

ದೋಗ್ಧ್ರೀ ಪಶುವರ್ಗಕಂ ಮುಗ್ಧಶಿಶುರಪಿ ವರಂ
ಸ್ನಿಗ್ಧಸಜ್ಜನ ಯೋಷಿದ್ಅಪಿ ವರಂ ಜಿಹ್ವಾ ನಿ-
ರುದ್ಧಾನೃತಾಪಿ ಸರ್ವಜ್ಞ ೨೪೬

ಸಜ್ಜನ ಸುಸಂಗಸ್ತು ಸಜ್ಜಮಧು ಪಾತ್ರಮಿವ
ದುರ್ಜನಾನಾಂ ಸಂಗತಿಸ್ತು ಖಲಮಲಮಿಶ್ರ
ದುರ್ಜಲನಿಭಾ ಹಿ ಸರ್ವಜ್ಞ ೨೪೭

ವಕ್ರಫಲನಿವಹೇ ಸುವಕ್ರಮಿವ ಕದಲೀ ತು
ವಕ್ರಮಪಿ ರುಚಿರಂ ತದಸ್ತಿ ಸಜ್ಜನನಿವಹ-
ವಕ್ರತೇಷ್ಟಾ ಹಿ ಸರ್ವಜ್ಞ ೨೪೮

ಜ್ಞಾನಿಜನ ಸಂಗತಿರ್ ಘನಗುಡಾಸ್ವಾದ ಇವ
ಹೀನಮುಪಪನ್ನಮಿತಿ ಗದದ್ಅಜ್ಞ ಸಂಗತಿಃ
ಘನಶಿಲಾಹತಿಃ ಸರ್ವಜ್ಞ ೨೪೯

ಮಾನಹೀನೈಃ ಸಂಗಮನಮೇವ ಮಾ ಮಾಸ್ತು
ಮಾನಧನಸಂಗಮಃ ಮಧುಶರ್ಕರಾಮಿಶ್ರ-
ಪಾನಕನಿಭೋ ಹಿ ಸರ್ವಜ್ಞ ೨೫೦

ಸಜ್ಜನೇ ಮೃತಿಯುತೇ ನಿರ್ಜರಾಃ ಖಿದ್ಯಂತಿ
ದೌರ್ಜನ್ಯ ಕಾರಿಣಿ ಮೃತಿಂ ಗತೇ ತನುಲಗ್ನ-
ಖರ್ಜೂಮೃತಿರ್ಏವ ಸರ್ವಜ್ಞ ೨೫೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೫೨ ಉರಗನಾ ಹಲು ನಂಜು, ಸುರಗಿಯಾ ಮೊನೆ ನಂಜು
ಕರುಣವಿಲ್ಲದನ ನುಡಿ ನಂಜು ದುರ್ಜನರ
ಇರವೆಲ್ಲ ನಂಜು ಸರ್ವಜ್ಞ

೨೫೩ ಪ್ರತ್ಯಕ್ಷ ಉರಗನ ಮಸ್ತಕದ ಹಲು ನಂಜು
ಮತ್ತೆ ದುರ್ಜನರ ಕರ ಮುಖವು ಶಿರ ಪಾದ
ನಿತ್ಯವೂ ನಂಜು ಸರ್ವಜ್ಞ

೨೫೪ ನರಿ ನಾಯಿ ಹಲು ನಂಜು ಉರಗನ ಶಿರ ನಂಜು
ಬೆರಸಿ ತಪ್ಪುವನ ನುಡಿ ನಂಜು ದುರುಳರ
ಸರಸವೇ ನಂಜು ಸರ್ವಜ್ಞ

೨೫೫ ಗಂಧವನು ತೀವಲ್ಲಿ ಒಂದು ನೊಣವನು ಕಾಣೆ
ಸಂಧಿಸಿ ಮಲವ ಬಿಡುವಲ್ಲಿ ನೊಣ ಮುತ್ತು-
ವಂದವನು ನೋಡ ಸರ್ವಜ್ಞ

೨೫೬ ದಂತಪಂಕ್ತಿಯ ನಡುವೆ ಎಂತಿಪ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ ಸಜ್ಜನನು
ನಿಂತಿರ್ದ ನೋಡು ಸರ್ವಜ್ಞ

೨೫೭ ಒಳ್ಳಿದರ ಒಡನಾಡಿ ಕಳ್ಳನೊಳ್ಳಿದನಕ್ಕು
ಒಳ್ಳಿದ ಕಳ್ಳರೊಡನಾಡಿ ಅವ ಶುದ್ಧ
ಕಳ್ಳ ತಾನಕ್ಕು ಸರ್ವಜ್ಞ

೨೫೮ ಪಂಡಿತರ ಒಡನಾಡಿ ಭಂಡ ಪಂಡಿತನಕ್ಕು
ಪಂಡಿತನು ಭಂಡರೊಡನಾಡಿ ಅವ ಶುದ್ಧ
ಲಂಡ ತಾನಕ್ಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉರಗದಂತೇ ವಿಷಂ ಕ್ಷುರಿಕಾಗ್ರಮಪಿ ವಿಷಂ
ಕರುಣಪ್ರಹೀನಸ್ಯ ವಾಗ್ವಿಷಂ ದುರ್ಜನೇ
ಸರ್ವಂ ವಿಷಂ ಹಿ ಸರ್ವಜ್ಞ ೧೪೧

ಪ್ರತ್ಯಕ್ಷಮಿದಮುರಗೆ ಮಸ್ತಕೇ ಗರಲಮಿತಿ
ನಿತ್ಯಮಪಿ ದುಷ್ಟಜನ ಕರಶಿರೋಮುಖ ಪಾದ-
ಮಾತ್ರಗರಲಂ ಹಿ ಸರ್ವಜ್ಞ ೧೪೨

ಗರರದೌ ಶ್ವಾವೃಶೌ ಗರಲಮುರಗೇ ಶಿರಸಿ
ಗರಲಮಾಶ್ರುತ ಹಂತೃ ವಚನಮಪಿ ದುಷ್ಟಜನ-
ಸರಸೋ ಗರಂ ಹಿ ಸರ್ವಜ್ಞ ೧೪೩

ಗಂಧಘರ್ಷಕತಲಂ ಸಂಧಾವತಿ ತು ನೈವ
ಸಂಧಾಯ ಮಲವಿಸರ್ಜನ ಭುವಾಂ ಮಕ್ಷಿಕಾ-
ಸಂದೋಹಮಹಹ ಸರ್ವಜ್ಞ ೧೪೪

ದಂತಪಂಕ್ತ್ಯೋರ್ ಮಧ್ಯ ಸಂಸ್ಥಿತಾ ಜಿಹ್ವೇವ
ಸಂಸ್ಥಿತಃ ಸುಜನಸ್ತು ದುರ್ಜನೈಃ ಪರಿವೃತಃ
ತಂ ತಥಾಂಕಯತ ಸರ್ವಜ್ಞ ೧೪೫

ಶಿಷ್ಟಜನಸಂಗತೋ ದುಷ್ಟ ಇಷ್ಟೋ ಭವತಿ
ಶಿಷ್ಟಸ್ತು ದುಷ್ಟಜನ ಸಂಗತಃ ಸ್ವಯಮೇವ
ದುಷ್ಟಾಯತೇ ಹಿ ಸರ್ವಜ್ಞ ೧೪೬

ಪಂಡಿತೈಃ ಸಂಗತ್ಯ ಭಂಡೋಽಪಿ ಪಂಡಿತಃ
ಪಂಡಿತಃ ಸಂಗತ್ಯ ಭಂಡೈಃ ಸ್ವಯಂ ಭವತಿ
ಲಂಡಪಿಂಡಮಿವ ಸರ್ವಜ್ಞ ೧೪೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೫೯ ಬರಿ ಕಂಡು ಕರೆಯುದನ ಇರೆ ಕುಳ್ಳಿರೆನ್ನದನ
ಸರಸ ಸಜ್ಜನಿಕೆಯಿಲ್ಲದನ ಸಖತನವ
ಬೆರಸಲೀ ಬೇಡ ಸರ್ವಜ್ಞ

೨೬೦ ಏನನಾದರು ಕೊಟ್ಟು ಜ್ಞಾನಿಯ ಕೆಳೆ ಕೊಳ್ಳು
ಜ್ಞಾನಹೀನನಾ ಕೆಳೆಗೊಂಡು ಪಣವನ್ನು
ನೀನಿತ್ತು ಕಳುಹು ಸರ್ವಜ್ಞ

೨೬೧ ನೀಚರಾ ನೆರೆಯಿಂದ ಈಚಲದ ಮರ ಲೇಸು
ಈಚಲೊಂದೆಡೆಗೆ ಉಪಕಾರಿ ನೀಚನು
ಈಚಲಿಂ ಕಷ್ಟ ಸರ್ವಜ್ಞ

೨೬೨ ಮರುಳ ತಾ ಮಳೆಗಂಜಿ ಮರದಡಿಯ ಸಾರಿದರೆ
ಮರದ ಹನಿ ಬಿಡದು ಮಳೆ ನಿಂದು ಮರುಳರ
ನೆರೆಯು ಇಂತೆಂದ ಸರ್ವಜ್ಞ

## ೯. ವಿಧಿವಶಪದ್ಧತಿ

೨೬೩ ಹರಿ ಹಂದಿಯಾದಂದು ಹರನು ತಿರಿದುಂಡಂದು
ಹರನಜನ ಶಿರವ ಹರಿದಂದು ಲಿಖಿತವ
ಬರೆದವರು ಯಾರು ಸರ್ವಜ್ಞ

೨೬೪ ಪುಡಿಯಾದನಂಗಜನು ಹಿಡಿವಡೆದ ಹನುಮಂತ
ಪೊಡವಿಗೀಶ್ವರನು ತಿರಿದುಂಡರುಳಿದವರ
ಸಡಗರವದೇನು ಸರ್ವಜ್ಞ

೨೬೫ ಅಂಕದರ್ಜುನ ಹೇಡಿ ಶಂಕರನು ತಿರಿದುಂಡ
ಪಂಕಜನಾಭ ದನಗಾಯ್ದನುಳಿದವರ
ಬಿಂಕವೇನೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪುರತೋಽಪ್ಯನಾದೃತ್ಯ ಪರಿಚಿತಿಂ ಪರಿಭೂಯ
ಸರಸ ಸೌಜನ್ಯಾದಿ ಹೀನವಾಚರತಿ ಯಃ
ಪರಿಹರತ ತಮಿಹ ಸರ್ವಜ್ಞ ೨೫೯

ಕೇನಾಪಿ ದಾನೇನ ಜ್ಞಾನಿಸಖ್ಯಂ ರಚಯ
ಜ್ಞಾನಹೀನ ಸಖಂ ಚ ಸಂಪ್ರೇಷಯ ತ್ವಮಿಹ
ಪಣಸಹಿತಮಾಶು ಸರ್ವಜ್ಞ ೨೬೦

ನೀಚಪರಿಸರತಃ ಕಿಲೋಚಿತಸ್ ತಾಟಕಃ
ರಚಿತೋಪಕಾರಕಸ್ ತಾಟಕೋ ನೀಚಸ್ತು
ಖಚಿತಾಧವೋ ಹಿ ಸರ್ವಜ್ಞ ೨೬೧

ವೃಷ್ಟಿಭೀತೋಽಜ್ಞಸ್ತು ವಿಟಪಿತಲಮಾವಿಶ್ಯ
ವಿಟಪಿಜಲ ಬಿಂದುಸಂತತಿ ಹತೋ ಭವತೀವ
ದುಷ್ಟಸಂಗೋಽಪಿ ಸರ್ವಜ್ಞ ೨೬೨

## ೯. ವಿಧಿವಶ ಪದ್ಧತಿಃ

ಹರಿರಭೂತ್ ಸೂಕರೋ ಹರವರೋ ಭಿಕ್ಷುಕಃ
ತ್ವರಯಾ ಜಹಾರಾಜಶೀರ್ಷಂ ಹರೋ ವಿಧಿರ್-
ವಿರಚಿತಃ ಕೇನ ಸರ್ವಜ್ಞ ೨೬೩

ದಗ್ಧಭಸ್ಮಾಂಗಜೋ ಬದ್ಧಶ್ಚ ಮಾರುತಿಃ
ಸಿದ್ಧಲೋಕೇಶ್ವರೋ ಭಿಕ್ಷಾಕರೋ ಜಗತಿ
ಪ್ರೋದ್ಧತಃ ಕೋಽಸ್ತಿ ಸರ್ವಜ್ಞ ೨೬೪

ಕ್ಲೀಬೋಽರ್ಜುನೋ ರಣೇ ತ್ರ್ಯಂಬಕೋ ಭಿಕ್ಷುಕಃ
ಅಂಬುರುಹನಾಭೇಽಪಿ ಗೋಪಾಲಕೇಽನ್ಯೇಷು
ಡಂಬರಃ ಕೋ ನು ಸರ್ವಜ್ಞ ೨೬೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೬೬ ಹತ್ತು ತಲೆಗಳು ಅವಗೆ ಸುತ್ತಲೂ ವಾರಿಧಿಯು
ಮತ್ತೆ ತ್ರೈಕೂಟ ಗಿರಿದುರ್ಗ ರಾವಣನಿ-
ಗೆತ್ತಣದು ಕೇಡು ಸರ್ವಜ್ಞ

೨೬೭ ಕೇಡು ಬಹ ಕಾಲಕ್ಕೆ ಕೂಡುವವೆ ಬುದ್ಧಿಗಳು
ಕೋಡಗನು ಲಂಕೆ ಸುಡುವಾಗ ರಾವಣನು
ನಾಡ ಕಾದಿಹನೆ ಸರ್ವಜ್ಞ

೨೬೮ ಅಂತಿರ್ದರಿಂತಿರ್ದರೆಂತಿರ್ದರೆನಬೇಡ
ಕುಂತಿಯ ಸುತರು ತಿರಿದುಣಲು ಮಿಕ್ಕವರು
ಎಂತಿರ್ದಡೇನು ಸರ್ವಜ್ಞ

೨೬೯ ಹೆತ್ತಾತನರ್ಜುನನು ಮುತ್ತಯ್ಯ ದೇವೇಂದ್ರ
ಮತ್ತೆ ಮಾತುಲನು ಹರಿಯಿರಲಭಿಮನ್ಯು
ಸತ್ತನೇಕಯ್ಯ ಸರ್ವಜ್ಞ

೨೭೦ ಕೆಡಕು ಕೂಡುವುದೆಂದು ಅಡವಿಗೋಡಲು ಬೇಡ
ಕಡು ಭಯದಿ ಭಂಗಗೊಳಬೇಡ ವಿಧಿಯುರಿಯ-
ದಡವಿಯೊಂದುಂಟೆ ಸರ್ವಜ್ಞ

೨೭೧ ಹಿಂದೆ ಮಾಡಿದ ಕರ್ಮವೆಂದಿಗೂ ಬೆಂಬಿಡದು
ಬಂದ ಭೋಗವನು ತಿಂದು ತೀರಲೆಬೇಕು
ನೊಂದೆನೆನಬೇಡ ಸರ್ವಜ್ಞ

೨೭೨ ಆಡುವಾ ಮಕ್ಕಳಿಗೆ ಊಡುವಾ ತಾಯಂತೆ
ಮಾಡಿದ ಕರ್ಮ ಬಳಿವಿಡಿದು ಪಿಡಿತಂದು
ಊಡುತ್ತಲಿಹುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಶಶಿರಾಃ ಸೋಽಭವತ್ ದಿಶಿ ದಿಶಿ ಚ ವಾರಿಧಿಃ
ಶಾಸಕಸ್ ತ್ರೈಕೂಟೆ ದುರ್ಗಸ್ಯ ರಾವಣವಿ-
ನಾಶಸ್ತು ಕಿಂ ನು ಸರ್ವಜ್ಞ ೨೬೬

ಸುವಿನಾಶಕಾಲೇಽತಿ ಸುವಿಕಲಾ ಬುದ್ಧಿರ್ಅಪಿ
ಪ್ಲವಗೇ ಪ್ರದಹತಿ ತಾಂ ಲಂಕಾಂ ಸ ರಾವಣಃ
ಅವತಿ ಸ್ಮ ಕುತ್ರ ಸರ್ವಜ್ಞ ೨೬೭

ಇತ್ಥಂ ಬಭೂವ ಸಂತೃಪ್ತ ಇತಿ ಮಾ ನಿಗದ
ಕುಂತೀಸುತೇಷು ಭಿಕ್ಷಾಕರೇಷ್ವಿತರಜನ—
ಕಂಥಾ ತು ಕ್ವಾಽತ್ರ ಸರ್ವಜ್ಞ ೨೬೮

ಸ್ವಪಿತಾರ್ಜುನೋ ಮಹೇಂದ್ರಃ ಪಿತಾಮಹ ಏವ
ಅಪಿ ಮಾತುಲೇ ಹರೌ ಸತಿ ಸೋಽಭಿಮನ್ಯುರಪಿ
ಉಪರತಃ ಕಿಂ ನು ಸರ್ವಜ್ಞ ೨೬೯

ಕಠಿನತಾಪತತೀತಿ ಮಾಟವೀಂ ತ್ವಂ ಪ್ರವಿಶ
ಕಟು ಭಯಾತ್ ಪರಿಭಗ್ನತಾಸ್ತು ಮಾ ವಿಧಿವಿದೂ—
ರಾಟವೀ ಕುತ್ರ ಸರ್ವಜ್ಞ ೨೭೦

ಪ್ರಾರಬ್ಧ ಕರ್ಮಫಲಮಾರಾತ್ ತದನುಯಾತಿ
ನಿರತಮುಪಭೋಗ್ಯಂ ತದ್ಅಸ್ತಿ ತ್ವಯಾ ಕಿಮಿಹ
ಪರಿದೇವನಂ ತು ಸರ್ವಜ್ಞ ೨೭೧

ಕೇಲಿರತ ಶಿಶುಕಾನ್ ಸುಪಾಲಯಂತೀವ ಸೂಃ
ಕಾಲಪೂರ್ವಂ ಕೃತಂ ಕರ್ಮಾಪಿ ಸಂಗೃಹ್ಯ
ಲಾಲಯತಿ ಜಗತಿ ಸರ್ವಜ್ಞ ೨೭೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೭೩ ವಾರಣಾಸಿಯಲಿರಲಿ ವಾರಿಧಿಯ ನಡುವಿರಲಿ
ವೀರಭದ್ರನ ನೆರೆಯಿರಲಿ ವಿಧಿಯಾಟ
ತೋರದೆ ಬಿಡದು ಸರ್ವಜ್ಞ

೨೭೪ ಏನಾನು ನೆವದಿಂದ ತಾನೆ ಬಪ್ಪುದು ಸಿರಿಯು
ಕಾನನದಿ ಒಂದು ಕರಿ ಹುಟ್ಟಿ ಪಟ್ಟಕ್ಕೆ
ತಾನೆ ಬಂದಂತೆ ಸರ್ವಜ್ಞ

೨೭೫ ಇಂಗು ಕರ್ಪುರವಕ್ಕು ಬಿಂಗು ಬಜ್ಜರವಕ್ಕು
ಅಂಗಳದ ಶಿಲೆಯು ಹೊನ್ನಕ್ಕು ಕರ್ಮ ತಾ
ಹಿಂಗುವಾ ದಿನಕೆ ಸರ್ವಜ್ಞ

೨೭೬ ಮೂರಿಟ್ಟರಾರಕ್ಕು ಆರು ಹನ್ನೆರಡಕ್ಕು
ಹೇರುವ ಗೊಡ್ಡು ಹಯನಕ್ಕು ಕರ್ಮ ತಾ
ಹಾರುವಾ ದಿನಕೆ ಸರ್ವಜ್ಞ

೨೭೭ ಬಲ ಹೋದ ಕಾಲಕ್ಕೆ ನೆಲವೆದ್ದು ಬಡಿಯುವುದು
ಕುಲ ಚಲ ಕಲಹ ಸಿರಿಯು ಸಂಗ್ರಾಮಗಳು
ಬಲವಿರುವ ತನಕ ಸರ್ವಜ್ಞ

೨೭೮ ಎಂಟಿಟ್ಟರೆರಡಕ್ಕು ನೆಂಟರುರೆ ಹಗೆಯಕ್ಕು
ದಂಟುಗಳಿದ್ದು ಹಾವಕ್ಕು ಕರ್ಮ ತಾ-
ನಂಟುವ ದಿನಕೆ ಸರ್ವಜ್ಞ

೨೭೯ ಬಂದುದನೆ ತಾ ಹಾಸಿ ಬಂದುದನೆ ತಾ ಹೊದೆದು
ಬಂದುದನೆಲ್ಲ ನುಂಗಿದರೆ ವಿಧಿಕರ್ಮ
ನಂದಿ ಹೋಗುವುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಾರಣಾಸ್ಯಾಂ ಭವತು ವಾರಿಧೇರ್ ಹೃದಿ ಭವತು
ವೀರಭದ್ರಸ್ಯ ನಿಕಟೇಽಪ್ಯಸ್ತು ವಿಧಿಕ್ರಿಯಾ
ವಾರಿತಾ ನೈವ ಸರ್ವಜ್ಞ ೨೭೩

ಕೇನಾಪಿ ವ್ಯಾಜೇನ ಕಸತಿ ಸಾ ಶ್ರೀಃ ಸ್ವಯಂ
ಕಾನನೇ ಸಂಭೂಯ ಪೀನ ಹಸ್ತೇ ಪಟ್ವ-
ಮಾನ್ಯತಾಂ ಏತಿ ಸರ್ವಜ್ಞ ೨೭೪

ಕರ್ಪೂರ ಇವ ಹಿಂಗುರಭ್ರಕೋ ವಜ್ರ ಇವ
ತಪನೀಯಮಿವ ಶಿಲಾ ಪ್ರಾಂಗಣೇ ಯಾ ಕರ್ಮ
ಲೋಪಕಾಲೇ ಹಿ ಸರ್ವಜ್ಞ ೨೭೫

ತ್ರಿಕಮೇತಿ ಷಟ್‌ಸಮಂ ಷಟ್ಕಮಪಿ ದ್ವಾದಶಂ
ರಿಕ್ತ್ಯಾಽಪಿ ಗೌರ್‌ಅಮೃತದಾಯಿನೀ ಕರ್ಮಪರಿ-
ಪಾಕಹಾನೌ ಚ ಸರ್ವಜ್ಞ ೨೭೬

ಬಲಹೀನ ಕಾಲೇ ಚ ಖಲಮಿವ ಕರೋತಿ ಭೂಃ
ಕುಲಮಪಿ ಛಲಂ ಶ್ರೀಶ್ಚ ಕಲಹ ಸಂಗ್ರಾಮಾಶ್ಚ
ಬಲಮನುಸರಂತಿ ಸರ್ವಜ್ಞ ೨೭೭

ಅಷ್ಟೌ ದ್ವಿಕಂ ಭವತಿ ಸ್ವಿಷ್ಟಾಸ್ತು ವೈರಿಣಃ
ಕಾಷ್ಠಮಪಿ ಸರ್ಪಾಯತೇ ಯದಾ ದುಷ್ಕರ್ಮ-
ಶ್ಲಿಷ್ಟಸ್ತು ಭವತಿ ಸರ್ವಜ್ಞ ೨೭೮

ಪ್ರಾಪ್ತಮೇವಾಸ್ತೀರ್ಯ ಪ್ರಾಪ್ತಮೇವಾಚ್ಛಾದ್ಯ
ಪ್ರಾಪ್ತಂ ತದ್‌ಅನುಭವೇದ್ ಇಹ ತದಾ ವಿಧಿಕರ್ಮ-
ಲುಪ್ತಂ ಪ್ರಯಾತಿ ಸರ್ವಜ್ಞ ೨೭೯



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೮೦ ಅಂತಿಕ್ಕು ಇಂತಿಕ್ಕು ಎಂತಿಕ್ಕು ಎನಬೇಡ
ಚಿಂತಿಸಿ ದೇಹ ಬಡವಕ್ಕು ಶಿವನಿರಿಸಿ–
ದಂತಿಹುದೆ ಲೇಸು ಸರ್ವಜ್ಞ

೨೮೧ ಏನಾನು ನೆವದಲ್ಲಿ ತಾನೆ ಪೋಪುದು ಸಿರಿಯು
ಕಾನನದೊಳಗೆ ಕಿಡಿ ಹುಟ್ಟೆ ಕಾಡೆಲ್ಲ
ತಾನೆ ಬೆಂದಂತೆ ಸರ್ವಜ್ಞ

## ೧೦. ಮತಧರ್ಮ ಪದ್ಧತಿ

೨೮೨ ಓದು ವಾದಗಳಿಂದ ವೇದ ತಾ ಘನವಹುದೆ
ವೇದದಾ ಹೃದಯವರಿಯದಲೆ ದ್ವಿಜರೆಲ್ಲ
ಬೂದಿಯಾಗಿಹರು ಸರ್ವಜ್ಞ

೨೮೩ ಹಾದರದ ಕತೆಯನ್ನು ಸೋದರರ ವಧೆಯನ್ನು
ಆದರಿಸಿ ಪುಣ್ಯಕತೆಯೆಂದು ಕೇಳುವರು
ಮಾದಿಗರು ನೋಡು ಸರ್ವಜ್ಞ

೨೮೪ ನಿತ್ಯ ನೀರ್ಮುಳುಗುವನು ಹತ್ತಿದಡೆ ಸ್ವರ್ಗವನು
ಎತ್ತಿ ಜನ್ಮವನು ಜಲದೊಳಿಪ್ಪಾ ಕಪ್ಪೆ
ಹತ್ತದೇಕೆಂದ ಸರ್ವಜ್ಞ

೨೮೫ ನೀರ ಮುಳುಗಿದ ವಿಪ್ರ ಹಾರುವಡೆ ಸ್ವರ್ಗಕ್ಕೆ
ಹಾರುವನೊಲು ಮುಳುಗಿಪ್ಪ ಕಪ್ಪೆ ತಾ
ಹಾರದೇಕೆಂದ ಸರ್ವಜ್ಞ

೨೮೬ ಮಟ್ಟ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ
ನೆಟ್ಟನೆಯೆ ಸ್ವರ್ಗ ಪಡೆವಡೆ ಸಾಣೆಕಲ್
ಕೆಟ್ಟ ಕೇಡೇನು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಇತ್ಥಂ ಭವೇತ್ ಚ ಮಮ ವೃತ್ತಿರ್ಇತಿ ಮಾ ಪ್ರಲಪ
ಚಿಂತಯಾ ದೇಹಃ ಕೃಶೋ ಭವತಿ ಶಿವದತ್ತ-
ಸಂಸ್ಥಿತಿಸ್ತೇಽಸ್ತು ಸರ್ವಜ್ಞ ೨೮೦

ಕೇನಾಪಿ ವ್ಯಾಜೇನ ಲೀನತಾಂ ಏತಿ ಶ್ರೀಃ
ಕಾನನೇಽಗ್ನಿಕಣಸ್ತು ಕಥಮಪಿ ಚ ಸಂಭೂಯ
ವನಮೇವ ದಹತಿ ಸರ್ವಜ್ಞ ೨೮೧

## ೧೦. ಮತ-ಧರ್ಮ ಪದ್ಧತಿಃ

ವೇದಸ್ತು ಪಾಠೇನ ಪಾಠೇನ ನ ಹಿ ಘನಃ
ವೇದಸ್ಯ ಹೃದಯಮನಿಗಮ್ಯೈವ ತೇ ದ್ವಿಜಾ
ದಗ್ಧ ಭಸ್ಮೈವ ಸರ್ವಜ್ಞ ೨೮೨

ಜಾರಚರ್ಯಾಂ ಕಥಾಂ ವರ ಸಹೋದರ ವಧಂ
ಪರಮ ಪುಣ್ಯಾ ಕಥೇತ್ಯಾದೃತ್ಯ ಶೃಣ್ವಂತಿ
ಖರಮತಂಗಾಸ್ತು ಸರ್ವಜ್ಞ ೨೮೩

ನಿತ್ಯಜಲಮಜ್ಜಕಃ ಪ್ರೈತಿ ಚೇತ್ ಸ್ವರ್ಗಮಪಿ
ಏತ್ಯ ಜನ್ಮ ಚ ಜಲೇ ನಿವಸನ್ ಸ ಭೇಕಸ್ತು
ಪ್ರೈತಿ ನ ಹಿ ಕಿಂ ನು ಸರ್ವಜ್ಞ ೨೮೪

ನೀರೇ ನಿಮಜ್ಜನಾತ್ ಸ್ವರ್ಲೋಕಮೇತಿ ಯದಿ
ನಿರತಮಿವ ಜಲಚರೋ ಭೇಕಸ್ತು ವಿಪ್ರವತ್
ಸ್ವರ್ಗಗಃ ಕಿಂ ನ ಸರ್ವಜ್ಞ ೨೮೫

ಶ್ರೀಗಂಧ ಪಿಷ್ಟಸ್ಯ ಯೋಗೇನ ಮಸ್ತಕೇ
ಸುಗತಸ್ವರ್ಗಂ ಪ್ರೈತಿ ಚೇತ್ತು ಶಾಣಾಶ್ಮಾ ಚ
ಸ್ವರ್ಗಗಃ ಕಿಂ ನ ಸರ್ವಜ್ಞ ೨೮೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೮೭ ಸುಟ್ಟ ಬೂದಿಯು ತಂದು ದಟ್ಟವಾಗಿಯೆ ಬಡಿದು
ಶ್ರೇಷ್ಠ ಸ್ವರ್ಗವನು ಅಡರುವಡೆ ಕತ್ತೆ ತಾ
ಪಟ್ಟ ಕೇಡೇನು ಸರ್ವಜ್ಞ

೨೮೮ ಮೂರೆಳೆಸುನುಟ್ಟಾತ ಹಾರುವಡೆ ಸ್ವರ್ಗಕ್ಕೆ
ನೂರೆಂಟು ಎಳೆಯ ಕವುದಿಯನು ಹೊದ್ದಾತ
ಹಾರನೇಕಯ್ಯ ಸರ್ವಜ್ಞ

೨೮೯ ಹಿರಿದು ಪಾಪವ ಮಾಡಿ ಹರಿವ ನೀರೊಳು ಮುಳುಗೆ
ಕರಗುವುದೆ ಪಾಪ ತಾ ಮುನ್ನ ಮಾಡಿದ್ದು
ಎರೆಯ ಕಲ್ಲೆಂಟೆ ಸರ್ವಜ್ಞ

೨೯೦ ಮಿಂದು ಪೋಪರೆ ಪಾಪ ಮುಂದನಾ ಕೆಸಕಲ್ಲ
ಮಿಂದರೆ ಮೈಯ ಮಲ ಪೋಪುದಾ ಪಾಪ-
ವೆಂದಿನಂತಿಹುದು ಸರ್ವಜ್ಞ

೨೯೧ ಪಾಪ ಹೋಯಿತು ಎಂದು ಸೋಪಾನಗಳನೇರಿ
ಕೋಪ ಕರ್ಮಗಳ ಬಿಡದಿರೆ ಅದು ವಜ್ರ
ಲೇಪದಂತಿಹುದು ಸರ್ವಜ್ಞ

೨೯೨ ಕೊಂದು ಮಾಡುವ ಧರ್ಮದಂದವನು ಆನೊರೆವೆ
ಗಂಧದ ಮರನ ನೆರೆಸುಟ್ಟು ಇದ್ದಿಲನು
ತಂದು ಬಡಿದಂತೆ ಸರ್ವಜ್ಞ

೨೯೩ ಆವಾವ ಜೀವವನು ಹೇವವಿಲ್ಲದೆ ಕೊಂದು
ಸಾವಾಗ ಶಿವನ ನೆನೆದರೆ ಅವ ಬಂದು
ಕಾವನೆ ಹೇಳು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಗ್ಧ ಭಸ್ಮಾನೀಯ ಸ್ನಿಗ್ಧಮಾಲೇಪ್ಯ ನಿರ್–
ವಿಘ್ನಮೋಕ್ಷಃ ಶ್ರೇಷ್ಠ ಸ್ವರ್ಗಗಶ್ಚೇತ್ ಖರ–
ಸ್ಯಾಘಂ ತು ಕಿಮಿಹ ಸರ್ವಜ್ಞ ೨೮೭

ಸೂತ್ರ ತ್ರಿತಯ ಧರಶ್ಚೇತ್ ಸ್ವರ್ಗಮುತ್ ಪತತಿ
ಸೂತ್ರಶತ ಬಂಧಕೃತ ಕಂಥೋದ್ಧರಃ ಸ್ವರ್ಗ–
ಮುತ್ಪತತಿ ಕಿಂ ನ ಸರ್ವಜ್ಞ ೨೮೮

ಪಾಪಕರ್ಮಾಣಿ ಕೃತ್ವಾಪಗಾ ಮಜ್ಜನಾತ್
ಪಾಪಂ ದ್ರವಂ ಭವತಿ ಚೇತ್ ಪುರಾ ತ್ವತ್ಕೃತಂ
ನೀಪವ್ಯೃತ್ ಕಿಂ ನು ಸರ್ವಜ್ಞ ೨೮೯

ಸ್ನಾನೇನ ಹರ್ತುಮಥ ತನ್ನ ಘನಪಂಕಮಪಿ
ಸ್ನಾನೇನ ಪರಿಹೃತಂ ತನುಮಲಂ ಪಾಪಂ ತದ್–
ಅನಿರತಂ ಲಗತಿ ಸರ್ವಜ್ಞ ೨೯೦

ಪಾಪಂ ಗತಂ ಚೇತಿ ಸೋಪಾನಮಧಿರುಹ್ಯ
ಕೋಪಮಥ ಪಾಪಮಪಿ ನ ತ್ಯಜತಿ ಚೇದ್ ವಜ್ರ–
ಲೇಪಮಿವ ತದ್ಧಿ ಸರ್ವಜ್ಞ ೨೯೧

ವಧಮೂಲಕಂ ಧರ್ಮವಿಧಮಹಂ ವ್ಯಾಖ್ಯಾಮಿ
ಗಂಧತರುಮಾದಹ್ಯ ಚಾಂಗಾರ ಖಂಡಸ್ಯ
ಸಂಧಾನಮೇವ ಸರ್ವಜ್ಞ ೨೯೨

ಕರುಣಾಂ ವಿಹಾಯ ಸಂಹರಸಿ ಬಹು ಜೀವಿನಃ
ಮರಣಸಮಯೇ ಶಿವಂ ಸ್ಮರಸಿ ಚೇತ್ ಸೋಽಪಿ ತವ
ಶರಣಂ ಕಥಂ ತು ಸರ್ವಜ್ಞ ೨೯೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೨೯೪ ಕುಲವಿಲ್ಲ ಯೋಗಿಗೆ ಚಲವಿಲ್ಲ ಜ್ಞಾನಿಗೆ
ತೊಲೆಗಂಬವಿಲ್ಲ ಗಗನಕ್ಕೆ ಸ್ವರ್ಗದಲಿ
ಹೊಲಗೇರಿಯಿಲ್ಲ ಸರ್ವಜ್ಞ

೨೯೫ ಎಲುವಿಲ್ಲ ನಾಲಿಗೆಗೆ ಬಲವಿಲ್ಲ ಬಡವಂಗೆ
ತೊಲೆಗಂಬವಿಲ್ಲ ಗಗನಕ್ಕೆ ದೇವರಲಿ
ಕುಲಭೇದವಿಲ್ಲ ಸರ್ವಜ್ಞ

೨೯೬ ಸತ್ತ ಕತ್ತೆಯ ಹೊತ್ತರೆತ್ತಣದ ಹೊಲೆಯುನವ
ಉತ್ತಮನು ಎಂದು ಹೆರರೊಡವೆ ಹೊತ್ತವನೆ
ನಿತ್ಯವೂ ಹೊಲೆಯ ಸರ್ವಜ್ಞ

೨೯೭ ಸತ್ತುದನು ತಿಂಬಾತ ಎತ್ತಣದ ಹೊಲೆಯನು
ಒತ್ತಿ ಜೀವವನು ಕೊರೆಕೊರೆದು ತಿಂಬಾತ-
ನುತ್ತಮದ ಹೊಲೆಯ ಸರ್ವಜ್ಞ

೨೯೮ ಮುಟ್ಟಾದ ಹೊಲೆಯೊಳಗೆ ಹುಟ್ಟಿಹುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ ಹಾರುವನು
ಹುಟ್ಟಿದನು ಎಲ್ಲಿ ಸರ್ವಜ್ಞ

೨೯೯ ಮುಟ್ಟುಗಂಡವಳನ್ನು ಮುಟ್ಟಲೊಲ್ಲರು ನೋಡ
ಮುಟ್ಟು ತಾ ತಡೆದು ಹುಟ್ಟಿದ ದೇಹವನು
ಮುಟ್ಟುವರೇಕೆ ಸರ್ವಜ್ಞ

೩೦೦ ಉತ್ತಮರು ಪಾಲ್ಗಡಲೊಳೆತ್ತಿಹರೆ ಜನ್ಮವನು
ಉತ್ತಮರು ಅಧಮರೆನಬೇಡ ಹೊಲೆಯಿಲ್ಲ-
ದುತ್ತಮರು ಎಲ್ಲಿ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕುಲಮಪಿ ನ ಯೋಗಿನೇ ಛಲಮಪಿ ಜ್ಞಾನಿನೇ
ತೋಲಯಷ್ವಿಶ್ಚ ಗಗನಾಯ ನ ಸ್ವರ್ಗೇ ತು
ಮಲಿನಭೂರ್ ನೈವ ಸರ್ವಜ್ಞ ೨೯೪

ನಾಸ್ಥೀನಿ ಜಿಹ್ವಾಸು ನ ಸ್ಥಿತಿರ್ ದೀನಾಯ
ನ ಸ್ತಂಭ ಪುಷ್ಪೈರಪಿ ಗಗನಾಯ ದೈವದೃಶಿ
ನಾಸ್ತಿ ಕುಲನಾಮ ಸರ್ವಜ್ಞ ೨೯೫

ಮೃತ ಗಾರ್ದಭೇ ಹೃತೇ ಕುತ್ರ ಶ್ವಪಾಚಕಃ
ಉತ್ತಮೋಽಹಂ ಚೇತಿ ಪರವಸ್ತು ಹಾರಕಃ
ನಿತ್ಯ ಶ್ವಪಚೋಽಸ್ತಿ ಸರ್ವಜ್ಞ ೨೯೬

ಮೃತಜೀವಿ ಭಕ್ಷಕಃ ಕುತ್ರತಃ ಶ್ವಪಚೋಽಸ್ತಿ
ಕರ್ತಯಿತ್ವಾ ಶನೈರ್ ಜೀವಿನಂ ಭಕ್ಷಕಃ
ಪ್ರಥಿತಶ್ವಪಚಃ ಸರ್ವಜ್ಞ ೨೯೭

ರಾಜಸ್ವಲೇ ಮಲೇ ಹ್ಯಜನಿಷ್ಟ ಜಗದ್ಏವ
ತ್ಯಜತ ಸಂಗಂ ತಸ್ಯ ಚೇತಿ ವಿಪ್ರೋ ದ್ರವನ್
ಅಜನಿಷ್ಟ ಕುತ್ರ ಸರ್ವಜ್ಞ ೨೯೮

ರಾಜಸ್ವಲಾಂ ಸ್ತ್ರಿಯಂ ತ್ಯಜತಿ ದೂರೇ ಜಗತ್
ರಜಸಿ ಬದ್ಧೇ ತತ್ರ ಸಂಜಾತ ದೇಹಮಪಿ
ನ ಜಹಾತಿ ಕಿಂ ನು ಸರ್ವಜ್ಞ ೨೯೯

ಉತ್ತಮಾಃ ಕ್ಷೀರಧೇರ್ ಉತ್ಥಿತಾಃ ಕಿಮಿಹ ತೇ
ಉತ್ತಮಾಶ್ಚಾಧಮಾಶ್ಚೇತಿ ಮಾ ನಿಗದ ಮಲ-
ಮುಕ್ತಾಸ್ತಿ ಕುತ್ರ ಸರ್ವಜ್ಞ ೩೦೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೦೧ ಎಲು ತೊಗಲು ನರ ಮಾಂಸ ಬಲಿದ ಚರ್ಮದ ಹೊದಿಕೆ
ಹೊಲೆ ರಕ್ತ ಶುಕ್ಲದಿಂದಾದ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ

೩೦೨ ಹಸಿವು ತೃಷೆ ನಿದ್ರೆಗಳು ವಿಷಯ ಮೈಥುನ ಬಯಕೆ
ಪಶು ಪಕ್ಷಿ ನರರಿಗೆ ಸಮನಿರಲು ಕುಲವೆಂಬ
ಘಸಣಿ ಎತ್ತಣದು ಸರ್ವಜ್ಞ

೩೦೩ ಎಲುವಿನೀ ಕಾಯಕ್ಕೆ ಸಲೆ ಚರ್ಮದಾ ಹೊದಿಕೆ
ಮಲ ಮೂತ್ರ ಕ್ರಿಮಿಗಳೊಳಗಿರ್ದ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ

೩೦೪ ಕನ್ನೆಯಾಡನು ತಂದು ಬನ್ನ ಬಡಿಸುತ ಕೊಂದು
ಉನ್ನತವ ಪಡೆವ ವಿಪ್ರನಿಂ ಅಗಸರ
ಕುನ್ನಿ ಲೇಸೆಂದ ಸರ್ವಜ್ಞ

೩೦೫ ಒಂದಾಡ ತಿಂಬಾತ ಹೊಂದಿದಡೆ ಸ್ವರ್ಗವನು
ಎಂದೆಂದು ಆಡನು ಕಡಿತಿಂಬ ಕಟುಕ ತಾ-
ನಿಂದ್ರನೇಕಾಗ ಸರ್ವಜ್ಞ

೩೦೬ ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ

೩೦೭ ಅವಯವಗಳೆಲ್ಲರಿಗೆ ಸಮನಾಗಿ ಇರುತಿರಲು
ಭವಿ ಭಕ್ತ ಶ್ವಪಚ ಶೂದ್ರರಿವರಿಂತೆಂಬ
ಕವನವೆತ್ತಣದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತ್ವಕ್ ಚಾಸ್ಥಿ ನರ ಮಾಂಸ ಪಕ್ವ ಚಾರ್ಮಾಂಬರೈಃ
ರಕ್ತ ಮಲ ಶುಕ್ಲಾದಿಭಿರ್ ಯುಕ್ತ ದೇಹಸ್ಯ
ಕಿಂ ಕುಲಂ ಬ್ರೂತ ಸರ್ವಜ್ಞ ೩೦೧

ಕ್ಷುತ್ ತೃಷಾ ನಿದ್ರಾ ಚ ಮೈಥುನಾಶಾದಯಃ
ಭೂತೇಷು ನೃಷು ಸಮಂ ವಿದ್ಯಮಾನೇಷು ಕುಲ-
ಖಿತಿರ್‌ಅತ್ರ ಕಿಂ ನು ಸರ್ವಜ್ಞ ೩೦೨

ಕಾಯೋಽಸ್ಥಿ ಸಂಕುಲೋ ನಾರ್ಯೇಶ್ಚ ಚರ್ಮಣಾ
ಭೂಯೋಽಪಿ ಮಲ ಮೂತ್ರ ಕೃಮಿ ವಸತಿರ್‌ಅಥ ಕಥಂ
ತಸ್ಯ ಕುಲಮಸ್ತಿ ಸರ್ವಜ್ಞ ೩೦೩

ಕನ್ಯಕಾಜಾಂ ಮುಖೇ ಚಾನ್ಯಾಯ್ಯಮಾಹತ್ಯ
ಔನ್ನತ್ಯಮಾಪ್ನುಯಾತ್ ವಿಪ್ರಸ್ತತೋ ರಜಕ-
ಶುನಕೋ ವರಂ ಹಿ ಸರ್ವಜ್ಞ ೩೦೪

ಅಜಮೇಕಮಾಭುಜ್ಯ ವ್ರಜತಿ ಸ್ವರ್ಗಂ ಯದಿ
ಅಜಕುಲಮಜಸ್ರಮಪಿ ಭುಂಜನ್ ಸ ವಧಕೋ ಬಿ-
ಡೌಜಾ ನ ಕಿಂ ನು ಸರ್ವಜ್ಞ ೩೦೫

ಚರಿತುಮೇಕೈವ ಭೂರ್ ವಾರ್ಯೇಕ ಪಾನಮಿಹ
ಪರಿದಾಹಕೋಽಗ್ನಿರೇಕಶ್ಚಾತ್ರ ಕುಲಗೋತ್ರ-
ಕರಣಮಪಿ ಕುತ್ರ ಸರ್ವಜ್ಞ ೩೦೬

ಅನಯಮೇ ಸರ್ವೇಷು ಭವತಿ ಕಾಯೇ ಸಮಂ
ಭವಿ ಭಕ್ತ ಶ್ವಪಚ ಶೂದ್ರಾದಿರಿತಿ ತತ್ರ ನವ
ಕವನಂ ಕುತೋ ನು ಸರ್ವಜ್ಞ ೩೦೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೦೮ ಜಾತಿಹೀನರ ಮನೆಯು ಜ್ಯೋತಿ ತಾ ಹೀನವೆ
ಜಾತಿ ವಿಜಾತಿ ಎನಬೇಡ ದೇವನೊಲಿ-
ದಾತನೇ ಜಾತ ಸರ್ವಜ್ಞ

೩೦೯ ಯಾತರದ ಹೂವೇನು ನಾತರದು ಸಾಲದೇ
ಜಾತಿ ವಿಜಾತಿಯೆನಬೇಡ ದೇವನೊಲಿ-
ದಾತನೇ ಜಾತ ಸರ್ವಜ್ಞ

೩೧೦ ಉತ್ತಮರು ಎಂಬವರು ಸತ್ಯದಲಿ ನಡೆದಿಹರು
ಉತ್ತಮರಧಮರೆನಬೇಡ ಅವರೊಂದು
ಮುತ್ತಿನಂತಿಹರು ಸರ್ವಜ್ಞ

೩೧೧ ಮಾತನರಿದಾ ಸುತನು ನೀತಿಯರಿದಾ ಸತಿಯು
ನೀತಿಯನು ಅರಿದ ವಿಪ್ರ ತಾ ಜಗದೊಳಗೆ
ಜ್ಯೋತಿಯಿದ್ದಂತೆ ಸರ್ವಜ್ಞ

೩೧೨ ಉತ್ತಮದ ವರ್ಣಗಳನುತ್ತಮರೆನಬೇಡ
ಮತ್ತೆ ತನ್ನಂತೆ ಬಗೆವರನೆಲ್ಲರ-
ನುತ್ತಮರೆನ್ನು ಸರ್ವಜ್ಞ

೩೧೩ ಜ್ಯೋತಿಯಿಲ್ಲದ ಮನೆಯು ರೀತಿಯಿಲ್ಲದ ಸತಿಯು
ನೀತಿಯಿಲ್ಲದಾ ವಿಪ್ರನು ಭಿಕ್ಷದ
ಪಾತ್ರೆಯೊಡೆದಂತೆ ಸರ್ವಜ್ಞ

೩೧೪ ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವೆನು
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಜಾತಿಹೀನೇ ಗೃಹೇ ಜ್ಯೋತಿರ್ ಅಧಮಂ ಚ ಕಿಮು
ಜಾತಿರ್ವಿಜಾತಿರಿತಿ ಮಾ ಬ್ರೂಹಿ ದೈವ ಸು-
ಪ್ರೀತಸ್ತು ಜಯತಿ ಸರ್ವಜ್ಞ ೩೦೮

ಕತಮಮಪಿ ಸುಮಮಸ್ತು ಹಿತಮಸ್ತಿ ಚೇದ್ ಅಲಂ
ಜಾತಿರ್ ವಿಜಾತಿರಿತಿ ಮಾ ಬ್ರೂಹಿ ದೈವಸು-
ಪ್ರೀತಸ್ತು ಜಯತಿ ಸರ್ವಜ್ಞ ೩೦೯

ಉತ್ತಮಾ ಯೇ ತು ತೇ ಸತ್ಯಮಾರ್ಗಂ ಚರಾಃ
ಉತ್ತಮಾನ್ ನೈಮಾಧಮಾನ್ ನಿಗದ ತೇ ಜಗತಿ
ಮೌಕ್ತಿಕನಿಭಾ ಹಿ ಸರ್ವಜ್ಞ ೩೧೦

ಉಕ್ತಿವಿದುರಸ್ಸತಃ ರೀತಿವಿದುರಾ ಸತೀ
ನೀತಿವಿದುರಶ್ಚ ವಿಪ್ರೋಽಪಿ ಜಗತೀಹ ಶೃಣು
ಜ್ಯೋತಿಕಲ್ಪೋ ಹಿ ಸರ್ವಜ್ಞ ೩೧೧

ಉತ್ತಮಾನ್ ವರ್ಣೇಷು ಮೋತ್ತಮಾನ್ ನಿಗದ ತಾನ್
ಆತ್ಮಸಮಮನ್ಯಾನ್ಶ್ಚ ಪಶ್ಯಂತಿ ಯೇ ತು ತಾನ್
ಉತ್ತಮಾನ್ ನಿಗದ ಸರ್ವಜ್ಞ ೩೧೨

ಜ್ಯೋತಿಹೀನಂ ಗೃಹಂ ರೀತಿದೂರಾ ಸತೀ
ನೀತಿ ಹೀನಶ್ಚ ವಿಪ್ರೋಽಪಿ ನೂನಂ ಭೈಕ್ಷ-
ಪಾತ್ರಭೇದ ಇವ ಸರ್ವಜ್ಞ ೩೧೩

ಹಿಂಸಕಂ ಧರ್ಮಮಹಮಸ್ಯಾಮಿ ದಾಹಕೇ
ಹಿಂಸಾತ್ರ ಮಾ ಮಾಸ್ತು ಚೇತಿ ನಿಗದತ್ ಜೈಸ-
ಮತಮಸ್ತು ಶಿರಸಿ ಸರ್ವಜ್ಞ ೩೧೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೧೫ ಕೊಲ್ಲದಿಪ್ಪಾ ಧರ್ಮವೆಲ್ಲರಿಗೆ ಸಮ್ಮತವು
ಅಲ್ಲದನು ಮೀರಿ ಕೊಲುವನು ನರಕಕ್ಕೆ
ನಿಲ್ಲದೇ ಹೋಹ ಸರ್ವಜ್ಞ

೩೧೬ ಜೀವಿ ಜೀವಿಯ ತಿಂದು ಜೀವಿಪುದು ಜಗವೆಲ್ಲ
ಜೀವದಿಂ ಹೊರಗೆ ತಿಂಬರ ನಾ ಕಾಣೆ
ಜೀವವೀ ಜಗವು ಸರ್ವಜ್ಞ

## ೧೧. ಮೂರ್ಖ ಪದ್ಧತಿ

೩೧೭ ಮೂರ್ಖಂಗೆ ಬುದ್ಧಿಯನು ನೂರ್ಕಾಲ ಪೇಳಿದರೆ
ಗೋರ್ಕಲ್ಲ ಮೇಲೆ ಮಳೆಗರೆದರಾ ಕಲ್ಲು
ನೀರ್ಕೊಂಬುದೇನು ಸರ್ವಜ್ಞ

೩೧೮ ಆರು ಬೆಟ್ಟವನೊಬ್ಬ ಹಾರಬಹುದೆಂದಿಹರೆ
ಹಾರಬಹುದೆಂದು ಎನಬೇಕು ಮೂರ್ಖನೊಡ
ಹೋರಟೆಯೆ ಸಲ್ಲ ಸರ್ವಜ್ಞ

೩೧೯ ಮೊಲ ನಾಯ ಬೆನ್ನಟ್ಟಿ ಗೆಲಬಹುದು ಎಂದಿಹರೆ
ಗೆಲಬಹುದೆಂದು ಎನಬೇಕು ಮೂರ್ಖನಲಿ
ಕಲಹ ಬೇಡೆಂದ ಸರ್ವಜ್ಞ

೩೨೦ ನೆಲವನ್ನು ಮುಗಿಲನ್ನು ಹೊಲಿವರುಂಟೆಂದರವ
ಹೊಲಿವರು ಹೊಲಿವರೆನಬೇಕು ಮೂರ್ಖನಲಿ
ಕಲಹ ಬೇಡೆಂದ ಸರ್ವಜ್ಞ

೩೨೧ ಬೆಟ್ಟವನು ಕೊಂಡೊಬ್ಬನಿಟ್ಟಿಹನು ಎಂದರೆ
ಇಟ್ಟಿಹನೆಂದು ಎನಬೇಕು ಮೂರ್ಖನ
ಬಟ್ಟೆ ಬೇಡೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಧನಿರುದ್ಧೋ ಧರ್ಮವಿಧಿರಿಹ ಸುಸಂಮತಃ
ವಿಧಿಯಿಮಮತಿಕ್ರಮ್ಯ ವಧಕಸ್ತು ಶೃಣು ನರಕ-
ಮಧಿವಸತ್ಯಾಶು ಸರ್ವಜ್ಞ ೩೧೫

ಜೀವಿನೋ ಜೀವಂತಿ ಜೀವಾದಕಾ ಜಗತಿ
ಜೀವಂ ವಿಹಾಯಾನ್ಯ ಖಾದ್ಯಂ ನ ವೇದ್ಮಿ ಭೋ
ಜೀವೀ ಜಗದ್ಧಿ ಸರ್ವಜ್ಞ ೩೧೬

## ೧೧. ಮೂರ್ಖ ಪದ್ಧತಿಃ

ಮೂರ್ಖೋ ನ ಬೋಧ್ಯಃ ಕಿಲಾರ್ಕೋಸ್ತಿ ಯಾವದಪಿ
ಕರ್ಕರಾಶ್ಮಾ ಸುವೃಷ್ಟ್ಯಾ ಹತೋ ನೀರಸಂ-
ಪರ್ಕಂ ನ ಭಜತಿ ಸರ್ವಜ್ಞ ೩೧೭

ಶೈಲಷಟ್ಕಂ ಜವೇನೋಲ್ಲಂಘಯಿತುಮಲಂ
ಲಲಿತಮಿತಿ ವದತಿ ಮೂರ್ಖೇ ತಥ್ಯಮಿತಿ ವದತ
ಕಲಹಸ್ತು ನೈವ ಸರ್ವಜ್ಞ ೩೧೮

ಶಶಕೋಽನುಧಾವ್ಯ ಶುನಕಂ ಶನೈರ್ ಗಿಲತೀತಿ
ಭಷತಿ ಯದಿ ಮೂರ್ಖಸ್ತಥೇತಿ ವದ ತೇನ ಸಹ
ಕಷಣಮಪಿ ಮಾಸ್ತು ಸರ್ವಜ್ಞ ೩೧೯

ಮೇಘಂ ಚ ಪೃಥಿವೀಂ ಚ ಸಂಘಟ್ಟಯಿತುಮಲಂ
ಸುಘನಮಿತಿ ವದತಿ ಚೇತ್ ಮೂರ್ಖೇ ತು ಸುಕರಮಿತಿ
ಶ್ಲಾಘ್ಯಮಿತಿ ವದತ ಸರ್ವಜ್ಞ ೩೨೦

ಶೈಲ ಏಕೇನೈವ ಚಲಿತ ಇತಿ ವದತಿ ಚೇತ್
ಲುಲಿತ ಇತಿ ಸಂವದೇತ್ ಮಾ ಮಾಸ್ತು ಮೂರ್ಖಜನ
ಖಲನಂ ಕದಾಪಿ ಸರ್ವಜ್ಞ ೩೨೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೩೨೨ ಹೊಳೆಯು ನೀರೊಬ್ಬನೆ ಅಳೆಯುಬಹುದೆಂದರವ
ಅಳೆಯುಬಹುದೆಂದು ಎನಬೇಕು ಮೂರ್ಖನ
ಕಳೆಯುಲಳವಲ್ಲ ಸರ್ವಜ್ಞ

೩೨೩ ಒಂದನ್ನು ಎರಡೆಂಬ ಹಂದಿ ಹೆಬ್ಬುಲಿಯೆಂಬ
ನಿಂದ ದೇಗುಲವು ಮರನೆಂಬ ಮೂರ್ಖ ತಾ-
ನೆಂದಂತೆ ಎನ್ನಿ ಸರ್ವಜ್ಞ

## ೧೨. ಔಚಿತ್ಯ ಪದ್ಧತಿ

೩೨೪ ಹಂಗಿನ ಹಾಲಿನಿಂದಂಬಲಿಯು ತಿಳಿ ಲೇಸು
ಭಂಗ ಬಟ್ಟುಂಬ ಬಿಸಿಯಿಂದ ತಿರಿವರ
ಸಂಗವೇ ಲೇಸು ಸರ್ವಜ್ಞ

೩೨೫ ಜಾಜಿಯು ಹೂ ಲೇಸು ತೇಜಿ ವಾಹನ ಲೇಸು
ರಾಜಮಂದಿರದೊಳಿರ ಲೇಸು ತಪ್ಪುಗಳ
ಮಾಜುವುದೆ ಲೇಸು ಸರ್ವಜ್ಞ

೩೨೬ ಉದ್ದಿನ ಒಡೆ ಲೇಸು ಬುದ್ಧಿಯ ನುಡಿ ಲೇಸು
ಬಿದ್ದೊಡವೆ ಕಯ್ಗೆ ಬರೆ ಲೇಸು ಶಿಶುವಿಗೆ
ಮುದ್ದಾಟ ಲೇಸು ಸರ್ವಜ್ಞ

೩೨೭ ಹಂಗಿನರಮನೆಯಿಂದ ವಿಂಗಡದ ಗುಡಿ ಲೇಸು
ಭಂಗಬಟ್ಟುಂಬ ಬಿಸಿಯನ್ನಕಿಂತಲು
ತಂಗುಳವೆ ಲೇಸು ಸರ್ವಜ್ಞ

೩೨೮ ಹುತ್ತ ಹಾವಿಗೆ ಲೇಸು ಮುತ್ತು ಕೊರಳಿಗೆ ಲೇಸು
ಕತ್ತೆಗೆ ಹೇರು ಕರಲೇಸು ತುಪ್ಪದಾ
ತುತ್ತು ಲೇಸೆಂದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾತುಮುಲಮೇಕಃ ಸರಿತಿ ನೀರಮಿತಿ ವದತಿ
ಮಾತುಮುಲಮಿತಿ ವದತ ಲೀಲಯಾ ಮೂರ್ಖಂ ಕ-
ದರ್ಥಯತ ಮೈವ ಸರ್ವಜ್ಞ ೩೨೨

ಏಕಮಪಿ ದ್ವಿಕಮಿತಿ ಚ ಸೂಕರೋ ವ್ಯಾಘ್ರ ಇತಿ
ಶಾಖೀತಿ ದೇವಕುಲಮಪಿ ವದತಿ ಮೂರ್ಖೇ ತು
ಸುಕಥೇತಿ ವದತ ಸರ್ವಜ್ಞ ೩೨೩

೧೨. ಔಚಿತ್ಯ ಪದ್ಧತಿಃ

ದಾಕ್ಷಿಣ್ಯ ದುಗ್ಧಾತ್ ಸುಭಕ್ಷಣಂ ಮಂಡಮಿಹ
ದುಃಖೇನ ಭಕ್ಷಿತಾದ್ ಉಷ್ಣಭಕ್ಷ್ಯಾದ್ ವರಂ
ಭಿಕ್ಷುಕಾನ್ನಂ ಹಿ ಸರ್ವಜ್ಞ ೩೨೪

ಜಾತಿಕುಸುಮಂ ವರಂ ದ್ರುತ ವಾಹನಂ ವರಂ
ಕ್ಷಿತಿಪಮಂದಿರ ವಸತಿರ್ಅಪಿ ವರಂ ಸ್ಖಲಿತಸ್ಯ
ಕ್ಷಾಂತಿರ್ ವರಂ ಹಿ ಸರ್ವಜ್ಞ ೩೨೫

ಮಾಷವಡಿಕಾ* ವರಂ ಧಿಷಣ ವಚನಂ ವರಂ
ನಷ್ಟ ವಸು ಪ್ರಾಪ್ತಿಃ ಪುನರ್ ವರಂ ಶಿಶುಕಾಯ
ಶ್ಲೇಷೋ ವರಂ ಹಿ ಸರ್ವಜ್ಞ ೩೨೬

ಪರಿಭವಾತ್ ಸೌಧತೋ ದೂರೇ ಕುಟೀ ವರಂ
ತಿರಸ್ಕೃತಾದ್ ಉಷ್ಣಭಕ್ಷ್ಯಾದ್ ವರಂ ಜಗತಿ
ಪರ್ಯುಷಿತಮೇವ ಸರ್ವಜ್ಞ ೩೨೭

ನಾಕುರಪಿ ಸಪರ್ಯಾಯ ಮೌಕ್ತಿಕಂ ಕಂಠೇ ಚ
ಸುಖಕರಂ ಭಾರೋಽಪಿ ಖರವಹಃ ಕವಲಂ ಘೃ-
ತಾಕ್ತಂ ವರಂ ಹಿ ಸರ್ವಜ್ಞ ೩೨೮

---

* ವಡಿಕಾ = ವಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೨೯ ಹಸಿದರಂಬಲಿ ಲೇಸು ಬಿಸಿಲಿಂಗೆ ಕೊಡೆ ಲೇಸು
ಬಸುರಿನ ಸೊಸೆಯುು ಇರೆ ಲೇಸು ಸಭೆಗೊಬ್ಬ
ರಸಿಕ ಲೇಸೆಂದ ಸರ್ವಜ್ಞ

೩೩೦ ಜಾಣೆಯು ನುಡಿಲೇಸು ವೀಣೆಯು ಸ್ವರ ಲೇಸು
ಮಾಣದಲೆ ವದನ ಶುಚಿ ಲೇಸು ಕೂರ್ಪವರ
ಕಾಣುವುದೆ ಲೇಸು ಸರ್ವಜ್ಞ

೩೩೧ ಜ್ಞಾನಿಗೆ ಗುಣ ಲೇಸು ಮಾನಿನಿಗೆ ಪತಿ ಲೇಸು
ಸ್ವಾನುಭಾವಿಗಳ ನುಡಿ ಲೇಸು ಎಲ್ಲಕು ನಿ-
ಧಾನಿಯೆ ಲೇಸು ಸರ್ವಜ್ಞ

೩೩೨ ವನಕೆ ಕೋಗಿಲೆ ಲೇಸು ಮನಕೆ ಹರುಷವು ಲೇಸು
ಕನಕವುಳ್ಳವನ ಕೆಳೆ ಲೇಸು ವಿದ್ಯಕ್ಕೆ
ವಿನಯು ಲೇಸೆಂದ ಸರ್ವಜ್ಞ

೩೩೩ ಜನಕೆ ರಂಜನೆ ಲೇಸು ವನಕೆ ಪುಷ್ಪವು ಲೇಸು
ಧನಕಿಂತ ಬುದ್ಧಿ ನೆರೆ ಲೇಸು ಬುದ್ಧಿಯಿಂ
ಅನುಭಾವ ಲೇಸು ಸರ್ವಜ್ಞ

೩೩೪ ಹಾಲುಬೋನವು ಲೇಸು ಮಾಲೆ ಕೊರಳಿಗೆ ಲೇಸು
ಸಾಲವಿಲ್ಲದ ಮನೆ ಲೇಸು ಬಾಲಕರ
ಲೀಲೆ ಲೇಸೆಂದ ಸರ್ವಜ್ಞ

೩೩೫ ಭೂಪತಿಗೆ ದಳ ಲೇಸು ಆಪತ್ತಿಗ್ಗುಣ ಲೇಸು
ಕೋಪವನು ಕಳೆದ ಸತಿ ಲೇಸು ಶಿಶುವಿಗೆ
ಜೋಪಾನ ಲೇಸು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತೃಷಿತಸ್ಯ ಮಂಡಮುಪ್ರ್ಯಾಷ್ಮ್ರೇ ಚ ಛತ್ರಿಕಾ
ಶಿಶುಸೂಃ ಸ್ನುಷಾ ವರಂ ಕುಲವರ್ಧನೀ ಸದಸಿ
ರಸಿಕೋ ವರಂ ಹಿ ಸರ್ವಜ್ಞ ೩೨೯

ಜ್ಞಾನಿವನಿತಾವಾಕ್ ಚ ವೀಣಾ ಸ್ವರೋ ವರಂ
ಅನಿರತಂ ವದನಶೌಚಂ ವರಂ ಸುಜನ ದರ್-
ಶನಮಪಿ ವರಂ ಹಿ ಸರ್ವಜ್ಞ ೩೩೦

ಜ್ಞಾನಿನಿ ಗುಣಾ ವರಂ ಮಾನಿನೀಷು ಚ ಪತಿಃ
ಸ್ವಾನುಭಾವೀ ವಚನಮಪಿ ವರಂ ಸರ್ವಾವ-
ಧಾನೀ ವರಂ ಹಿ ಸರ್ವಜ್ಞ ೩೩೧

ವನಭುವಿ ಪಿಕೋ ವರಂ ಮನಸಿ ಹರ್ಷೋ ವರಂ
ಕನಕಾಢ್ಯ ಸಂಗತಿರ್ ಬಹುವರಂ ವಿದ್ವತ್ಸು
ವಿನಯೋ ವರಂ ಹಿ ಸರ್ವಜ್ಞ ೩೩೨

ಮನುಜಾಯ ರಂಜನಂ ವನಭುವಿ ಸುಮಂ ವರಂ
ಧನತೋಽಪಿ ಬುದ್ಧಿರ್ ಅತಿಶಯವರಂ ಬುದ್ಧಿತೋಽ-
ಪ್ಯನುಭಾವ ಏವ ಸರ್ವಜ್ಞ ೩೩೩

ಅಮೃತಾನ್ನಮಿಹ ವರಂ ದಾಮ ಕಂಠೇ ವರಂ
ಸಂಮತಮಿಹಾನೃಣ್ಯ ವೇಶ್ಮ ಶಿಶು ಲೀಲಾಪಿ
ಸಂಮತವರಂ ಹಿ ಸರ್ವಜ್ಞ ೩೩೪

ಭೂಪತಿಭ್ಯೋ ಬಲಂ ಚಾಪದಿ ಧನಂ ವರಂ
ಕೋಪದೂರಾ ಸತೀ ಸಾ ವರಂ ಶಿಶುಕಾಯ
ಸುಪರಿರಕ್ಷಾಪಿ ಸರ್ವಜ್ಞ ೩೩೫

7

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



## ೧೩. ಸಾಮಾನ್ಯ ನೀತಿ ಪದ್ಧತಿ

೩೩೬ ಪುಣ್ಯ ಪಾಪಗಳೆಂಬ ತಿಣ್ಣ ಭೇದಗಳಿಂದ
ತಣ್ಣಗೀ ಜಗವು ನಡೆದಿಹುದು ಅಲ್ಲದಡೆ
ನುಣ್ಣಗಾಗಿಹುದು ಸರ್ವಜ್ಞ

೩೩೭ ಮುನ್ನ ಮಾಡಿದ ಪಾಪ ಹೊನ್ನಿಂದ ಪೋಪುದೆ
ಹೊನ್ನಿನ ಪುಣ್ಯವದು ಬೇರೆ ಪಾಪ ತಾ
ಮುನ್ನಿನಂತಿಹುದು ಸರ್ವಜ್ಞ

೩೩೮ ಹಿಂದೆ ಪಾಪವ ಮಾಡಿ ಮುಂದೆ ಪುಣ್ಯವು ಹೇಗೆ
ಹಿಂದು ಮುಂದರಿತು ನಡೆಯದಿರೆ ನರಕದಲಿ
ಬೆಂದು ಸಾಯುವುದು ಸರ್ವಜ್ಞ

೩೩೯ ಪುಣ್ಯ ತನಗುಳ್ಳನಕ ಮನ್ನಣೆಯು ಪಿರಿದಕ್ಕು
ಹಣ್ಣಿದ ಕಾರ್ಯ ಫಲವಕ್ಕು ಮುಟ್ಟಿದ
ಮಣ್ಣು ಹೊನ್ನಕ್ಕು ಸರ್ವಜ್ಞ

೩೪೦ ಬತ್ತಿ ಎಣ್ಣೆಗಳೆರಡು ಹೊತ್ತಿ ಬೆಳಗುವ ತೆರದಿ
ಸತ್ಯ ನೀತಿಗಳು ಬೆಳಗಿದವು ಜೋಡಗಲೆ
ಕತ್ತಲೀ ಜಗವು ಸರ್ವಜ್ಞ

೩೪೧ ಸತ್ಯರಿಗೆ ಧರೆಯೆಲ್ಲ ಮಸ್ತಕವನೆರಗುವದು
ಹೆತ್ತ ತಾಯ್ ಮಗನ ಕರೆವಂತೆ ಶಿವನವರ-
ನೆತ್ತಿಕೊಂಬುವನು ಸರ್ವಜ್ಞ

೩೪೨ ಹುಸಿವನಿಂದೈನೂರು ಪಶುವ ಕೊಂದವ ಲೇಸು
ಸಿಸುವಧೆಯ ಮಾಡಿದವ ಲೇಸು ಮರೆಯಲಿ-
ದ್ದೆಸೆದರೂ ಲೇಸು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೧೩. ಸಾಮಾನ್ಯ ನೀತಿ ಪದ್ಧತಿಃ

ಪುಣ್ಯಮಿತಿ ಪಾಪಮಿತಿ ತೀಕ್ಷ್ಣಭೇದೇನ್ನೈವ
ಸನ್ಮತಂ ಸಂಸರತಿ ಜಗದ್‌ಅತ್ರ ನೈವ ಚೇತ್
ಶೂನ್ಯಮನುಶಾಸ್ತಿ ಸರ್ವಜ್ಞ ೩೩೬

ಪೂರ್ವಕೃತ ಪಾಪಂ ಸುವರ್ಣೇನ ಯಾತಿ ಕಿಂ
ಸ್ವರ್ಣದಾನಾತ್ ಪುಣ್ಯಮನ್ಯತ್ ಚ ಪಾಪಂ ತು
ಪೂರ್ವಮಿವ ಲಗತಿ ಸರ್ವಜ್ಞ ೩೩೭

ಪೂರ್ವಕೃತ ಪಾಪಂ ತದ್‌ಅರ್ವಾಜ್ ನ ಪುಣ್ಯಮಿಹ
ಪೂರ್ವಾಪರಂ ವೀಕ್ಷ್ಯ ಚರಿತಂ ನ ಚೇನ್ನರಕ
ಕ್ರೂರಾಗ್ನಿಮೃತಿಃ ಸರ್ವಜ್ಞ ೩೩೮

ಪುಣ್ಯಂ ತವಾಸ್ತಿ ಚೇತ್ ಮಾನ್ಯತಾ ವರ್ಧತೇ
ಸನ್ಮತಂ ಫಲತಿ ಕಾರ್ಯಂ ಸ್ಪೃಷ್ಟ ಮೃತ್ತಿಕಾ
ಸ್ವರ್ಣಾಯತೇ ಹಿ ಸರ್ವಜ್ಞ ೩೩೯

ವರ್ತಿಶ್ಚ ತೈಲಂ ಸಮೇತ್ಯ ದೀಪ್ತೌ ಯಥಾ
ಸತ್ಯಂ ಚ ನೀತಿರುಜ್ಜ್ವಲಿತೌ ನಿಯುಕ್ತೌ ತು
ಧಿಕ್ ತಮೋ ಜಗತಿ ಸರ್ವಜ್ಞ ೩೪೦

ಸತ್ಯಸಂಧಾಗ್ರತೋ ನತಮಸ್ತಕಾ ಧರಾ
ಪುತ್ರಮಾಹ್ವಯತಿ ಜನನೀ ಯಥಾ ತಾನ್ ಶಿವಃ
ಪ್ರೋತ್ಥಾಪಯತಿ ಚ ಸರ್ಪಜ್ಞ ೩೪೧

ಪಿಶುನವಚನಾತ್ ಪಂಚ ಪಶುಶತಘ್ನೋ ವರಂ
ಶಿಶುಕ ವಧಕೃದ್‌ವರಂ ಶೃಣು ವರಂ ಗುಪ್ತೇನ
ನಿಶಿತಘಾತೋಽಪಿ ಸರ್ವಜ್ಞ ೩೪೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೪೩ ಹುಸಿಯು ಪೇಳ್ವುದರಿಂದ ಹಸಿದು ಸಾವುದು ಲೇಸು
ಹುಸಿದು ಮೆರೆಯುವನ ಬದುಕಿಂದ ಹಂದಿಯು
ಇಸಿಯು ಲೇಸೆಂದ ಸರ್ವಜ್ಞ

೩೪೪ ಒಳ್ಳೆಯನು ಇರದೂರು ಕಳ್ಳನೊಡನಾಟವು
ಸುಳ್ಳನ ಮಾತು ಇವು ಮೂರು ಕೆಸರೊಳಗೆ
ಮುಳ್ಳು ತುಳಿದಂತೆ ಸರ್ವಜ್ಞ

೩೪೫ ಮುಟ್ಟದಂತಿರಬೇಕು ಮುಟ್ಟದಲೆ ಇರಬೇಕು
ಮುಟ್ಟಿಯೂ ಮುಟ್ಟದಿರಬೇಕು ಪರಸ್ತ್ರೀಯ
ಮುಟ್ಟದವ ಕೆಟ್ಟ ಸರ್ವಜ್ಞ

೩೪೬ ಈರೈದು ತಲೆಯುಳ್ಳ ಧೀರ ರಾವಣ ಮಡಿದ
ವೀರ ಕೀಚಕನು ಗಡ ಸತ್ತ ಪರ ಸತಿಯ
ದಾರಿ ಬೇಡೆಂದ ಸರ್ವಜ್ಞ

೩೪೭ ನಾರಿಯನು ಜಾರೆಯನು ಸಾರಿದರೆ ನೆರೆ ಕೇಡು
ನಾರಿಯಿಂ ಕೆಟ್ಟ ದಶಕಂಠ ಪಾಂಡವರು
ಜಾರೆಯಿಂ ಕೆಡರೆ ಸರ್ವಜ್ಞ

೩೪೮ ಒಡಲ ಹಿಡಿದಾಡದಿರು ನುಡಿಯ ಹೋಗಾಡದಿರು
ನಡೆಯೊಳೆಚ್ಚರವ ಬಿಡದಿರು ಪರ ಸತಿಯ
ಕಡೆಗೆ ನೋಡದಿರು ಸರ್ವಜ್ಞ

೩೪೯ ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎರಗಿದರೆ
ನರ ಸುರರೊಲಿದು ಸಿರಿ ಸುರಿದು ಕೈಲಾಸ
ಕರತಲಾಮಲಕ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪಿಶುನ ವಚನಾದ್ಅಪ್ಯನಶನೆ ಮರಣಂ ವರಂ
ಪಿಶುನತೋದ್ಧೃತ ಜೀವನಾದ್ಅತ್ರ ಸೂಕರ ಪು-
ರೀಷಂ ವರಂ ಹಿ ಸರ್ವಜ್ಞ ೩೪೩

ಅನ್ಯಜಾಚರ್ಯಾ ಪುರೀ ಸ್ತೇನಜನ ಸಂಗತಿಃ
ಅನ್ಯತನಾಕ್ ತ್ರಯಮಿದಂ ಕರ್ದಮೋ ಕಂಟಕೈರ್
ವಿನಿಕರ್ತನಂ ಹಿ ಸರ್ವಜ್ಞ ೩೪೪

ಸ್ಪರ್ಶೋऽಸ್ತು ಲೋಕೇऽತ್ರ ಸ್ಪರ್ಶಸುಖಮಪಿ ಮಾಸ್ತು
ಸ್ಪರ್ಶೇऽಪಿ ಮಾ ಸ್ಪರ್ಶಮಸ್ತ್ವಿಹ ಪರಸ್ತ್ರಿಯಾಃ
ಸ್ಪರ್ಶೇನ ಪತತಿ ಸರ್ವಜ್ಞ ೩೪೫

ಧೀರೋऽಪಿ ದಶಶಿರಾಃ ಮರಣವಶಮಾಗತಃ
ವೀರೋऽಪಿ ಕೀಚಕೋ ಮೃತ್ಯುಂಗತಸ್ತೇನ
ಪರಸತೀಂ ತ್ಯಜತ ಸರ್ವಜ್ಞ ೩೪೬

ನಾರೀಂ ಚ ಶಾರಿಮಭಿಸರತಿ ಚೇತ್ ಪರಿಪತತಿ
ನಾರ್ಯಾ ವಿನಷ್ಟಃ ಸ ದಶಶಿರಾಃ ಪಾಂಡವಾಃ
ಶಾರ್ಯಾ ಪ್ರಣಶುಃ ಸರ್ವಜ್ಞ ೩೪೭

ದೇಹದೂಷಣಮಪ್ಯಪೋಹಾ ವಚಾಂಸಿ ಜಹಿ
ಜಹ್ಯಜಾಗೃತ ಚರಿತಮಪಿ ಪರ ಸತೀ ಜನೇ
ಸ್ಪೃಹಯಾ ಚ ವಿರಮ ಸರ್ವಜ್ಞ ೩೪೮

ಗುರುಜನಾನ್ ಜ್ಯೇಷ್ಠಾನ್ಶ್ಚ ಶಿರಸಾ ಪ್ರಣಮತಿ ಚೇತ್
ನರಸುರ ಪ್ರೀತಿಶ್ಚ ಶ್ರೀಶ್ಚ ಕೈಲಾಸಶ್ಚ
ಕರತಲಾಮ್ಲಕಃ ಸರ್ವಜ್ಞ ೩೪೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೩೫೦ ನುಡಿಸುವುದಸತ್ಯವನು ಕೆಡಿಸುವುದು ಧರ್ಮವನು
ನಡಿಸುವುದು ಕಟ್ಟೆ ಒಡಲನು ಲೋಭದ
ಗಡಣ ಕಾಣಯ್ಯ ಸರ್ವಜ್ಞ

೩೫೧ ಲೋಭದಿಂ ಕೌರವನು ಲಾಭವನು ಪಡೆದಿಹನೆ
ಸಾಭಿಯಿಂ ಕೆಳಗೆ ಎರಡೂರು ಕೊಂಬಾಗ
ಲಾಭ ಬಂದಿಹುದೆ ಸರ್ವಜ್ಞ

೩೫೨ ಉದ್ದುರುಟು ಮಾತಾಡಿ ಇದ್ದುದನು ಹೋಗಾಡಿ
ಉದ್ದನ ಮರನ ತುದಿಗೇರಿ ಕೈಜಾರಿ
ಬಿದ್ದು ಸತ್ತಂತೆ ಸರ್ವಜ್ಞ

೩೫೩ ಜಾತಿ ಜಾತಿಗೆ ವೈರ ನೀತಿ ಮೂರ್ಖಗೆ ವೈರ
ಪಾತಕವು ವೈರ ಸುಜನರ್ಗೆ ಅರಿದಂಗೆ
ಏತರದು ವೈರ ಸರ್ವಜ್ಞ

## ೧೪. ಧನಪದ್ಧತಿ

೩೫೪ ಧನಕನಕವುಳ್ಳನಕ ದಿನಕರನವೋಲಕ್ಕು
ಧನಕನಕ ಹೋದ ಮರುದಿನವೆ ಹಾಳೂರ
ಶುನಕನಂತಕ್ಕು ಸರ್ವಜ್ಞ

೩೫೫ ಸಿರಿಯುಣ್ಣ ಉಳ್ಳನಕ ಹಿರಿಯುಣ್ಣನಂತಕ್ಕು
ಸಿರಿಯುಣ್ಣ ಹೋದ ಮರು ದಿನವೆ ಹಾಳೂರ
ನರಿಯುಣ್ಣನಕ್ಕು ಸರ್ವಜ್ಞ

೩೫೬ ಬಲ್ಲಿದನು ನುಡಿದಿಹರೆ ಬೆಲ್ಲವನು ಮೆದ್ದಂತೆ
ಇಲ್ಲದಾ ಬಡವ ನುಡಿದಿಹರೆ ಬಾಯಿಂದ
ಜೊಲ್ಲು ಬಿದ್ದಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಾಚಯತ್ಯನೃತವಾಕ್ ಲುಂಚತಿ ಚ ಧರ್ಮಮಪಿ
ಕ್ರುಂಚತಿ ತಸುಂ ಬಂಧಪಾಶೇನ ಲೋಭಸ್ಯ
ಸಂಚಯಃ ಪಶ್ಯ ಸರ್ವಜ್ಞ ೩೫೦

ಲೋಭೇನ ಕೌರವೋ ಲಾಭಂ ಕಿಮಾಪ್ತವಾನ್
ನಾಭ್ಯಧಶ್ಯೋರು ದ್ವಯೋರ್ ಭಂಗ ಸಮಯೇ ನ
ಲಾಭೋಽಭವದ್ಧಿ ಸರ್ವಜ್ಞ ೩೫೧

ಉದ್ಧತಮಿವಾಲಾಪ್ಯ ಸದ್ದ್ರವ್ಯಮಾಕ್ಷಿಪತಿ
ಉದ್ದಂಡ ತರುಶಿಖರಮಾರುಹ್ಯ ಪ್ರಚ್ಯುತಃ
ಸೋಽಧ್ಯಧಃ ಪತತಿ ಸರ್ವಜ್ಞ ೩೫೨

ಜಾತಿರಪಿ ಜಾತೇಶ್ಚ ನೀತಿರಪಿ ಮೂರ್ಖಸ್ಯ
ಪಾತಕಮಮಿತ್ರಂ ಚ ಸುಜನಸ್ಯ ಜ್ಞಾನಿನಃ
ಕತಮಮಹಿತಮಿಹ ಸರ್ವಜ್ಞ ೩೫೩

## ೧೪. ಧನಪದ್ಧತಿಃ

ಧನಕನಕಮಸ್ತಿ ಚೇತ್ ದಿನಕರನಿಭೋ ಭಾತಿ
ಧನಕನಕಮುಪಗಮಿಷ್ಯತಿ ಚೇದ್ ವಿಜನವಸತಿ
ಶುನಕಾಯತೇ ಹಿ ಸರ್ವಜ್ಞ ೩೫೪

ಶ್ರೀಪತಿರ್ ಭವತಿ ಚೇತ್ ಭೂಪತಿರಿವಾಭಾತಿ
ಶ್ರೀಪತಿಃ ಪತತಿ ಚೇತ್ ತತ್‌ಕ್ಷಣಂ ವಿಜನಭೂ
ಶ್ವಾಪತಿರ್ ಭವತಿ ಸರ್ವಜ್ಞ ೩೫೫

ಧನಪತೇರ್ ವಚನಂ ಸುಘನಗುಡಾಸ್ವಾದ ಇವ
ಧನಹೀನ ಜನವಾಕ್ ತು ವದನತೋ ನಿಸ್ಸರತ್
ಹೀನಲಾಲೇವ ಸರ್ವಜ್ಞ ೩೫೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೩೫೭ ತುಂಬಿದಾ ಕೆರೆ ಬಾವಿ ತುಂಬಿದಂತಿರುವದೆ
ನಂಬಿರಬೇಡ ಲಕ್ಷ್ಮಿಯುನು ಬಡತನವು
ಬೆಂಬಿಡದೆ ಬಹುದು ಸರ್ವಜ್ಞ

೩೫೮ ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ ಕಿಬ್ಬದಿಯು
ಕೀಲು ಮುರಿದಂತೆ ಸರ್ವಜ್ಞ

೩೫೯ ಇಲ್ಲದವನಹುದಾಡೆ ಬಲ್ಲಂತೆ ಬೊಗಳುವರು
ಬಲ್ಲಿದನು ಅಲ್ಲದಾಡಿದರೆ ಎಲ್ಲವರು
ಬೆಲ್ಲವೆಂಬುವರು ಸರ್ವಜ್ಞ

೩೬೦ ಉಳ್ಳವನು ನುಡಿದಿಹರೆ ಒಳ್ಳಿತೆಂದೆನ್ನುವರು
ಇಲ್ಲದ ಬಡವ ನುಡಿದಿಹರೆ ತುತ್ತಿಟ್ಟ
ಕಲ್ಲು ಕಡಿದಂತೆ ಸರ್ವಜ್ಞ

೩೬೧ ಮೆರೆಸುವುದು ಅನ್ಯರನು ಮರೆಸುವುದು ತನ್ನವರ
ಇರಿಸುವುದು ತನ್ನ ಇದಿರನು ಹೊನ್ನಿನ
ತರವ ನೋಡೆಂದ ಸರ್ವಜ್ಞ

೩೬೨ ಯತಿಗಳಿಗೆ ಮತಿ ಕೆಡುಗು ಸತಿಯು ಸಜ್ಜನೆ ಕೆಡುಗು
ಮತಿವಂತರಿದ್ದು ಮರುಳಕ್ಕು ಹೊನ್ನೆಂಬ
ಶ್ರುತಿಯು ಕೇಳಿದರೆ ಸರ್ವಜ್ಞ

೩೬೩ ಬಗೆಬಗೆಯು ಭೋಗವಿರೆ ನಗುತಿಹರು ಸತಿಸುತರು
ನಗೆ ಹೋಗಿ ಹೊಗೆಯು ಬರಲವರು ಅಡವಿಯಲಿ
ಒಗೆದು ಬರುತಿಹರು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪೂರ್ಣಸ್ ತಟಾಕಃ ಪ್ರಪೂರ್ಣಃ ಸದಾಽಪಿ ಕಿಂ
ಸ್ವರ್ಣಲಕ್ಷ್ಮೀ ಪ್ರತ್ಯಯೋ ನಾಸ್ತಿ ದಾರಿದ್ರ್ಯ-
ಮನುಸರತ್ಯೇವ ಸರ್ವಜ್ಞ ೩೫೭

ಋಣಗ್ರಹಣ ಕಾಲಸ್ತದನ್ನಾಮೃತಾಶನಂ
ಋಣದೇನ ವಿಪ್ರಕೃಷ್ಟೇ ತದಾ ಪಾಶ್ವಾರ್ಸ್ಥಿ
ಚೂರ್ಣತಾಂ ವಿತಿ ಸರ್ವಜ್ಞ ೩೫೮

ಅಧನೋಕ್ತ ತಥ್ಯಮಪಿ ವಿಧವಿಧಂ ವ್ಯಾಕೃತಂ
ಸಧನೋಕ್ತ ವಚನಂ ಕದರ್ಥಮಪಿ ಸರ್ವೋಽಪಿ
ಮಧುರಮಿತಿ ಗದತಿ ಸರ್ವಜ್ಞ ೩೫೯

ಧನಯುತೇ ವದತಿ ಸತಿ ಘನಮಿತಿ ವ್ಯಾಕೃತಂ
ಧನಹೀನ ಜನವಚಸಿ ಸುಹಿತ ಕವಲೇಽಪ್ಯಹೋ
ಭಣತಿ ಚಾಶ್ಮೇತಿ ಸರ್ವಜ್ಞ ೩೬೦

ಬೃಂಹಿತಾಃ ಪರಜನಾಃ ಸಂಹತಾಃ ಸ್ವೀಯಾಶ್ಚ
ಸಂಹಿತಾಸ್ತ್ವಭಿಮುಖಂ ವೈರಿಣಃ ಸ್ವರ್ಣಸ್ಯ
ರಂಹತಿಂ ಪಶ್ಯ ಸರ್ವಜ್ಞ ೩೬೧

ಯತಿಮತಿರ್ ದೂಷಿತಾ ಸತ್ಯಾ ಗುಣೋ ಹತಃ
ಮತಿಯುತಾ ಭ್ರಾಂತಾಶ್ಚ ಸರ್ವೇ ಸುವರ್ಣಮಿತಿ
ಶ್ರುತಿಮಿಹಾಕರ್ಣ್ಯ ಸರ್ವಜ್ಞ ೩೬೨

ಭೋಗೇಷು ವಿವಿಧೇಷು ರಾಗಿಣಃ ಸ್ತ್ರೀಸುತಾಃ
ವಿಗತಭೋಗೇ ಪ್ರಾಪ್ತದುರ್ಗತೌ ತ್ವಂ ವನೇ
ಧಿಗಿವಾಸ್ಯಸೇ ಚ ಸರ್ವಜ್ಞ ೩೬೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



## ೧೫. ವಿದ್ಯಾಪದ್ಧತಿ

೩೬೪ ವಿದ್ಯಕ್ಕೆ ಕಡೆಯಿಲ್ಲ ಬುದ್ಧಿಗೆ ಬೆಲೆಯಿಲ್ಲ
ಛಿದ್ರಿಸುವವಗೆ ಗತಿಯಿಲ್ಲ ಮರಣಕ್ಕೆ
ಮದ್ದು ತಾನಿಲ್ಲ ಸರ್ವಜ್ಞ

೩೬೫ ವಿದ್ಯೆಯುಳ್ಳನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದನ ಬರಿಮುಖವು ಹಾಳೂರ
ಹದ್ದಿನಂತಿಕ್ಕು ಸರ್ವಜ್ಞ

೩೬೬ ವಿದ್ಯವೇ ತಾಯ್ತಂದೆ ಬುದ್ಧಿಯೇ ಸೋದರನು
ಅಧ್ವಾನಕಾದರವ ನೆಂಟ ಸುಖದಿ ತಾ-
ನಿದ್ದುದೇ ರಾಜ್ಯ ಸರ್ವಜ್ಞ

೩೬೭ ಇದ್ದಲ್ಲಿ ಸಲುವ ಹೋಗಿದ್ದಲ್ಲಿಯೂ ಸಲುವ
ವಿದ್ಯೆಯ ಕಲಿತ ಬಡವ ತಾ ಗಿರಿಯ ಮೇ-
ಲಿದ್ದರೂ ಸಲುವ ಸರ್ವಜ್ಞ

೩೬೮ ಅರ್ಥವಿಲ್ಲದ ಹಾಡು ವ್ಯರ್ಥ ಸಾಸಿರವಿದ್ದು
ಅರ್ತಿಯಿಂ ಕತ್ತೆಯರಚಿದಡಲ್ಲಿ
ಅರ್ಥವುಂಟೆಂದ ಸರ್ವಜ್ಞ

೩೬೯ ಪ್ರಾಸವಿಲ್ಲದ ಪದವ ತಾಸು ಹಾಡಿದರೇನು
ಸಾಸುವೆ ಎಣ್ಣೆ ಹದಮಾಡಿ ಕಣ್ಣಿಗೆ
ಪೂಸಿಕೊಂಡಂತೆ ಸರ್ವಜ್ಞ

೩೭೦ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯವೆ ಲೇಸು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ-
ದಾಟವೇ ಕೆಡುಗು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



## ೧೫. ವಿದ್ಯಾಪದ್ಧತಿಃ

ವಿದ್ಯಾ ಹ್ಯನಂತಾ ಚ ಬುದ್ಧಿಸ್ತ್ವಮೂಲ್ಯಾ ಚ
ಛಿದ್ರಿಣೇ ಸುಗತಿರ್ನ ಮರಣಸ್ಯ ನೈವಾಸ್ತಿ
ಸಿದ್ಧಾಷಧಿಸ್ತು ಸರ್ವಜ್ಞ ೩೬೪

ವಿದ್ಯಾವತೋ ಮುಖಂ ಮುದ್ ವಿತನುತೇ ಸುಖಂ
ವಿದ್ಯಾವಿಹೀನಸ್ಯ ಮುಖಕೇವಲಂ ಪರಂ
ಗೃಧ್ರಾಯತೇ ಚ ಸರ್ವಜ್ಞ ೩೬೫

ವಿದ್ಯೈವ ಪಿತರೌ ಸುಬುದ್ಧಿಃ ಸಹೋದರಃ
ನದ್ಧ ಸಂಕಟೆಹರೋ ಬಂಧುಃ ಸ್ವರಾಜ್ಯಮಪಿ
ವಿದ್ಯಸೇ ಯತ್ರ ಸರ್ವಜ್ಞ ೩೬೬

ಜಯತಿ ಯಶ್ಚೈಕತ್ರ ಜಯತಿ ಸೋಽನ್ಯತ್ರಾಪಿ
ಪ್ರಯತವಿದ್ಯೋ ಯಃ ಸ ದೀನೋ ಗಿರಿಷ್ಠೋಽಪಿ
ನಿಯತಮಿವ ಜಯತಿ ಸರ್ವಜ್ಞ ೩೬೭

ಅರ್ಥಹಾ ಗೀತಿಕಾ ವ್ಯರ್ಥಂ ಸಹಸ್ರಮಪಿ
ಪ್ರಾರ್ಥಯನ್ ರಾಸಭಃ ಕ್ರೋಶತಿ ಭೃಶಂ ತತ್ರ
ಅರ್ಥಸ್ತು ನೈವ ಸರ್ವಜ್ಞ ೩೬೮

ಪ್ರಾಸಶೂನ್ಯಂ ಕವನಮಾಸ್ತೃತಂ ತೇನ ಕಿಂ
ಸಾರ್ಷಪಂ ತೈಲಂ ವಿಶುದ್ಧಮಿತಿ ನೇತ್ರಯೋಃ
ಸಂಸಿಕ್ತಮಿವ ಹಿ ಸರ್ವಜ್ಞ ೩೬೯

ಕೋಟಿವಿದ್ಯಾಸು ಭೂಕೃಷ್ಟಿವಿದ್ಯಾ ವರಂ
ಕೃಷ್ಟಿಸ್ತಥಾ ವಸ್ತ್ರವಯನಂ ನ ಚೇತ್ ಜಗತಿ
ತುಷ್ಟಿಃ ಪ್ರಣಶತಿ ಸರ್ವಜ್ಞ ೩೭೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೩೭೧ ಬೆರೆವಂಗೆ ಭೋಗವು ಮೊರೆವಂಗೆ ರಾಗವೂ
ಬರೆವಂಗೆ ಓದು ಬರುವಂತೆ ಸಾಧಿಪಗೆ
ಬರದಿಹುದುಂಟೆ ಸರ್ವಜ್ಞ

೩೭೨ ಓದಿದ ಓದು ತಾ ಮೇದ ಕಬ್ಬಿನ ಸಿಪ್ಪೆ
ಓದಿನ ಒಡಲನರಿದಿಹರೆ ಸಿಪ್ಪೆ ಕ-
ಬ್ಬಾದಂತೆ ಕಾಣೊ ಸರ್ವಜ್ಞ

೩೭೩ ಅರಿತವರ ಮುಂದೆ ತನ್ನರಿವನ್ನು ಮೆರೆಸುವುದು
ಅರಿಯದರ ಮುಂದೆ ಮೆರೆದರೆ ಹೊನ್ನಂಬ
ತೊರೆಯಲೆಚ್ಚಂತೆ ಸರ್ವಜ್ಞ

೩೭೪ ಜ್ಞಾನಿಯಜ್ಞಾನೆಂದು ಹೀನ ಜರಿದಡದೇನು
ಶ್ವಾನ ತಾ ಬೊಗಳುತಿರಲಾನೆಯದನೊಂದು
ಗಾನವೆಂದಂತೆ ಸರ್ವಜ್ಞ

## ಮಾತು ಪದ್ಧತಿ

೩೭೫ ಹೊತ್ತಿಗೊದಗದ ಮಾತು ಹತ್ತು ಸಾವಿರ ವ್ಯರ್ಥ
ಕತ್ತೆ ಕೂಗಿದರೆ ಫಲವುಂಟೆ ಬರಿ ಮಾತು
ಕತ್ತೆಗು ಕಷ್ಟ ಸರ್ವಜ್ಞ

೩೭೬ ಹೊಲಬನರಿಯದ ಮಾತು ತಲೆಬೇನೆ ಎದ್ದಂತೆ
ಹೊಲಬರಿತು ಒಂದ ನುಡಿದರೆ ಅದು ದಿವ್ಯ
ಫಲಪಕ್ವದಂತೆ ಸರ್ವಜ್ಞ

೩೭೭ ಮಾತು ಮಾತಿಗೆ ಆತು ಮಾತು ಕೋಟಿಗಳುಂಟು
ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ
ಸೋತವನೆ ಜಾಣ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಭೋಗಶ್ಚ ರತಿವಿದೇ ರಾಗಶ್ಚ ಗೀತಿನೇ
ಸುಗಮವಾದೋ ಲೇಖಕಾಯೇವ ಸಾಧನಾ-
ತಿಗಮಸ್ತಿ ಕಿಮಿಹ ಸರ್ವಜ್ಞ ೩೭೧

ಪಠಿತಮಪಿ ಪಠಿತಂ ಕುಜಟಿಲೇಕ್ಷು ಬುಸಮೇವ
ಪಾಠಸಾರಜ್ಞತಾ ಯದಿ ಭವೇತ್ ತದ್ ಬುಸಂ
ಘಟತೇಕ್ಷುರೇವ ಸರ್ವಜ್ಞ ೩೭೨

ಪ್ರಾಜ್ಞಜನ ಸಂನಿಧೌ ತೇ ಜ್ಞಾನಮಾವಿತನು
ಅಜ್ಞಜನ ಪುರತಃ ಸುವಿಸ್ತೃತಂ ಸ್ವರ್ಣಾಂಬು-
ಮಜ್ಜನಂ ಸರಸಿ ಸರ್ವಜ್ಞ ೩೭೩

ಜ್ಞಾನಿನಂ ಹ್ಯಜ್ಞ ಇತಿ ಹೀನವಚನೇನ ಕಿಮು
ಶ್ವಾನೇ ಸ್ವಯಂ ಭಷತಿ ವಾರಣಸ್ತಂ ಚೈಕ-
ಗಾನಮಿತಿ ಯಾತಿ ಸರ್ವಜ್ಞ ೩೭೪

## ೧೬. ವಾಕ್‌ಪದ್ಧತಿಃ

ಅವಸರಾನುಪಯುಕ್ತ ಸುವಚಮಯುತಂ ಹತಂ
ರುವತಿ ಸತಿ ರಾಸಭೇ ಕಿಂ ಫಲಂ ವ್ಯರ್ಥವಾಕ್
ಅವರಂ ತತೋಽಪಿ ಸರ್ವಜ್ಞ ೩೭೫

ರೀತಿಮೂಢಂ ವಚನಮಿತಿ ಶಿರೋವೇದನಾ
ರೀತಿಜ್ಞ ವಚನಮೇಕಂ ಲಸತಿ ತದ್ದಿವ್ಯ-
ಸ್ಫೀತಫಲಮಿವ ಚ ಸರ್ವಜ್ಞ ೩೭೬

ವಚನಮನು ವಚನಾನಿ ರಚಿತಾನಿ ಕೋಟಿಶಃ
ವಚನೇನ ಮನಸಿ ಪೀಡಾ ಭವತಿ ವಚನಸಂ-
ಕೋಚೇನ ಜಯತಿ ಸರ್ವಜ್ಞ ೩೭೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೭೮ ಮಾತಿನಿಂ ನಗೆನುಡಿಯು ಮಾತಿನಿಂ ಹಗೆಕೊಲೆಯು
ಮಾತಿನಿಂ ಸರ್ವಸಂಪದವು ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ

೩೭೯ ಮಾತು ಬಲ್ಲಾತಂಗೆ ಏತವದು ಸುರಿದಂತೆ
ಮಾತಾಡಲರಿಯದಾತಂಗೆ ಬರಿ ಏತ
ನೇತಾಡಿದಂತೆ ಸರ್ವಜ್ಞ

೩೮೦ ಮಾತು ಬಲ್ಲಹ ತಾನು ಸೋತು ಹೋಹುದು ಲೇಸು
ಮಾತಿಂಗೆ ಮಾತು ಮಥಿಸಲ್ಕೆ ವಿಧಿ ಬಂದು
ಆತುಕೊಂಡಿಹುದು ಸರ್ವಜ್ಞ

೩೮೧ ಮೆಲ್ಲನೆಯ ಸುರಿ ನೀರು ಕಲ್ಲ ಭೇದಿಸಲಕ್ಕು
ಸೊಲ್ಲರಿತು ನುಡಿವ ಒಳ್ನುಡಿಯು ಬಲ್ಲಂದ-
ನಲ್ಲವೆನಿಸುವುದು ಸರ್ವಜ್ಞ

೩೮೨ ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದನ ಬರಿಮಾತು ಕಿವಿಗೆ ಕೂ-
ರ್ದಸಿಯ ಬಡಿದಂತೆ ಸರ್ವಜ್ಞ

೩೮೩ ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ
ಹೊತ್ತಾಗಿ ನುಡಿದ ಮಾತು ಕೈಜಾರಿದ
ಮುತ್ತಿನಂತಿಹುದು ಸರ್ವಜ್ಞ

೩೮೪ ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು
ಮಾತ ತಾನರಿಯದಧಮಂಗೆ ಮಾಣಿಕವು
ತೂತು ಬಿದ್ದಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಾಗೇವ ಸರಸದಾ ವಾಗೇವ ವಿರಸದಾ
ವಾಗೇವ ಸರ್ವಸಂಪದೋ ಲೋಕೇಽತ್ರ
ವಾಗೇವ ಮಣಿಃ ಸರ್ವಜ್ಞ ೩೭೮

ವಾಗ್ವಿದೇ ಪುರುಷಾಯ ವಾಗ್ ವಾರಿಯಂತ್ರಮಿವ
ವಾಗ್ವಿಧಾನಾಜ್ಞಾಯ ತನ್ನಿರ್ಜಲಂ ವೃಥಾ
ಧಿಗ್ ಭ್ರಮಿತಮೇವ ಸರ್ವಜ್ಞ ೩೭೯

ವಚನಜ್ಞ ಪುರುಷೋ ವಿರಚಯೇತ್ ಸ್ವಮುಪಜಯಂ
ವಚನೋಪರಿ ಚ ವಚನಮಥನೇನ ವಿಧಿರೇತ್ಯ
ಪಾಚಯಿತ್ವಾತ್ತಿ ಸರ್ವಜ್ಞ ೩೮೦

ಸತತಾಲ್ಪಮಪಿ ಜಲಂ ಪ್ರಸ್ತರಂ ಪ್ರಭಿನತ್ತಿ
ಅರ್ಥವಿದ್ ವಾಕ್ ತಥಾ ದುರ್ವಿದಗ್ಧೇ ಜನೇ
ಹಂತ್ಯಹಮಿಕಾಂ ಹಿ ಸರ್ವಜ್ಞ ೩೮೧

ರಸಿಕಭಣಿತಂ ವಚಃ ಶಶ್ಯುದಯ ಸನ್ನಿಭಂ
ರಸಿಕಾಪಸದ ಭಣಿತ ವಚನಂ ತು ಕರ್ಣಂತು-
ದಸಿಸನ್ನಿಭಂ ಹಿ ಸರ್ವಜ್ಞ ೩೮೨

ಅವಸರೋಕ್ತಾ ಸುವಾಕ್ ಶಾವ ಸಂಜೀವನೀ
ಅವಸಿತಾವಸರೋಕ್ತಾ ವಾಕ್ ತು ಹಸ್ತಾನ್ಮಣಿರ್
ಗ್ರಾವ್ಣಿ ಪತಿತೇವ ಸರ್ವಜ್ಞ ೩೮೩

ವಾಗ್ವಿದೇ ಪುರುಷಾಯ ವಾಗೇವ ಮಣಿನಿಭಾ
ವಾಗ್‌ಬಲಾಜ್ಞಾಯಾಧಮಾಯ ಸಾ ವಾಕ್ ಸ್ವಯಂ
ಭಗ್ನಮಣಿರೇವ ಸರ್ವಜ್ಞ ೩೮೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೮೫ ಮಾತಿಂಗೆ ಮಾತುಗಳು ಓತು ಸಾಸಿರವುಂಟು
ಮಾತಾಡಿದಂತೆ ನಡೆದಾತ ಜಗವನು
ಕೂತಲ್ಲಿ ಆಳ್ವ ಸರ್ವಜ್ಞ

೩೮೬ ಆನೆ ಬೀದಿಲಿ ಬರಲು ಶ್ವಾನ ತಾ ಬೊಗಳುವುದು
ಶ್ವಾನನಂತಾನೆ ಬೊಗಳಿದರೆ ಆನೆಯು
ಮಾನವೇ ಹಾನಿ ಸರ್ವಜ್ಞ

## ೧೭. ವ್ಯವಹಾರ ನೀತಿ ಪದ್ಧತಿ

೩೮೭ ಕಂಡುದನು ಆಡೆ ಭೂಮಂಡಲವು ಮುನಿಯುವುದು
ಕೊಂಡಾಡುತಿಚ್ಛೆ ನುಡಿದಿಹರೆ ಜಗವೆಲ್ಲ
ಮುಂಡಾಡುತಿಹುದು ಸರ್ವಜ್ಞ

೩೮೮ ಮಡದಿ ಮಕ್ಕಳ ಮಮತೆ ಒಡಲೊಡವೆಯಿರುವನಕ
ಒಡಲೊಡವೆ ಕೆಡೆದ ಮರುದಿನವೆ ಅವರೆಲ್ಲ
ಕಡೆಗೆ ಸಾರಿಹರು ಸರ್ವಜ್ಞ

೩೮೯ ಸತ್ಯರೂ ಹುಸಿಯುವಡೆ ಒತ್ತಿ ಹರಿದಡೆ ಶರಧಿ
ಉತ್ತಮರು ತಪ್ಪಿ ನಡೆದಡೆ ಲೋಕವಿ-
ನ್ನೆತ್ತ ಸಾರುವುದು ಸರ್ವಜ್ಞ

೩೯೦ ಹೆಣ್ಣನ್ನು ಹೊನ್ನನ್ನು ಹಣ್ಣಾದ ಮರಗಳನು
ಕಣ್ಣಲ್ಲಿ ನೋಡಿ ಮನದಲ್ಲಿ ಬಯಸದಿಹ
ಅಣ್ಣಗಳು ಯಾರು ಸರ್ವಜ್ಞ

೩೯೧ ವಚನದೊಳಗೆಲ್ಲವರು ಶುಚಿ ವೀರ ಸಾಧುಗಳು
ಕುಚ ಶಸ್ತ್ರ ಹೇಮ ಸೋಂಕಿದರೆ ಲೋಕದೊಳ-
ಗಚಲದವರಾರು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಚನವುನುವಚನಾನಿ ರಚಿತಾನಿ ಶತಶತಂ
ವಚನಂ ಯಥಾಚರತಿ ಸಃ ಪುಮಾನ್ ಜಗದ್ಏವ
ಖಚಿತಂ ಪ್ರಶಾಸ್ತಿ ಸರ್ವಜ್ಞ ೩೮೫

ವಾರಣೇ ಪಥಿ ಯಾತಿ ಸಂರೌತಿ ಶುನಕುಲಂ
ವಿರುವತಿ ಶ್ವಾನ ಇವ ವಾರಣೇ ತಸ್ಯೈವ
ಗೌರವಹತಿರ್ಹಿ ಸರ್ವಜ್ಞ ೩೮೬

## ೧೭. ವ್ಯವಹಾರನೀತಿ ಪದ್ಧತಿಃ

ದೃಷ್ಟಂ ಬ್ರವೀತಿ ಚೇದ್ ರುಷ್ಟಂ ಭುವಾ ಕ್ರುಧಾ
ಇಷ್ಟಮಿಚ್ಛ್ವಾಮುಸು ಬ್ರೂತಂ ಚ ಚೇತ್ ಜಗತ್
ಶ್ಲಿಷ್ಟಮಾಪ್ನೋತಿ ಸರ್ವಜ್ಞ ೩೮೭

ಪತ್ನೀ ಸುತೇಷು ಮಮತಾ ತು ಯಾವತ್ತನುಃ
ಅಸ್ತಂ ತನೌ ಗತಾಯಾಂ ತು ಸದ್ಯಸ್ತೇಽಪಿ
ವ್ಯಸ್ತಾ ಭವಂತಿ ಸರ್ವಜ್ಞ ೩೮೮

ಸತ್ಯಸಂಧೇ ಚ್ಯುತೇ ಪ್ರೋತ್ಥಿತೇ ಶರಧೌ ಚ
ಉತ್ತಮ ಜನೇ ದುಷ್ಟಮಾರ್ಗಂಚರೇ ಜಗತ್
ಕುತ್ರ ಪ್ರಸರತಿ ಸರ್ವಜ್ಞ ೩೮೯

ಕನ್ಯಾಂ ಸುವರ್ಣಂ ಚ ಪೂರ್ಣಫಲ ವೃಕ್ಷಾಂಶ್ಚ
ಹೃನ್ನಯನ ಹಾರಿಣಃ ಪ್ರೇಕ್ಷ್ಯಾಪಿ ನಿಸ್ಸ್ಪೃಹಾಃ
ಸನ್ನುತಾಃ ಕುತ್ರ ಸರ್ವಜ್ಞ ೩೯೦

ವಚನೇಷು ಸರ್ವೇಽಪಿ ಶುಚಿ ವೀರ ಸಾಧವಃ
ಕುಚ ಶಸ್ತ್ರ ಹೇಮ ಸಂಸ್ಪರ್ಶನಾಲ್ಲೋಕೇ ದು-
ರಚಲಾಸ್ತು ಕುತ್ರ ಸರ್ವಜ್ಞ ೩೯೧



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೩೯೨ ಎಲ್ಲವರು ಹಿರಿಯವರು ಬಲ್ಲವರು ಗರುವರರು
ನಲ್ಲಳುರೆ ಮುಂದೆ ಸುಳಿದರೀ ಲೋಕದೊಳ-
ಗೊಲ್ಲದವರಾರು ಸರ್ವಜ್ಞ

೩೯೩ ಹೆಣ್ಣಿಗೂ ಮಣ್ಣಿಗೂ ಉಣ್ಣದುರಿಯಲು ಬೇಡ
ಹೆಣ್ಣಿಂದ ಕೆಟ್ಟ ದಶಕಂಠ ಕೌರವನು
ಮಣ್ಣಿಂದ ಕೆಡನೆ ಸರ್ವಜ್ಞ

೩೯೪ ಕಣ್ಣಿನಿಂದಲೆ ಪುಣ್ಯ ಕಣ್ಣಿನಿಂದಲೆ ಪಾಪ
ಕಣ್ಣಿನಿಂದಿಹವು ಪರವಕ್ಕು ಲೋಕಕ್ಕೆ
ಕಣ್ಣೆ ಕಾರಣವು ಸರ್ವಜ್ಞ

೩೯೫ ಕಣ್ಣು ನಾಲಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವುವು ಸರ್ವಜ್ಞ

೩೯೬ ಕತ್ತಿಲಾದಾ ಗಾಯ ಮತ್ತಿರದೆ ಮಾಯುವುದು
ಸುತ್ತಲಾಡುತಿಹ ಜಿಹ್ವೆಯ ಗಾಯವು
ನಿತ್ಯಕು ಬಿಡದು ಸರ್ವಜ್ಞ

೩೯೭ ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ
ಬಿದ್ದು ಬರುವವನ ಸದ್ದಡಗಿ ಸಂತಾನ-
ವೆದ್ದು ಹೋಗುವುದು ಸರ್ವಜ್ಞ

೩೯೮ ಅಂಗಿ ಅರಿವೆಯ ಮಾರಿ ಭಂಗಿಯನು ತಾ ಸೇದಿ
ಮಂಗನಂದದಿ ಕುಣಿವಾತ ಭವಭವದಿ
ಭಂಗಗೊಳುತಿಹನು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಗುರುಜನಾಃ ಸರ್ವೇಽಪಿ ಸೂರಯಃ ಶೂರಾಶ್ಚ
ವರವರ್ಣಿನೀ ಚ ತತ್ ಪುರತೋ ವಿಲಸತಿ ಚೇತ್
ನಾರಿತಾ ಕೇನ ಸರ್ವಜ್ಞ ೩೯೨

ಕಾಮಿನೀ ಧಾರಿಣೀ ಕಾಮತೋ ಮಾ ವಿಲಪ
ಕಾಮಿನೀ ಕಾರಣಾತ್ ರಾವಣಃ ಕೌರವಃ
ಭೂಮ್ಯಾ ಪಪಾತ ಸರ್ವಜ್ಞ ೩೯೩

ನಯನೇನ ಪುಣ್ಯಮಿಹ ನಯನೇನ ಪಾಪಮಪಿ
ನಯನೇನ ಸಾಧಿತಾವಿಹಪರೇ ಲೋಕೋತ್ರ
ನಯನಮೂಲೋ ಹಿ ಸರ್ವಜ್ಞ ೩೯೪

ನೇತ್ರ ಜಿಹ್ವಾ ಮನೋ ಹ್ಯಾತ್ಮವಶಮಿತಿ ನೈವ
ಹತೋಽಸ್ಮಿ ಚಾನ್ಯೈರಿತ್ಯಪಿ ನ ತ್ರಿಕಮಿದಂ
ಹನ್ತಿ ತ್ವಮೇವ ಸರ್ವಜ್ಞ ೩೯೫

ಘಾತಃ ಶಿತಾಸಿನಾ ಚಾಸ್ತ್ರಮೇತ್ಯಾಶು ಕಿಲ
ವ್ಯಸ್ತಂ ಯಥಾಲಪತ್ ಜಿಹ್ವಾಕೃತಾ ಹತಿರ್
ನಿತ್ಯಮಪಿ ತುದತಿ ಸರ್ವಜ್ಞ ೩೯೬

ಮದ್ಯಪಾನಾಯ ಸದ್ದ್ರವ್ಯಮಪ್ಯಪಹಾಯ
ರುದ್ಧಗತಿರ್ಏತಿ ಯಸ್ತಸ್ಯ ಸಂತತಿರ್ಏವ
ವಿದ್ಧಮೂಲಾ ಹಿ ಸರ್ವಜ್ಞ ೩೯೭

ದತ್ವಾಂಗವಸ್ತ್ರಾಣಿ ಪೀತ್ವಾ ಚ ಭಾಂಗಂ ಪ್ಲ-
ವಂಗ ಇವ ಪ್ಲವತಿ ಯೋ ಭವಭವೇ ಸೋಽಪಿ ಶೃಣು
ಭಂಗಭಗ್ನೋಽಸ್ತಿ ಸರ್ವಜ್ಞ ೩೯೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೯೯ ಭಂಗಿಯನು ಸೇದುವನ ಭಂಗವನು ಏನೆಂಬೆ
ಭಂಗಿಯು ಗುಂಗು ತಲೆಗೇರಲಾಡುವ
ಮಂಗನಂತಿಹನು ಸರ್ವಜ್ಞ

೫೦೦ ನೆತ್ತವೂ ಕುತ್ತವೂ ಹತ್ತಿದೊಡೆ ಅಳವಲ್ಲ
ಕುತ್ತದಿಂ ದೇಹ ಬಡವಕ್ಕು ನೆತ್ತದಿಂ
ಬತ್ತಲೆಯುಕ್ಕು ಸರ್ವಜ್ಞ

೫೦೧ ಆಡಿ ನಳನೃಪ ಕೆಟ್ಟ ಆಡಿ ಧರ್ಮಜ ಕೆಟ್ಟ
ನೋಡಿದ ನಾಲ್ವರು ತಿರಿದುಣಲು ನೆತ್ತವನು
ಆಡಬೇಡೆಂದ ಸರ್ವಜ್ಞ

೫೦೨ ಆಡಿದವರಿದ್ದಂತೆ ನೋಡಿದವ ತಾ ಕೆಟ್ಟ
ಬೇಡುವವ ಕೆಟ್ಟ, ನೆತ್ತವನು ಆಡುವನ
ಕೂಡಿದವ ಕೆಟ್ಟ ಸರ್ವಜ್ಞ

೫೦೩ ನೆತ್ತವದು ಒಳಿತೆಂದು ನಿತ್ಯವಾಡಲುಬೇಡ
ನೆತ್ತದಿಂ ಕುತ್ತ ಮುತ್ತಿ ಬರೆ ಸುತ್ತರಿದು
ಕತ್ತಲಾಗಿಹುದು ಸರ್ವಜ್ಞ

೫೦೪ ಬಲವಂತ ನಾನೆಂದು ಬಲಿದು ಹೋರಲಿ ಬೇಡ
ಬಲವಂತ ವಾಲಿ ಶ್ರೀರಾಮನೊಡನಾಡಿ
ಚಲದಿಂದ ಕೆಟ್ಟ ಸರ್ವಜ್ಞ

೫೦೫ ಉದ್ಯೋಗವುಳ್ಳವನ ಹೊದ್ದುವುದು ಸಿರಿ ಬಂದು
ಉದ್ಯೋಗವಿಲ್ಲದಿರುವವನ ಕರದೊಳಗೆ
ಇದ್ದುದೂ ಪೋಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಭಂಗಾ ನಿಪಾಯಿನೋ ಭಂಗಂ ಬ್ರವೀಮಿ ಕಿಂ
ಭಂಗಾ ನಿಪಾನೇನ ಭಂಗುರಮನಾಶ್ಚ ಪ್ಲ-
ವಂಗ ಇವ ಚರತಿ ಸರ್ವಜ್ಞ ೩೯೯

ದ್ಯೂತೇನ ಚೇತಿನಾ ಕ್ರಾಂತಿಸ್ತ್ವಸಹ್ಯಾಸ್ತಿ
ಈತಿನಾ ದೇಹಃ ಕೃಶೋ ಭವತಿ ದ್ಯೂತೇನ
ಯಾತಿ ನಾಶಂ ತು ಸರ್ವಜ್ಞ ೪೦೦

ದ್ಯೂತೇ ನಳೋಽನೇಶತ್ ದ್ಯೂತೇನ ಧರ್ಮಜಃ
ಚತ್ವಾರ ಏವ ತದ್ವೀಕ್ಷ್ಯ ಭೈಕ್ಷಂಚರಾಃ
ದ್ಯೂತಂ ಜಹೀಹಿ ಸರ್ವಜ್ಞ ೪೦೧

ದ್ಯೂತಮಗ್ನಾನ್ ವೀಕ್ಷ್ಯ ಪತತಿ ಸಂವೀಕ್ಷಕಃ
ಪತತಿ ತತ್ ಪ್ರಾರ್ಥಯತಿ ಯಃ ಸೋಽಪಿ ದ್ಯೂತಸಂ-
ಗತವಾನ್ ನಿಪತತಿ ಸರ್ವಜ್ಞ ೪೦೨

ದ್ಯೂತಂ ಪ್ರಿಯಂ ಚೇತಿ ನಿತ್ಯಮಾದೀವ್ಯಾತ್ ನ
ದ್ಯೂತೇನ ಸಂಬದ್ಧ ಕೈತವೇನಾವೃತೇ
ಕತ್‌ತಮೋ ಜಗತಿ ಸರ್ವಜ್ಞ ೪೦೩

ಬಲವಾನ್ ಅಹಂ ಚೇತಿ ಕಲಹಕೃನ್ ಮಾ ಸ್ಮ ಭೂಃ
ಬಲಯುತೋ ವಾಲೀ ಸ ರಾಮೇಣ ಸಂಯುಧ್ಯ
ದಲಿತೋ ಬಭೂವ ಸರ್ವಜ್ಞ ೪೦೪

ಉದ್ಯೋಗ ಶೀಲೋಽನುವಿದ್ಧ ಶ್ರಿಯಾ ಭಾತಿ
ಉದ್ಯೋಗ ಹೀನಸ್ಯ ಯದ್ ವಿದ್ಯತೇ ಕರೇ
ಛಿದ್ಯತೇ ತದಪಿ ಸರ್ವಜ್ಞ ೪೦೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೪೦೬ ಆಲಸಿಕೆಯಲಿರುವಂಗೆ ಕಲಸಲಂಬಲಿಯಿಲ್ಲ
ಕೆಲಸಕ್ಕೆ ಅಲಸದಿರುವಂಗೆ ಬೇರಿಂದ
ಹಲಸು ಕಾತಂತೆ ಸರ್ವಜ್ಞ

೪೦೭ ದೇಶವಿಲ್ಲದ ದೊರೆಯು ಕೋಶವಿಲ್ಲದ ಹರದ
ಕೂಸುಳಿಯದವಳ ಬಾಳುವೆಯು ಬೂದಿಯನು
ಪೂಸಿಕೊಂಡಂತೆ ಸರ್ವಜ್ಞ

೪೦೮ ಹದಬೆದೆಯಲಾರಂಬ ಕದನದಲಿ ಕೂರಂಬ
ನದಿ ಹಾಯುವಲ್ಲಿ ಹರಿಗೋಲ ಮರೆದಾತ
ವಿಧಿಯು ಬೈದೇನು ಸರ್ವಜ್ಞ

೪೦೯ ಕಾಲದೊಳು ಮಳೆಗಾಲ ಮಾಲೆಯೊಳು ಮಲ್ಲಿಗೆಯು
ಕಾಲವಾರರಲಿ ಕಡು ಚೆಲುವ ಬೇಸಗೆಯು
ಕಾಲವೇ ಕಾಲ ಸರ್ವಜ್ಞ

೪೧೦ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯವೆ ಲೇಸು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ-
ದಾಟವೇ ಕೆಡುಗು ಸರ್ವಜ್ಞ

೪೧೧ ಹರದನ ಮಾತನ್ನು ಹಿರಿದು ನಂಬಲು ಬೇಡ
ಗರಗಸದೊಡನೆ ಮರ ಹೋರಿ ತನ್ನ ತಾ-
ನಿರಿದು ಕೊಂಡಂತೆ ಸರ್ವಜ್ಞ

೪೧೨ ಹೆಂಡತಿಗೆ ಅಂಜುವ ಗಂಡುಸನು ಏನೆಂಬೆ
ಹಿಂಡು ಕೋಳಿಗಳ ಮುರಿತಿಂಬ ನರಿ ನಾಯು
ಕಂಡೋಡಿದಂತೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಆಲಸ್ಯ ಹತಕಾಯೋ ಮಿಲತಿ ನ ಹಿ ಮಂಡಮಪಿ
ಆಲಸ್ಯ ರಹಿತಸ್ಯ ಕರ್ಮಾಪಿ ಪನಸ ಇವ
ಮೂಲತಃ ಫಲತಿ ಸರ್ವಜ್ಞ ೪೦೬

ದೇಶಹೀನೋ ನೃಪಃ ಕೋಶಹೀನೋ ವಣಿಕ್
ಶಿಶುಹೀನ ಯೋಷಿದೋ ಜೀವನಂ ಚೈತಾನಿ
ಭಸಿತ ಲೇಪಮಿವ ಸರ್ವಜ್ಞ ೪೦೭

ಸುಸಮಯೇ ಕೃಷಿಕರ್ಮ ನಿಶಿತಶರಮಪಿ ರಣೇ
ವಿಸ್ಮರತಿ ತರಣಿಮುದ ತರಣೇಽಪಿ ಯಃ ಕಿಮುಪ-
ಹಸತಿ ವಿಧಿಮತ್ರ ಸರ್ವಜ್ಞ ೪೦೮

ಋತುಷು ವಾರ್ಷೋ ಋತುರ್ ಗ್ರಥಿತೇಷು ಮಲ್ಲಿಕಾ
ಋತುಷಟ್ಕೇ ಕಾಲೇಽತಿ ರಮಣೀಯೋ ವೈಶಾಖ-
ಕರ್ತುರ್ವರಂ ಹಿ ಸರ್ವಜ್ಞ ೪೦೯

ಕೋಟಿ ವಿದ್ಯಾಸು ಭೂಕೃಷ್ಟಿ ವಿದ್ಯಾ ವರಂ
ಕೃಷ್ಟಿ ಕರ್ಮ ಚ ವಸ್ತ್ರ ವಯನಂ ನ ಚೇತ್ ಜಗತಿ
ತುಷ್ಟಿ ನಾಶೋ ಹಿ ಸರ್ವಜ್ಞ ೪೧೦

ಪರದಸ್ಯ ವಚನೇಷು ಪರಿನಿಶ್ವಸಿಹಿ ನ್ನೈವ
ತರವಶ್ಚ ಕ್ರಕಚೇನ ಸಂನಿಯುಧ್ಯ ಸ್ವಯಂ
ದರಿತಾ ಭವಂತಿ ಸರ್ವಜ್ಞ ೪೧೧

ಪತ್ನೀ ವಿಭೀತಸ್ಯ ದುಃಸ್ಥಿತಿಂ ಕಿಂ ವಚ್ಮಿ
ಅತ್ತಿ ಕುಕ್ಕುಟಗಣಂ ಜಂಬುಕಃ ಶುನಕಾದ್ವಿ-
ಭೀತ ಉಡ್ಡಯತಿ ಸರ್ವಜ್ಞ ೪೧೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೪೧೩ ಕಿರಿಮೀನು ಹಿರಿಮೀನು ಕೊರೆಕೊರೆದು ತಿಂಬಾತ-
ಗಿರುವವನೊಬ್ಬ ಮಗ ಸಾಯೆ ನೋವಿನ
ತೆರನ ತಾನರಿವ ಸರ್ವಜ್ಞ

೪೧೪ ಕೋಡಗನ ಒಡನಾಡಿ ಕೇಡಕ್ಕು ಸಂಸಾರ
ಕಾಡಾಡಿ ಕೆಂಪು ಮಾಣಿಕವ ಕಲ್ಲೆಂದು
ಈಡಾಡಿದಂತೆ ಸರ್ವಜ್ಞ

೪೧೫ ಕಟ್ಟಾಳು ತಾನಾಗಿ ಬಟ್ಟೆಯಲಿ ನೆರವೇಕೆ
ಸೆಟ್ಟೆಗೆ ತೊದಲು ನುಡಿಯೇಕೆ ಅರಿದಂಗೆ
ನಿಷ್ಠುರವದೇಕೆ ಸರ್ವಜ್ಞ

೪೧೬ ಅತಿಯಾಸೆ ಮಾಡುವನು ಗತಿಗೇಡಿಯಾಗುವನು
ಅತಿಯಾಸೆಯಿಂದ ಮತಿಕೆಡುಗು ರತಿಯಿಂದ
ಸತಿಸುತರು ಕೆಡುಗು ಸರ್ವಜ್ಞ

೪೧೭ ಅತ್ತೆ ಮಾಡಿದ ತಪ್ಪು ಗೊತ್ತಿಲ್ಲದಡಗಿಹುದು
ತೊತ್ತುದನು ಮಾಡಿದರೆ ಕ್ಷಣದಿ ಸರುವರಿಂಗೆ
ಗೊತ್ತಹುದು ನೋಡ ಸರ್ವಜ್ಞ

೪೧೮ ವ್ಯಸನದಲಿ ದೇಹವು ಮಸಣವನು ಕಾಣುವುದು
ವ್ಯಸನವನು ಬಿಟ್ಟು ಹಸನಾಗಿ ದುಡಿದರೆ
ಅಶನವಸನಗಳು ಸರ್ವಜ್ಞ

೪೧೯ ಗೀತವಿದ್ಯವ ಕಲಿತ ಜಾತರ ಒಲುಮೆಯನು
ರೀತಿಯಲಿ ಅರಿಯಲರಿಯದರು ಪಾತಕರ
ಮಾತಿನಿಂ ಕೆಡುಗು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮತ್ಸ್ಯರಾಶಿಂ ಸದಾಭೀಪ್ಸಯಾಶ್ನಾತಿ ಯಃ
ತತ್ ಸುತೇ ಚೈಕೇ ಮೃತೇ ತದಾಶ್ವನುಭವತಿ
ಕೃತ್ಸ್ನಾಂ ಕ್ಷತಿಂ ಸ ಸರ್ವಜ್ಞ ೪೧೩

ಮಾನರಗುಣೇನ ಸಹ ಹೀನಮಿಹ ಜೀವನಂ
ವನಚರಃ ಕಾನನೇ ಮಾಣಿಕ್ಯಮಾಕ್ಷಿಪತಿ
ಶೋಣೋಪಲಮಿವ ಸರ್ವಜ್ಞ ೪೧೪

ಸೌಷ್ಠವೇಽಂಗೇ ಭವತಿ ಪುಷ್ಟಿರನ್ಯೇನ ಕಿಮು
ಶ್ರೇಷ್ಠಿನೇ ಸ್ಖಲಿತ ವಚನಂ ಚ ಕಿಂ ಜ್ಞಾನಿನೇ
ನೈಷ್ಠುರ್ಯಮಪಿ ಚ ಸರ್ವಜ್ಞ ೪೧೫

ಅತ್ಯಾಶಯಾ ನರೋ ಗತಿಹೀನತಾಮೇತಿ
ಅತ್ಯಾಶಯಾ ಮತಿರ್ದೂಷ್ಯತೇ ರತ್ಯಾ ಸ್ವ-
ಸುತಸತೀ ಲಯಃ ಸರ್ವಜ್ಞ ೪೧೬

ಶ್ವಶ್ರೂಕೃತಂ ಸ್ಖಲಿತಮಶ್ರುತಂ ಕೇನಾಪಿ
ವಿಶ್ರುತಂ ಸರ್ವತ್ರ ದಾಸ್ಯಾ ಕೃತಂ ಕ್ಷಣೇ
ಭೋಃ ಶೃಣುತ ಜಗತಿ ಸರ್ವಜ್ಞ ೪೧೭

ವ್ಯಸನೇನ ದೇಹಃ ಕೃಶಶ್ಚನಮುಭ್ಯಿಜ್ಞಾತಿ ಕಿಲ
ವ್ಯಸನಂ ವಿಹಾಯ ಮನಸಾ ಸ್ವಕರ್ಮಣಿ ಕೃತೇ
ಅಶನ ವಸನಾನಿ ಸರ್ವಜ್ಞ ೪೧೮

ಗೀತಾದಿ ವಿದ್ಯಯಾ ಜಾತ ಮಹಿಮಾವತಾಂ
ರೀತಿಂ ತ್ವನಾಶ್ರಿತ್ಯ ನಶ್ಯಂತಿ ಪಾತಕಿದು-
ರುಕ್ತಿಮಾಶ್ರಿತ್ಯ ಸರ್ವಜ್ಞ ೪೧೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೨೦ ಎಲ್ಲ ಬಲ್ಲವರಿಲ್ಲ ಬಲ್ಲಿದರು ಬಹಳಿಲ್ಲ
ಬಲ್ಲಿದರು ಇದ್ದು ಬಲವಿಲ್ಲ ಸಾಹಿತ್ಯ–
ವೆಲ್ಲರಿಗು ಇಲ್ಲ ಸರ್ವಜ್ಞ

೪೨೧ ಉರಗನ ಮುಖದಿ ಸಿಕ್ಕಿರುತಿಪ್ಪ ಕಪ್ಪೆ ತಾ–
ನೆರಗುವ ನೊಣಕೆ ನೆಗೆದಂತೆ ಸಂಸಾರ–
ದಿರವು ಕಾಣಯ್ಯ ಸರ್ವಜ್ಞ

೪೨೨ ಮುಟ್ಟಿದೆಡೆರಿಗೆ ಅಭಯ ಕೊಟ್ಟಾತ ದಾತಾರ
ಕೆಟ್ಟ ಕಾರ್ಯವನು ತಿದ್ದಿದರೆ ಅವನೊಂದು
ನೆಟ್ಟನೆ ದೈವ ಸರ್ವಜ್ಞ

೪೨೩ ಆಡದಲೆ ಮಾಡುವನು ರೂಢಿಯೊಳಗುತ್ತಮನು
ಆಡಿ ಮಾಡುವನು ಮಧ್ಯಮನು ಅಧಮನು ತಾ–
ನಾಡಿ ಮಾಡದನು ಸರ್ವಜ್ಞ

೪೨೪ ನಾರಿಯಿಲ್ಲದ ಮನೆಯು ವಾರಿಯಿಲ್ಲದ ದುರ್ಗ
ಮೇರೆ ತಪ್ಪಿದನ ಮನ್ನಣೆಯು ಇವು ಮೂರು
ಮಾರಿ ಕಾಣಯ್ಯ ಸರ್ವಜ್ಞ

೪೨೫ ಓದು ಇಲ್ಲದ ವಾದ ಭೇದಿಸುವ ದುರ್ಬುದ್ಧಿ
ಕಾದಲರಿಯದನ ಆಳಿಕೆಯು ಇವು ಮೂರು
ಹೋದರೆ ಲೇಸು ಸರ್ವಜ್ಞ

೪೨೬ ಪುಷ್ಪವಿಲ್ಲದ ಪೂಜೆ ಅಶ್ವವಿಲ್ಲದ ಅರಸು
ಅಪ್ಪಲೊಲ್ಲದಳ ನಡೆ ನುಡಿಯು ಇವು ಮೂರು
ಸಪ್ಪೆ ಕಾಣಯ್ಯ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿದುರಾ ನ ಸರ್ವಸ್ಯ ವಿದುರಾ ನ ಬಹವಶ್ಚ
ವಿದುರೇಷು ನ ಹಿ ಬಲಂ ಸರ್ವತ್ರ ಸಾಹಿತ್ಯ
ವಿದ್ಯಾ ನ ಲಸತಿ ಸರ್ವಜ್ಞ ೪೨೦

ಉರಗ ದಂಷ್ಟ್ರಾಶ್ಲಿಷ್ಟ ದರಿತ ಮಂಡೂಕೋಽಪಿ
ಪರಿಚರನ್ ಮಕ್ಷಿಕಾ ಹರಣಾಯ ಯತತ ಇವ
ಸರತಿ ಸಂಸೃತಿಃ ಸರ್ವಜ್ಞ ೪೨೧

ಕಷ್ಟಾಹತಾವಭೆಯೆ ದೇಷ್ಟಾ ಪ್ರದಾತ್ಯೈವ
ದುಷ್ಟಕಾರ್ಯಂ ಯೋಽಪಿ ಶಿಷ್ಟಮಿವ ಕಾರಯತಿ
ಸ್ವಿಷ್ಟದೈವಂ ಸ ಸರ್ವಜ್ಞ ೪೨೨

ನಾಶ್ರುತ್ಯ ಕುರುತೇ ಸ ವಿಶ್ರುತಶ್ಚೋತ್ತಮಃ
ಆಶ್ರುತ್ಯ ಕುರುತೇ ಸ ಮಧ್ಯಮಸ್ತ್ವಧಮೋಽಪಿ
ಚಾಶ್ರುತ್ಯ ನೈವ ಸರ್ವಜ್ಞ ೪೨೩

ನಾರೀಂ ವಿನಾಲಯೋ ವಾರ್ಹೀನ ದುರ್ಗಶ್ಚ
ಮರ್ಯಾದದೂರೇಣ ಮಾನ್ಯತಾ ತ್ರಿಕಮಿದಂ
ನಾರಕಂ ವಿದ್ಧಿ ಸರ್ವಜ್ಞ ೪೨೪

ವಾದೋ ವಿನಾ ಶ್ರುತಂ ಭೇದಿನೀ ಬುದ್ಧಿಶ್ಚ
ಕದನ ಪ್ರಮೂಢಸ್ಯ ಶಾಸನಂ ತ್ರಯಮಪಿ ವಿ-
ರುದ್ಧಂ ವರಂ ಹಿ ಸರ್ವಜ್ಞ ೪೨೫

ಪುಷ್ಪಂ ವಿನಾರ್ಚನಂ ಚಾಶ್ವೈರ್ ವಿನಾ ನೃಪಃ
ಆಶ್ಲೇಷ ವಿಮುಖಯಾ ಸರಸಚರ್ಯಾ ತ್ರಿಕಂ
ಶುಷ್ಕಮಿತಿ ವಿದ್ಧಿ ಸರ್ವಜ್ಞ ೪೨೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೨೭ ಉಪ್ಪಿಲ್ಲದೂಟ ಕಣ್ಗೊಪ್ಪವಿಲ್ಲದ ನಾರಿ
ತೊಪ್ಪಲನೀರು ಕೊನೆಗಬ್ಬು ಇವು ನಾಲ್ಕು
ಸಪ್ಪೆ ಕಾಣಯ್ಯ ಸರ್ವಜ್ಞ

೪೨೮ ಹರಿವನೀರೆಳೆವಳ್ಳಿ ತುರಗ ಚೈತ್ರವು ಬಂಡಿ
ಅರಸಿನ ಮನವು ಚೆಲಿವೆಣ್ಣು ಇವು ಏಳು
ತಿರುಹುವವರಿಚ್ಛೆ ಸರ್ವಜ್ಞ

೪೨೯ ಕರೆಯುದಲೆ ಬರುವವನ ಬರೆಯುದಲೆ ಓದುವನ
ಬರೆಗಾಲಿನಿಂದ ನಡೆವವನ ಕರೆತಂದು
ಕೆರದಿ ಹೊಡೆಯೆಂದ ಸರ್ವಜ್ಞ

೪೩೦ ಸತ್ಯಕ್ಕೆ ಸರಿಯಿಲ್ಲ ಮಿಥ್ಯಕೆ ನೆಲೆಯಿಲ್ಲ
ಹೆತ್ತಮ್ಮನಿಂದ ಹಿತರಿಲ್ಲ ನರರೊಳಗೆ
ನಿತ್ಯರೇ ಇಲ್ಲ ಸರ್ವಜ್ಞ

೪೩೧ ಏರುವ ಕುದುರೆಯನು ಹೇರುವ ಎತ್ತನ್ನು
ಬೇರೂರಲಿದ್ದ ಸತಿಯನ್ನು ಬೇರೊಬ್ಬ-
ರೇರದೆ ಬಿಡರು ಸರ್ವಜ್ಞ

೪೩೨ ದಿನಪತಿಗೆ ಎಣೆಯಿಲ್ಲ ಧನಪತಿಗೆ ಸ್ಥಿರವಿಲ್ಲ
ಅನುಭವಿಗೆ ಬೇರೆ ಮತವಿಲ್ಲ ಅರಿದಂಗೆ
ಮುನಿವವರೆ ಇಲ್ಲ ಸರ್ವಜ್ಞ

೪೩೩ ಸತ್ತವರಿಗತ್ತು ಬೇಸತ್ತವರು ಉಳಿವರೆ
ಹತ್ತೆಂಟು ಕಾಲ ತಡನಕ್ಕು ಬಳಿಕೆಲ್ಲ-
ರತ್ತಲೇ ಅಕ್ಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಲವಣಹೀನಾನ್ನಂ ಚ ಲಾವಣ್ಯ ಹೀನಾ ಚ
ಸ್ರವಣ ಜಲಮಿಕ್ಷುದಂಡಾಗ್ರಂ ಚತುಷ್ಕಮಪಿ
ಭುವಿ ನೀರಸಂ ಹಿ ಸರ್ವಜ್ಞ ೪೨೭

ಪರಿವಹತ್ ಜಲ ಬಾಲವೀರುತ್ ತುರಗ ಶಕಟ
ತರಣಿ ನರಪತಿಮನೋ ಗಣಿಕಾಶ್ಚ ಸಪ್ತ ನೇ-
ತಾರಮನುಸರತಿ ಸರ್ವಜ್ಞ ೪೨೮

ಅನಿಮಂತ್ರಿತಾಗತಂ ಹ್ಯಲಿಖನ್ ಪಠಂತಮಪಿ
ಹೀನಪಾದುಕಿನಂ ಸಮಾಹೂಯ ಪಾದುಕಾ
ಹನನಮರ್ಪಯತ ಸರ್ವಜ್ಞ ೪೨೯

ಸತ್ಯಸದೃಶಂ ನೈವ ಮಿಥ್ಯಾ ಸುನಶ್ವರಾ
ಮಾತ್ರಾಧಿಕೋ ಹಿತೈಷೀ ನೈವ ಮನುಜೇಷು
ನಿತ್ಯಾಶ್ಚ ನೈವ ಸರ್ವಜ್ಞ ೪೩೦

ತುರಗಂ ಸ್ವನಾಹಕಂ ಭಾರವಹ ವೃಷಭಮಪಿ
ದೂರವಾಸಾಂ ಸತೀಂ ಜಹತಿ ಜಗತೀಹ ನ ಹಿ
ಆರುರುಕ್ಷವಃ ಸರ್ವಜ್ಞ ೪೩೧

ದಿನಪತೇರ್ ನ ಹಿ ಸಮೋ ಧನಪತಿರ್ ನ ಸ್ಥಿರಃ
ಅನುಭವಿ ಜನಸ್ಯ ಮತಮನ್ಯಂ ನ ಕೋಪಿನಃ
ಜ್ಞಾನಿನೇ ನೈವ ಸರ್ವಜ್ಞ ೪೩೨

ಮೃತಕಾಯ ಪರಿತಪ್ಯ ಪತಿತಃ ಶಿಶೇಷ ಕಿಂ
ಕತಿಪಯ ದಿನಾನೀಹ ಸಮತೀತ್ಯ ಸೋಽಪ್ಯನ್ಯ-
ಗತಿಮವಾಪ್ನೋತಿ ಸರ್ವಜ್ಞ ೪೩೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೩೪ ಒತ್ತಿ ಮಾಡಿದ ಹೆಣ್ಣು ಹೊತ್ತು ಮೀರಿದ ಲಾಭ
ಸತ್ತವರಿಗತ್ತ ಕಣ್ಣೀನೆ ಇವು ಮೂರು
ವ್ಯರ್ಥ ಕಾಣಯ್ಯ ಸರ್ವಜ್ಞ

೪೩೫ ಹೆತ್ತ ತಾಯನು ಮಾರಿ ತೊತ್ತ ತಂದಾ ತೆರದಿ
ತುತ್ತಿನಾತುರಕೆ ತತ್ವವನು ತೊರೆದಿಹನು
ಕತ್ತೆ ತಾನೆಂದ ಸರ್ವಜ್ಞ

೪೩೬ ಕಂಡವರ ತೆಗಳುವನ ಕಂಡಿಹಳ ಬಿಡದವನ
ಭಂಡ ನೆರೆಯಾಡಿ ಕಾಲ ಕೆದರುವನ
ಕಂಡಿಹರೆ ತೊಲಗು ಸರ್ವಜ್ಞ

೪೩೭ ಅಡೆಯ ಮಾವಿನ ಹಣ್ಣು ಕಡಿದ ಕಬ್ಬಿನ ಗಣಿಕೆ
ಪಡೆದ ಒಡವೆಯನು ಮಡದಿಯನು ಪರರಲ್ಲಿ
ಬಿಡುವವನೆ ಹೆಡ್ಡ ಸರ್ವಜ್ಞ

೪೩೮ ಆಳಾಗ ಬಲ್ಲವನು ಆಳುವನು ಅರಸಾಗಿ
ಆಳಾಗಿ ಬಾಳಲರಿಯದನು ಕಡೆಯಲ್ಲಿ
ಹಾಳಾಗಿ ಹೋಹ ಸರ್ವಜ್ಞ

೪೩೯ ಎಲ್ಲವನು ಅರಿಯುವುದು ಬಲ್ಲವನು ಎನಿಸುವುದು
ನಲ್ಲಳನು ಅರಿತು ಕೂಡುವುದು ಜಗದೊಳಗೆ
ಎಲ್ಲವರಿಗಿಹುದು ಸರ್ವಜ್ಞ

೪೪೦ ಮಾನಾಪಮಾನವನು ಜ್ಞಾನ ತನಗಾದುದನು
ಮಾನಿನಿಯು ಒಲಿದ ರತಿಸುಖವ ಪರರಲ್ಲಿ
ಮಾನಿಸುವನೆಗ್ಗ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಲತಃ ಕೃತಂ ಫಲಂ ಚಲದ್ ಆಪಣಾರ್ಜಿತಂ
ಪ್ರಲಪನಾನ್ ನೇತ್ರಪೀಡಾ ಚ ಮೃತಕಾಯ ನಿಷ್-
ಫಲಿತ ತ್ರಿಕಂ ಹಿ ಸರ್ವಜ್ಞ ೪೩೪

ಪ್ರಸವಿನೀಂ ವಿಕ್ರೀಯ ದಾಸೀಂ ಸಮಾನಯತಿ
ಗ್ರಾಸಾತುರೋ ತತ್ತ್ವಮೇವ ನಿಷ್ಕಾಸಯತಿ
ರಾಸಭಸಮೋ ಹಿ ಸರ್ವಜ್ಞ ೪೩೫

ಪರಪುರುಷ ದೂಷಕಂ ಪರನಾರಿಕಾ ರತಂ
ಪರಿಸರೇ ಭಂಡದುಶ್ಚರಿತೇನ ಕಲಹಿನಂ
ಪರಿಹಾಯ ಸರತು ಸರ್ವಜ್ಞ ೪೩೬

ಪಕ್ವಮಾಮ್ರಂ ಫಲಂ ಚೇಕ್ಷುಖಂಡಂ ಸ್ವಾದು
ಸ್ವಕಮಪಿ ವಿಭೂಷಣಂ ಪತ್ನೀಂ ಚ ನಿಕ್ಷಿಪತಿ
ಮೂರ್ಖಃ ಪರೇಷು ಸರ್ವಜ್ಞ ೪೩೭

ಸೇವಾಗುಣಜ್ಞಶ್ಚ ಭವತಿ ಭೂಶಾಸಕಃ
ಸೇವಾಗುಣೇ ಸುಮೂಢೋ ಜೀವಿತಾಂತೇಽಪಿ
ಸುವಿಪನ್ನ ಏವ ಸರ್ವಜ್ಞ ೪೩೮

ಸರ್ವವಿದುರತ್ವಮಪಿ ಸೂರೀತಿ ಮಾನ್ಯತಾ
ಚಾರುಕಾಂತೇಂಗಿತಜ್ಞೇನ ರತಿರಿತಿ ಜಗತಿ
ಸರ್ವಸಾಧ್ಯಂ ಹಿ ಸರ್ವಜ್ಞ ೪೩೯

ಮಾನಾಪಮಾನಮಥ ಜ್ಞಾನಮಾತ್ಮನಿ ಭವಂ
ಮಾನಿನೀ ಪ್ರೇಮ ರತಿ ಸೌಖ್ಯಮಪ್ಯನ್ಯೇಷು
ತನುತೇಽಜ್ಞ ಏವ ಸರ್ವಜ್ಞ ೪೪೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪೪೧ ನೀರ ಬೊಬ್ಬುಳಿ ನೆಚ್ಚಿ ಸಾರಿ ಕೆಡದಿರು ಮರುಳೆ
ಸಾರಗುಣಿಯಾಗು ನಿಜವ ತಿಳಿ ಸರುವರೊಳು
ಕಾರಣಿಕನಾಗು ಸರ್ವಜ್ಞ

೪೪೨ ಗಂಧವನು ಇಟ್ಟವೋಲಂದದಲಿ ಇರಬೇಕು
ನಿಂದೆ ಕುಂದುಗಳ ತಾಳಿಹನು ಧರಣಿಯಲಿ
ಇಂದುಧರನೆಂದ ಸರ್ವಜ್ಞ

೪೪೩ ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗ ಹೊಡೆ ಮರಳಿ ಕಚ್ಚುವ
ಹೆಡೆ ನಾಗ ನೋಡ ಸರ್ವಜ್ಞ

೪೪೪ ಊರೆಲ್ಲ ನೆಂಟರು ಕೇರಿಯೆಲ್ಲವು ಬಳಗ
ಧಾರುಣಿಯು ಎಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲೊ ಸರ್ವಜ್ಞ

## ೧೮. ಸ್ತ್ರೀ ಸ್ತುತಿ ನಿಂದಾ ಪದ್ಧತಿ

೪೪೫ ಹೆಣ್ಣಿನಿಂದಲಿ ಇಹವು ಹೆಣ್ಣಿನಿಂದಲಿ ಪರವು
ಹೆಣ್ಣಿಂದ ಸಕಲ ಸಂಪದವು ಹೆಣ್ಣೊಲ್ಲ-
ದಣ್ಣಗಳು ಯಾರು ಸರ್ವಜ್ಞ

೪೪೬ ಅಂಬುಧಿಯು ಗಾನವನು ಅಂಬರದ ಕಲಹವನು
ಶಂಭುವಿನ ಮಹಿಮೆ ಸತಿಯರ ಹೃದಯವ-
ನಿಂಬರಿದರಾರು ಸರ್ವಜ್ಞ

೪೪೭ ನಲ್ಲೆಯನು ಒಲ್ಲೆಂಬ ಸೊಲ್ಲು ನಾಲಗೆ ಹೊಲೆಯು
ಬಲ್ಲಿದನು ಶ್ರವಣ ಸಂನ್ಯಾಸಿ ಇವರುಗಳು
ಎಲ್ಲಿ ಉದಿಸಿಹರು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶರಬುದ್ಬುದ್ ಆಶ್ರಯೋ ಶರಧಿಯಾನಂ ಮಾಸ್ತು
ಸಾರಗುಣವಾನ್ಶ್ಚ ಭವ ವಿದ್ಧಿ ಸತ್ಯಂ ಸರ್ವ-
ಕಾರಣಿಕತಾಸ್ತು ಸರ್ವಜ್ಞ ೪೪೧

ಗಂಧಶಿಲಕೇ ಧೃತೇ ಬಂಧುರಂ ತದ್ಭವೇತ್
ನಿಂದಾಂ ಚ ನ್ಯೂನತಾಂ ಸಹತೇ ಧರಣ್ಯಾಂ ನ-
ವೇಂದುಧರನಿಭಃ ಸರ್ವಜ್ಞ ೪೪೨

ವಚನೇಽತಿ ಜಾಗೃತಃ ಸುಚರಿತೇ ಸ್ಖಲತಿ ಚೇತ್
ಉಚಿತಮಿತಿ ಧೃತಲಿಂಗಮಪಿ ಫಣೀ ರೂಪೇಣ
ದಶತಿ ಪರಿವೃತ್ಯ ಸರ್ವಜ್ಞ ೪೪೩

ಗ್ರಾಮಸರ್ಪಂ ಬಂಧುಸಮಮಪಿ ಚ ವೀಥಿಕಾಃ
ಭೂಮ್ಯಾಂ ಚ ಸರ್ಪೇಽಪಿ ಕುಲದೈವಮಿತಿ ಭವತಿ
ಕಮಹಂ ತ್ಯಜಾಮಿ ಸರ್ವಜ್ಞ ೪೪೪

## ೧೮ ಸ್ತ್ರೀ ಸ್ತುತಿ ನಿಂದಾ ಪದ್ಧತಿಃ

ನಾರ್ಯಾಸ್ತಿ ಜಗದತ್ರ ನಾರ್ಯಾ ಪರತ್ರಾಪಿ
ನಾರ್ಯೇವ ಸಕಲ ಸಂಪತ್ಖನಿರ್ ನಾರೀ ನಿ-
ವಾರಿತಾ ಕೇನ ಸರ್ವಜ್ಞ ೪೪೫

ಅಂಬುಧೇರ್ ಗಾನಂ ತಥಾಂಬರೇ ಘರ್ಷಣಾ
ಶಂಭುಮಹಿಮಾ ತಥಾ ಚಾಂಗನಾ ಹೃದಯಮಪಿ
ಸಂಬುಧ್ಯತೇ ನ ಸರ್ವಜ್ಞ ೪೪೬

ಸುಕೃಜಾ ರಮಣೀತಿ ಚೋಕ್ತಿಸ್ತ್ವಸಹ್ಯೈವ
ವಿತ್ತೇಶ ಸಂನ್ಯಾಸಿ ಶ್ರಮಣಾದಿಕಾಶ್ಚ ವದ
ಕುತ್ರೋದಿತಾತ್ರ ಸರ್ವಜ್ಞ ೪೪೭



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೪೮ ಹರಿಜನರು ಮೊದಲಾಗಿ ಸುರಜನರು ಕಡೆಯಾಗಿ
ವರಯೋಗಿ ನಡುವೆ ತಾನಾಗಿ ಮಾಯೆಗೆ
ಹೊರಗಾದರಾರು ಸರ್ವಜ್ಞ

೪೪೯ ಮಾಯೆ ಗೆದ್ದಿಹ ಸೊಲ್ಲು ಬಾಯಿ ಮಾತಲ್ಲವೇ
ಮಾಯೆಯಿಂ ಕಾಯವಾಗಿರಲು ನರಮನುಜ
ಮಾಯೆ ಗೆಲಲುಂಟೆ ಸರ್ವಜ್ಞ

೪೫೦ ನೋಡಿದರೆ ಎರಡೂರು ಕೂಡಿದಾ ಮಧ್ಯದಲಿ
ಮೂಡಿದ ಸ್ಮರನ ಮನೆಯಲ್ಲಿ ಜಗವು ಬಿ-
ದ್ದಾಡುತ್ತಲಿಹುದು ಸರ್ವಜ್ಞ

೪೫೧ ಹರಿಯು ಉರವನು ಮೆಟ್ಟಿ ಹರನ ಶಿರವನು ಏರಿ
ಸರಸಿಜೋದ್ಭವನ ಮೊಗಗೆಡಿಸಿ ಮೀರಿದಳು
ಹಿರಿಯರಿನ್ನಾರು ಸರ್ವಜ್ಞ

೪೫೨ ರುದ್ರ ಕರ್ತನು ತಾನು ಅರ್ಧನಾರಿಯು ಆದ
ಇದ್ದವರೊಳಾರು ಸತಿಯರ ಹೃದಯವನು
ಗೆದ್ದವರಾರು ಸರ್ವಜ್ಞ

೪೫೩ ಬಿಲ್ಲು ಬಲ್ಲಿತು ನಾರಿ ಬಿಲ್ಲಿಂದ ಕಡು ಸಣ್ಣ
ಬಿಲ್ಲನೆ ಮರಳಿ ಎರಗಿಸಿತು ನಾರಿಯಿಂ
ಬಲ್ಲಿದರು ಯಾರು ಸರ್ವಜ್ಞ

೪೫೪ ಉಚ್ಚೆಯಾ ಬಚ್ಚಲವು ತುಚ್ಛವೆಂದೆನಬೇಡ
ಅಚ್ಯುತನು ಬಿದ್ದನಜಬಿದ್ದ ದೇವೇಂದ್ರ-
ನೆಚ್ಚತ್ತು ಬಿದ್ದ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಹರಿಜನಾದ್ ಆರಭ್ಯ ಸುರಜನಾ ಯಾವದಿಹ
ವರಯೋಗಿ ಜನ ಸಹಿತಮಿತಿ ಜಗತಿ ಮಾಯಯಾ
ದೂರತಃ ಕೋಽಸ್ತಿ ಸರ್ವಜ್ಞ ೪೪೮

ಮಾಯಾಜಿನೋಽಸ್ಮೀತಿ ಹೇಯಮಾಣೇ ಹಿ ಸಾ
ಮಾಯಾಭವೇ ಮನುಜಕಾಯೇ ಕಥಂ ಭವಸಿ
ಮಾಯಾಜಿನೋಽತ್ರ ಸರ್ವಜ್ಞ ೪೪೯

ಊರುದ್ವಿತಯ ಮಧ್ಯ ಭೂರಿ ಸಂಧಿಸ್ಥಲೇ
ಸ್ಮರಗೃಹಂ ಜೃಂಭತೇ ಚಿತ್ರಂ ಜಗತ್ ತತ್ರ
ಪರಿಚರತಿ ಪಶ್ಯ ಸರ್ವಜ್ಞ ೪೫೦

ಹರ್ಯ್ಯರಸ್ತ್ವಧಿದಮ್ಯ ಹರಶಿರಶ್ಚಾರುಹ್ಯ
ಸರಸಿಜೋದ್ಭವಮುಖಂ ಸಂಕ್ರಮ್ಯ ಸುವಿಲಸತ್
ನಾರ್ಯಾಃ ಪರೋ ನ ಸರ್ವಜ್ಞ ೪೫೧

ರುದ್ರಸ್ತು ಕರ್ತಾಪಿ ಸೋಽರ್ಧನಾರ್ಯಭವದ್ ಅಹ
ಭದ್ರೇಷು ಶಿಷ್ಟೇಷು ಕಃ ಸತೀ ಹೃದಯಾನಿ
ಭದ್ರಾಣಿ ಜಯತಿ ಸರ್ವಜ್ಞ ೪೫೨

ಬಲವತ್ತರಂ ಧನುರ್ನಾರೀ ಕೃಶೋದರೀ
ಪ್ರೇರಯತಿ ಧನುರೇವ ಸಂಬಧ್ಯ ನಾರ್ಯಾತಿ-
ವೀರೋಽತ್ರ ಕೋ ನು ಸರ್ವಜ್ಞ ೪೫೩

ಉಚ್ಚಲನ್ ಮೂತ್ರಭೂಃ ತುಚ್ಛೇತಿ ಮಾ ನಿಗದ
ಅಚ್ಯುತೋಽಪಿ ಚ್ಯುತಃ ಸಹಸುತಶ್ಚೇಂದ್ರೋಽಪಿ
ಪ್ರಚ್ಯುತಃ ಪ್ರೇಕ್ಷ್ಯ ಸರ್ವಜ್ಞ ೪೫೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೫೫ ಊರಿದ ಚೇಳಿನಿಂದೇರಿದ ಬೇನೆಯಲಿ
ಮೂರು ಜಗವೆಲ್ಲ ಹೊರಳುತಿಹುದಾ ನೋವ
ಮೀರಿದವರಿಲ್ಲ ಸರ್ವಜ್ಞ

೪೫೬ ಅಂಗನೆಯು ಒಲಿಯುವುದು ಬಂಗಾರ ದೊರೆಯುವುದು
ಸಂಗ್ರಾಮದೊಳಗೆ ಗೆಲುವುದು ಇವು ಮೂರು
ಸಂಗಯ್ಯನೊಲುಮೆ ಸರ್ವಜ್ಞ

೪೫೭ ಚಿಕ್ಕಂದಿನಲಿ ಹೆಣ್ಣು ಹೆಕ್ಕೆಂಜಲಂತಿಹುದು
ಸೊಕ್ಕಿ ಜವ್ವನವು ನೆರೆದಿಹರೆ ಆ ಹೆಣ್ಣು
ಸಕ್ಕರೆಯು ತಾನೆ ಸರ್ವಜ್ಞ

೪೫೮ ಹೆಣ್ಣಿನಾ ಗುಣವರಿಯೆ ಕಣ್ಣಿಗದು ಕಾಂಬುವದೆ
ಸುಣ್ಣದ ಕಲ್ಲಿನೊಳಗಡಗಿ ಸುಡುಗಿಚ್ಚು
ತಣ್ಣಗಿದ್ದಂತೆ ಸರ್ವಜ್ಞ

೪೫೯ ನಂಬಿದಂತಿರಬೇಕು ನಂಬದಲೆ ಇರಬೇಕು
ಇಂಬರಿದು ಎಚ್ಚರಿರಬೇಕು ಹೆಣ್ಣನು
ನಂಬಿದವ ಕೆಟ್ಟ ಸರ್ವಜ್ಞ

೪೬೦ ಹೆಂಡರಾ ಕೌತುಕವು ಗಂಡರಿಗೆ ತಿಳಿವುದೇ
ಗುಂಡಿ ನೀರೊಳಗೆ ಕಿರಿಮೀನ ಹೆಜ್ಜೆಯ
ಕಂಡಾತನಾರು ಸರ್ವಜ್ಞ

೪೬೧ ನಾರಿ ಪರರುಪಕಾರಿ ನಾರಿ ಸ್ವರ್ಗಕೆ ದಾರಿ
ನಾರಿ ಸಕಲರಿಗೆ ಹಿತಕಾರಿ ಮುನಿದರೆ
ನಾರಿಯೇ ಮಾರಿ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಷ್ಟಮಿವ ವೃಶ್ಚಿಕೈರ್ ದುಷ್ಟವಿಷ ರೋಗೇಣ
ಕ್ಲಿಷ್ಟಂ ಜಗತ್‌ತ್ರಯಂ ತದ್‌ರುಜಾ ಮುಕ್ತಂ ವಿ-
ಶಿಷ್ಟಂ ತು ನೈವ ಸರ್ವಜ್ಞ ೪೫೫

ರಮಣೀಜನ್ಯೆ ರತಿರ್ ಹೇಮ ಸಂಪ್ರಾಪ್ತಿರಪಿ
ಸುಮಹತ್ ಜಯಶ್ಚ ಸಂಗ್ರಾಮೇ ತ್ರಿತಯಮಿದಂ
ಸಂಗೇಶ ರುಚಿಃ ಸರ್ವಜ್ಞ ೪೫೬

ಬಾಲ್ಯೇ ತು ಬಾಲಿಕಾ ಮಲಕಲಿಲ ಜಾಲಿಕಾ
ಲೀಲಯಾ ಯೌವನಂ ತ್ವಧಿರುಹ್ಯ ಸೈವ ಕಿಲ
ಮಾಲತೀ ದಾಮ ಸರ್ವಜ್ಞ ೪೫೭

ಜ್ಞಾತಮಪಿ ಸ್ತ್ರೀಗುಣಂ ನೇತ್ರೈರ್ ನ ಪಾರ್ಯತೇ
ಶೀತಲತನುಃ ಕರ್ಕರಾಶ್ಮಗುಪ್ತೋ ದಹತಿ
ಹುತಭುಗ್ ಯಥೇಹ ಸರ್ವಜ್ಞ ೪೫೮

ವಿಶ್ವಸ್ತ ಇವ ಭವೇತ್ ಮಾಸ್ತು ವಿಶ್ವಾಸೋಽಪಿ
ದೇಶಕಾಲಾನುಗತಜಾಗೃತೋಽಥ ಸ್ತ್ರೀಷು
ವಿಶ್ವಸಿಹಿ ಮೈವ ಸರ್ವಜ್ಞ ೪೫೯

ಸ್ತ್ರೈಣಂ ಕುತೂಹಲಂ ಜಾನಾತಿ ಕಿಂ ಪುಮಾನ್
ಮೀನಪದ ಚಿಹ್ನಾಂಕನಂ ಗರ್ತಜಲ ಕೃತಂ
ಕೇನ ಶಕ್ಯಂ ಹಿ ಸರ್ವಜ್ಞ ೪೬೦

ನಾರ್ಯೋಪಕಾರೋಽತ್ರ ನಾರೀ ತ್ರಿದಿವಪಥಃ
ನಾರೀ ಸಕಲ ಲೋಕ ಹಿತಕರೀ ಕುಪಿತಾ ತು
ಮಾರಿಕಾ ಸೈವ ಸರ್ವಜ್ಞ ೪೬೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೧೯ ದಾಂಪತ್ಯ ಪದ್ಧತಿ

೪೬೨ ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಾಗಿ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ

೪೬೩ ಮನಬಂದ ಹೆಣ್ಣನ್ನು ವಿನಯದಲಿ ಕರೆದಿತ್ತು
ಮನಮುಟ್ಟಿ ಬಾಳ್ವೆ ಮಾಡಿದರೆ ಅಮೃತದ
ಕೆನೆಯು ಸವಿದಂತೆ ಸರ್ವಜ್ಞ

೪೬೪ ಅಂಗನೆಯು ಗುಣಿಯಾಗಿ ಅಂಗಳದಿ ಹೊರಸಾಗಿ
ತಂಗಾಳಿ ಜೊನ್ನದಿರುಳಾಗಿ ಬೇಸಗೆಯು
ಹಿಂಗದೇ ಇರಲಿ ಸರ್ವಜ್ಞ

೪೬೫ ಲಿಂಗವಿಲ್ಲದ ಪೂಜೆ ಗಂಗೆಯಿಲ್ಲದ ತೋಟ
ಹೆಂಗಳಿಲ್ಲದನ ಮನೆವಾರ್ತೆ ಅನುದಿನವು
ಭಂಗ ಕಾಣಯ್ಯ ಸರ್ವಜ್ಞ

೪೬೬ ಮಕ್ಕಳಿಲ್ಲದ ಮನೆಯು ಹಕ್ಕಿಯಿಲ್ಲದ ವನವು
ದಿಕ್ಕಿಲ್ಲದವನ ಸಂಸಾರ ಕಳಸು ಮನೆ
ಹೊಕ್ಕು ಹೋದಂತೆ ಸರ್ವಜ್ಞ

೪೬೭ ರೊಕ್ಕವಿಲ್ಲದ ಬಾಳ್ವೆ ಮಕ್ಕಳಿಲ್ಲದ ಮನೆಯು
ಅಕ್ಕರವಿರದ ತವರೂರು ಇವು ಮೂರು
ದುಃಖ ಕಾಣಯ್ಯ ಸರ್ವಜ್ಞ

೪೬೮ ಒಪ್ಪುಳ್ಳ ಹೆಣ್ಣಿನಲಿ ತಪ್ಪು ಸಾಧಿಪನೆಗ್ಗ
ಕರ್ಪುರದ ಮೇಲೆ ಕಸಸಿರಲು ಅದನೊಬ್ಬ-
ರೊಪ್ಪದವರುಂಟೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೧೯ ದಾಂಪತ್ಯ ಪದ್ಧತಿಃ

ಭವನಂ ಸುಖೋಷ್ಣಕಂ ದ್ರವಿಣಂ ಯಥಾ ವ್ಯಯಃ
ಭವತಿ ಚೇತ್ ಇಂಗಿತಜ್ಞಾ ಸತೀ ಸ್ವರ್ಗೋಽಗ್ನಿ-
ಕವಲಮೇವಾಸ್ತು ಸರ್ವಜ್ಞ ೪೬೨

ಮನಸಾ ವೃತಾಂ ವಧೂಂ ವಿನಯೇನ ಚಾನೀಯ
ಮನಸಾ ತಯಾ ಜೀವನೇ ಕೃತೇ ಭುವ್ಯಮೃತ-
ಫೇನರುಚಿರೇವ ಸರ್ವಜ್ಞ ೪೬೩

ಅಂಗನಾ ಗುಣಯುತಾ ಪ್ರಾಂಗಣೇ ಶಯನಿಕಾ
ಸಂಗತ ಜ್ಯೋತ್ಸ್ನಾನಿಲಕ್ಷಪಾ ವೈಶಾಖ-
ಲಂಘನಂ ಮಾಸ್ತು ಸರ್ವಜ್ಞ ೪೬೪

ಲಿಂಗಂ ವಿನಾರ್ಚನಂ ಗಂಗಾಂ ವಿನಾ ವನಂ
ಅಂಗನಾ ಹೀನಸ್ಯ ಜೀವನಂ ಪ್ರತಿದಿನಂ
ಭಂಗಂ ಭುನಕ್ತಿ ಸರ್ವಜ್ಞ ೪೬೫

ಶಿಶುಕಹೀನಂ ಗೃಹಂ ಪಕ್ಷಿಶೂನ್ಯಂ ವನಂ
ಅಶರಣಸ್ಯ ಚ ಜೀವನಂ ತ್ರಯಂ ಚೌರ್ಯಹತ-
ವೇಶ್ಮ ಸದೃಶಂ ಹಿ ಸರ್ವಜ್ಞ ೪೬೬

ಧನಹೀನ ಜೀವನಂ ತನುಜಹೀನಂ ಗೃಹಂ
ಪ್ರೀಣಯತ್ ಜನಹೀನ ಮಾತೃಕುಲಮೇತಾನಿ
ಹೀನತ್ರಿಕಂ ಹಿ ಸರ್ವಜ್ಞ ೪೬೭

ಶೀಲವತ್ಯಾಂ ಸ್ಖಲಿತಮಾಲಿಖತಿ ಮೂಢಧೀಃ
ಮಲಲಗ್ನಮಿತಿ ಕೋ ನು ಕರ್ಪೂರಂ ತ್ಯಜತಿ ನಿಷ್-
ಫಲಮಿದಮಿತೀಹ ಸರ್ವಜ್ಞ ೪೬೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೨೦. ವಿಷಮ ದಾಂಪತ್ಯ

೪೭೯ ಬಾರದಾ ಹೆಣ್ಣಿಂಗೆ ಹೋರುವನು ಕಡು ಹೆಡ್ಡ
ದೂರದ ಹೆಣಕೆ ನರಿ ನೆಗೆದು ಕೂಗಿ ಬಾ-
ಯಾರಿ ಸತ್ತಂತೆ ಸರ್ವಜ್ಞ

೪೮೦ ವಿನಯವಿಲ್ಲದಳಲ್ಲಿ ಮನವನಿಕ್ಕುವನೆಗ್ಗ
ಘನವಪ್ಪ ಬೂರ ಫಲಕಾಗಿ ಹಕ್ಕಿಗಳು
ಜಿನುಗಿ ಸತ್ತಂತೆ ಸರ್ವಜ್ಞ

೪೮೧ ಸತ್ತವರ ಬಾಯೊಳಗೆ ಒತ್ತಿ ನೀರೆರೆದಂತೆ
ಚಿತ್ತವಿಲ್ಲದವಳ ಸಂಸಾರ ಶುನಿ ಹೆಣನ
ಹತ್ತಿ ತಿಂದಂತೆ ಸರ್ವಜ್ಞ

೪೮೨ ಓತಿರದ ಹೆಣ್ಣಿನೊಡ ಮಾತನಾಡುವನೆಗ್ಗ
ಹೂತ ಮಲ್ಲಿಗೆಯ ವನದೊಳಗೆ ತುರುಬಿಲ್ಲ-
ದಾತ ಸುಳಿದಂತೆ ಸರ್ವಜ್ಞ

೪೮೩ ಒಲ್ಲದವಳೊಡನಾಡಿ ಚೆಲ್ಲವಾಡುವನೆಗ್ಗ
ಕಲ್ಲ ಪುತ್ತಳಿಯ ಬಿಗಿದಪ್ಪಿ ಚುಂಬಿಸಲು
ಹಲ್ಲು ಹೋದಂತೆ ಸರ್ವಜ್ಞ

೪೮೪ ಚಿತ್ತವಿಲ್ಲದ ಹೆಣ್ಣಿಗರ್ತಿ ಮಾಡುವನೆಗ್ಗ
ಬತ್ತಿದ ಕೆರೆಗೆ ಗಿಣಿ ಹಾರಿ ಬಾಯಾರಿ
ಸತ್ತು ಹೋದಂತೆ ಸರ್ವಜ್ಞ

೪೮೫ ಮೊಸರು ಇಲ್ಲದ ಊಟ ಕೆಸರು ಇಲ್ಲದ ಗದ್ದೆ
ಹಸನಿಲ್ಲದವಳ ಮನೆವಾರ್ತೆ ತಿಪ್ಪೆಯ
ಕಸದಂತೆ ಇಹುದು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ೨೦ ವಿಷಮದಾಂಪತ್ಯ ಪದ್ಧತಿಃ

ಪ್ರೀತಿ ಹೀನಾಯೈ ಸುಕಾತುರೋ ಮೂಢಧೀಃ
ಪೃಥುದೂರ ಕುಣಪಾಯ ಜಂಬುಕಃ ಸಂಪ್ಲುತ್ಯ
ಪತತಿ ತೃಷಯೈವ ಸರ್ವಜ್ಞ ೪೧೯

ವಿನಯ ಹೀನಸ್ತ್ರಿಯಾಂ ತನುತೇ ಮನೋಽಜ್ಞಸ್ತು
ಘನ ಶಾಲ್ಮಲೀ ವೃಕ್ಷ ಫಲಗರ್ಧ ಪಕ್ಷಿಣಃ
ಕ್ಷೀಣಾ ಕ್ಷುಧೈವ ಸರ್ವಜ್ಞ ೪೨೦

ಮೃತಕಾನನೇ ಜಲಂ ಸಂತರ್ಪಿತಂ ಯಥಾ
ಚಿತ್ತ ಶೂನ್ಯಸ್ತ್ರಿಯಾ ಸಂಸಾರಮಪಿ ಚ ಶುನಿ-
ರತ್ತಿ ಕುಣಪಮಿವ ಸರ್ವಜ್ಞ ೪೨೧

ಲಲನಯಾ ವಿರಸಯಾ ಸಂಲಪತಿ ಮೂರ್ಖೇ ತು
ಮಲ್ಲಿಕಾ ಸುಮವಿಕಸಿತೇ ವನೇ ಖರ್ವಾಟ-
ತಲ್ಲಜ ಗತಿರ್ ಹಿ ಸರ್ವಜ್ಞ ೪೨೨

ಪ್ರಣಯ ಹೀನಾಂ ಯಸ್ತು ವೃಣುತೇ ಸ ಮುಖೋಽಸ್ತಿ
ಘನಶಿಲಾ ಮೂರ್ತಿಂ ಸುಪರಿರಭ್ಯ ಪರಿಚುಂಬ್ಯ
ಲೂನರದನ ಇವ ಸರ್ವಜ್ಞ ೪೨೩

ಚಿತ್ತ ಶೂನ್ಯ ಸ್ತ್ರಿಯಾಂ ರಕ್ತಸ್ತು ಮೂರ್ಖೋಽಸ್ತಿ
ಲುಪ್ತ ನೀರೇ ಸರಸಿ ಕೀರಸ್ತೃಷಾರ್ತೋ ನಿ-
ಪತ್ಯ ಮೃತಿಮೇತಿ ಸರ್ವಜ್ಞ ೪೨೪

ದಧಿಹೀನ ಭೋಜನಾನ್ಮುದಹೀನ ಭೂಮಿರಪಿ
ಸದನ ನಿರ್ವಾಹಣಮಶುಚಿಹಸ್ತ ನಾರ್ಯಾ ನಿ-
ಷಿದ್ಧ ಮಲಮಿವ ಹಿ ಸರ್ವಜ್ಞ ೪೨೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೭೬ ಸೋರುವಾ ಮನೆಯಿಂದ ದಾರಿಯಾ ಮರ ಲೇಸು
ಹೋರುವ ಸತಿಯು ಬದುಕಿಂದ ಹೊಡೆದೊಯ್ವ
ಮಾರಿಯೇ ಲೇಸು ಸರ್ವಜ್ಞ

೪೭೭ ಚುಚ್ಚುವಾ ಕೆರದಿಂದ ಕಚ್ಚುವಾ ಶುನಿ ಲೇಸು
ನಿಚ್ಚಲು ಉಲಿವ ಸತಿಯಿಂದ ಉರಿದೇಳ್ವ
ಕಿಚ್ಚು ಲೇಸೆಂದ ಸರ್ವಜ್ಞ

೪೭೮ ನೆರೆ ಬಂದ ಮುದುಕಂಗೆ ಭರದ ಜವ್ವನೆ ಏಕೆ
ಕರಗಿದಾ ತುಪ್ಪ ಹೆರುವಂತೆ ಜವ್ವನವು
ತಿರುಗಿ ಬಂದಿಹುದೆ ಸರ್ವಜ್ಞ

## ೨೧ ಜಾರಜಾರೆಯರ ಪದ್ಧತಿ

೪೭೯ ನಾರು ಬೇರಿಕ್ಕಿದರೆ ನಾರಿಯರು ಒಲಿಯುವರೆ
ನಾರಿಯರು ಜಗವು ಒಲಿವರೆ ಹೊನ್ನಿನ
ಬೇರನಿಕ್ಕೆಂದ ಸರ್ವಜ್ಞ

೪೮೦ ಹಣವ ಕಂಡಾಕ್ಷಣವೆ ಗುಣವಂತೆಯಾಗುವಳು
ಹಣ ಹೋದ ವಿಟನು ಬಂದರೆ ಸೂಳೆಗೆ
ಹೆಣನ ಕಂಡಂತೆ ಸರ್ವಜ್ಞ

೪೮೧ ಹಣವು ಹರೆಯಿರುವನಕ ಗಣಗಣಿಸುವಳು ಸೂಳೆ
ಹಣವು ಹವೆ ಹೋದ ಮರುದಿನ ಹಾಳೂರು
ಶುನಕನಂತಿಹಳು ಸರ್ವಜ್ಞ

೪೮೨ ಬೆಚ್ಚನಾ ಮನೆಯಾಗಿ ಮೆಚ್ಚಿದಾ ಹೆಣ್ಣಾಗಿ
ವೆಚ್ಚಕ್ಕೆ ನೂರು ಹಣವಾದರಾ ಕೂಟ
ನಿಚ್ಚಲೂ ಬೇಕು ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಶೋಕಹತ ಸದನತೋ ಸುಖಕರಂ ಪಥಿ ತರುಃ
ವಾಕ್‌ಕಲಹ ನಿರತ ಪತ್ನೀ ಸಂಗತಃ ಕ್ರೂರ-
ಡಾಕಿನೀ ಸಾಧು ಸರ್ವಜ್ಞ ೪೭೬

ತೋದಕೋಪಾನಹೋ ವೇಧಕ ಶುನಿರ್ ವರಂ
ನದತಿ ನಿತ್ಯಂ ಸತೀ ಚೇತ್ ತತೋ ದಹನಪ್ರ-
ದಾಹೋ ವರಂ ಹಿ ಸರ್ವಜ್ಞ ೪೭೭

ಪಲಿತಾಯು ವೃದ್ಧಾಯು ಲಲಿತ ಯುವತೀ ಚ ಕಾ
ಗಲಿತ ಘೃತಮಪಿ ಪುನರ್ ಘಟತೀವ ಯೌವನಂ
ಮಿಲತಿ ಪುನರಪಿ ನ ಸರ್ವಜ್ಞ ೪೭೮

೨೧ ಜಾರಜಾರಿಣೀ ಪದ್ಧತಿಃ

ನೀರಸ ವಿತರಣೇ ನ ನಾರ್ಯಃ ಪ್ರಸೀದಂತಿ
ನಾರ್ಯೋ ಜಗತ್ ಚ ಪ್ರಸೀದಂತಿ ಯದಿ ಹೇಮ-
ಗಿರಿರರ್ಪಿತೋಽಸ್ತಿ ಸರ್ವಜ್ಞ ೪೭೯

ಧನದರ್ಶನೇ ಸಪದಿ ಗುಣಯುತಾ ಸಾ ಭವತಿ
ಧನಹೀನ ವಿಟಪುರುಷ ದರ್ಶನೇ ಜಾರಿಣೀ
ಕುಣಪಮಿವ ಹಸತಿ ಸರ್ವಜ್ಞ ೪೮೦

ಧನ ಯೌವನೇ ಭವತಿ ಕನಕನತಿ ಜಾರಿಣೀ
ಧನ ಯೌವನಾಪಯಾನೇ ಸಪದಿ ವಿಜನಭೂ-
ಶುನಕ ಇವ ಸ್ವೈವ ಸರ್ವಜ್ಞ ೪೮೧

ಭವನಂ ಸುಖೋಷ್ಣಭೂಃ ಯುವತೀ ಮನೋರಮಾ
ದ್ರವಿಣೇ ಚ ಶತಮಿತಂ ಭವತಿ ದೈನಂದಿನಂ
ಭವತು ರತಿರೇವ ಸರ್ವಜ್ಞ ೪೮೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


೪೮೩ ಚೊಕ್ಕದವಳರೆ ನೋಟ ಸಕ್ಕರೆಯು ಸವಿದಂತೆ
ಚೊಕ್ಕವಿಲ್ಲದಳ ಬಿರಿ ನೋಟ ಹುಡಿ ಮಣ್ಣ
ಮುಕ್ಕಿದಂತಿಹುದು ಸರ್ವಜ್ಞ

೪೮೪ ಆಕೆಯನು ಕಂಡು ಮನೆಯಾಕೆಯನು ಮರೆದರೆ
ಹಾಕಿದಾ ಮಂಕೆ ಹರಿದಂತೆ ಮನೆಯೊಳಿ-
ದ್ದಾಕೆ ತಾ ಕೆಡುಗು ಸರ್ವಜ್ಞ

೪೮೫ ದಾಸಿಯನು ಹೋಗುವಗೆ ವೀಸ ಹತ್ತದು ಕೈಗೆ
ಹೇಸಿ ತೊಲಗುವಳು ಜಯಲಕ್ಷ್ಮಿ ಆಯುಷ್ಯ
ನಾಶವಾಗುವುದು ಸರ್ವಜ್ಞ

೪೮೬ ಕೋತಿಗೇ ಮತಿಯಿಲ್ಲ ಮಾತಿಗೇ ಕೊನೆಯಿಲ್ಲ
ಸೋತು ಹೋದವಗೆ ಬಲವಿಲ್ಲ ಸೂಳೆಗೆ
ನೀತಿಯೇ ಇಲ್ಲ ಸರ್ವಜ್ಞ

೪೮೭ ಬಡವನ ಹೆಂಡತಿಯು ಕಡು ಚೆಲುವೆಯಾಗಿಹರೆ
ನಡು ಬೀದಿಯೊಳಗೆ ದವನವನು ಬಿತ್ತಲು
ಮುಡಿಯುದವರಾರು ಸರ್ವಜ್ಞ

೪೮೮ ಒಕ್ಕಲಿಗೆ ಊರಾಸೆ ಮಕ್ಕಳಿಗೆ ಮನೆಯಾಸೆ
ಜಕ್ಕವಕ್ಕಿಗೆ ಕೊಳದಾಸೆ ಸೂಳೆಗೆ
ರೊಕ್ಕದಾ ಆಸೆ ಸರ್ವಜ್ಞ

೪೮೯ ರತಿಕಲೆಯೊಳತಿ ಚದುರೆ ಅತಿಮಿತಿಯು ಮಾತಿನೊಳು
ಖತಿಗಳೆದ ಮೊಗವು ಸೊಬಗಿನ ಸುದತಿ ಕಂ-
ಡತಿ ಬಯಸದಿಹರೆ ಸರ್ವಜ್ಞ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಶುಚಿತನು ಕಟಾಕ್ಷಸಸ್ತು ರಚಿತ ಶರ್ಕರ ರುಚಿಃ
ಶುಚಿಹೀನ ತನ್ವ್ಯಾಃ ವಿವೃತ ದೃಷ್ಟಿರಪಿ ಧೂಲಿ-
ನಿಚಯ ಕವಲಮಿವ ಸರ್ವಜ್ಞ ೪೮೩

ಅನ್ಯಾಂ ಸುಪರಿವೀಕ್ಷ್ಯ ಸ್ವೀಯಾಂ ನ ಚೇತ್ ಸ್ಮರಸಿ
ಭಿಂದ್ಯಾತ್ ಯಥಾ ಬದ್ಧ ರಜ್ಜುರಿಹ ಗೃಹಸತೀ
ಸ್ವೀಯಾ ನಿಪತತಿ ಸರ್ವಜ್ಞ ೪೮೪

ದಾಸೀ ರತಸ್ಯ ವಸು ಲೇಶಮಪ್ಯಸ್ಥಿರಂ
ಹಾಸ್ಯಾಸ್ಪದಮಿವ ಜಯಲಕ್ಷ್ಮೀ ಜಹಾತ್ಯಾಯುರ್
ನಾಶೋಽಪಿ ತಸ್ಯ ಸರ್ವಜ್ಞ ೪೮೫

ಕಪಿಷು ಸುಮತಿರ್ನೈವ ಜಲ್ಪನೇಽನೃತಂ ನೈವ
ಸುಪರಿಭೂತಸ್ಯ ಚ ಬಲಂ ನೈವ ವೇಶ್ಯಾಸ್ವ-
ಪಾಪನೀತಿರ್ ನ ಸರ್ವಜ್ಞ ೪೮೬

ಧನಹೀನ ಜನವಧೂಃ ಕನಕಾಂಗಿನೀ ಚ ಯದಿ
ಜನನಿಬಿಡ ವೀಥೀಷು ತಾಂ ಮಾಲಿಕಾಂ ಯಥಾ
ಕೋ ನ ರಮತೇಽತ್ರ ಸರ್ವಜ್ಞ ೪೮೭

ಓಕಸಿ ಗೃಹಸ್ಥಸ್ಯ [1]ಪಾಕೋ ಗೃಹೇ ರುಚಿಃ
ಚಕ್ರವಾಕೋಽಪಿ ಸರಸೀರುಚಿರ್ ವೇಃಶ್ಯಾ ತು
